ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 12 ಬುಧವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 204 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರೇಪ್‌ಗಳಂತಹ ಘೋರ ಅಪರಾಧಗಳಿಗೆ ಪೊಲೀಸ್ ಕಮಿಷನರ್ ಹೊಣೆ!

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

- ಮೈಸೂರು ಡ್ರಗ್ಸ್ ಮುಕ್ತ ಜಿಲ್ಲೆಯಾಗಬೇಕು
- ಅಪರಾಧ ಪ್ರಕರಣ ಹೆಚ್ಚಾದರೆ ಪೊಲೀಸ್ ಅಧಿಕಾರಿಗಳೇ ಜವಾಬ್ದಾರರು
- ರೌಡಿಗಳ ಪರೇಡ್ ಮಾಡಿ, ಎಚ್ಚರಿಕೆ ನೀಡಬೇಕು
- ಮಂಗಳೂರು ಬದಲಾವಣೆ ಇಲ್ಲೂ ಆಗಬೇಕು
- ಪೊಲೀಸರ ಅರಿವಿಗೆ ಬಾರದೇ ಯಾವ ಅಪರಾಧಗಳು ನಡೆಯಲು ಸಾಧ್ಯವಿಲ್ಲ!



ಜಿ.ಟಿ.ದೇವೇಗೌಡ ಅವರು ನಮ್ಮ ಕ್ಷೇತ್ರದವರು. ಇವರೂ ಸೇರಿದಂತೆ ಯಾರನ್ನು ನಾನು ಕಾಂಗ್ರೆಸ್ ಪಕ್ಷಕ್ಕೆ ಬನ್ನಿ ಎಂದು ಕರೆಯುವುದಿಲ್ಲ. ಯಾರೇ ಪಕ್ಷಕ್ಕೆ ಬಂದರೂ ಏಕೆ ಬಂದಿದ್ದೀರ ಎಂದು ಆಕ್ಷೇಪಿಸುವುದೂ ಇಲ್ಲ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೈಸೂರು, ನ.11(ಬಿಎಲ್‌ಯು)– ಮೈಸೂರಿನಲ್ಲಿ ರೇಪ್‌ನಂತಹ ಘೋರ ಅಪರಾಧ ಪ್ರಕರಣಗಳು ನಡೆದರೆ ಪೊಲೀಸ್ ಕಮಿಷನರ್ ಅವರನ್ನೆ ಹೊಣೆಗಾರರನ್ನಾಗಿ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇತ್ತೀಚೆಗೆ ಡ್ರಗ್ಸ್ ಜಾಲ ದೊಡ್ಡದಾಗಿದೆ. ವಿದ್ಯಾರ್ಥಿಗಳು ಹಾಗೂ ಯುವಕರು ಇದಕ್ಕೆ ಬಲಿಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಗತ್ಯ ಕ್ರಮ ಕೈಗೊಂಡು ಮೈಸೂರು ಜಿಲ್ಲೆಯನ್ನು ಡ್ರಗ್ಸ್ ಮುಕ್ತ ಜಿಲ್ಲೆಯಾಗಿ ಮಾಡಬೇಕು ಎಂದು ಕಟ್ಟಾಜ್ಞೆ ಮಾಡಿದ್ದೇನೆ ಎಂದರು. ಪೊಲೀಸ್ ಅಧಿಕಾರಿಗಳ ಅರಿವಿಗೆ ಬಾರದೆ ಸಂಘಟಿತ ಅಪರಾಧಗಳು ನಡೆಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅಪರಾಧ ಪ್ರಮಾಣ ಹೆಚ್ಚಾದರೆ ಪೊಲೀಸ್ ಅಧಿಕಾರಿಗಳೇ ಹೊಣೆಯಾಗುತ್ತಾರೆ. ಕಳೆದ ವರ್ಷಕ್ಕಿಂತ ಈ ವರ್ಷ ಅಪರಾಧ ಪ್ರಕರಣಗಳ ಸಂಖ್ಯೆ ಕಡಿಮೆ ಆಗಲೇಬೇಕು ಎಂದು ಎಚ್ಚರಿಕೆ ನೀಡಿದರು.

ರೌಡಿಗಳು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಾ ಜನರನ್ನು ಬೆದರಿಸುತ್ತಿರುವ ಬಗ್ಗೆ ದೂರು ಬಂದಿದೆ. ■6ನೇ ಪುಟಕ್ಕೆ

ಮೈಸೂರಲ್ಲಿ ಫ್ಲೈಓವರ್ ಬಗ್ಗೆ ತೀರ್ಮಾನಿಸಿಲ್ಲ

- ಸಚಿವ ಸಂಪುಟದಲ್ಲಿ ಸಾಧಕ–ಬಾಧಕ ಕುರಿತು ಚರ್ಚೆ
- ಎರಡು ವರ್ಷದೊಳಗೆ ವೈಟ್ ಟ್ಯಾಪಿಂಗ್ ಪೂರ್ಣ
- ಗುಣಮಟ್ಟದ ಪರಿಶೀಲನೆಗೆ ಡಿಸಿ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ
- ಕೇಂದ್ರ ಸ್ಥಾನದಲ್ಲಿಲ್ಲದ ಅಧಿಕಾರಿಗಳ ಬಗ್ಗೆ ವರದಿಗೆ ಸೂಚನೆ

ಮೈಸೂರು, ನ.11(ಬಿಎಲ್‌ಯು)– ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಫ್ಲೈಓವರ್ ನಿರ್ಮಾಣ ಕುರಿತಂತೆ ಸರ್ಕಾರ ಇನ್ನು ಅಂತಿಮ ನಿರ್ಣಯ ಕೈಗೊಂಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಫ್ಲೈ ಓವರ್ ನಿರ್ಮಾಣದಿಂದ ನೂರಾರು ಮರಗಳು ನಾಶವಾಗುತ್ತವೆ, ಅಕ್ಕ ಪಕ್ಕದಲ್ಲಿರುವ ಪಾರಂಪರಿಕ ಕಟ್ಟಡಗಳು ಮರೆಯಾಗುತ್ತವೆ ಎಂದು ಕೆಲವರು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ಮನೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ಲೈ ಓವರ್ ನಿರ್ಮಾಣ ಮಾಡುವ ವಿಚಾರ ಸಚಿವ ಸಂಪುಟದ ಮುಂದೆ ಬಂದ ಸಂದರ್ಭದಲ್ಲಿ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಮಾಡಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್: ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನೆಲಸಮ ಮಾಡಿ ಹೊಸದಾಗಿ ನಿರ್ಮಾಣ ಮಾಡಲು ಆದೇಶ ನೀಡಿದ್ದೆ. ಆದರೆ ಈ ವಿಚಾರ ಈಗ ಸುಪ್ರಿಂ ಕೋರ್ಟ್‌ನಲ್ಲಿದೆ. ನ್ಯಾಯಾಲಯದಿಂದ ನೇಮಕಗೊಂಡ ಟೆಕ್ನಿಕಲ್ ಕಮಿಟಿ ಈಗಾಗಲೇ ಈ ಎರಡು ಸ್ಥಳಕ್ಕೂ ಭೇಟಿ ನೀಡಿ ಮಾಹಿತಿ ಪಡೆದಿದೆ. ■6ನೇ ಪುಟಕ್ಕೆ



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ತುರ್ತಾಗಿ ನಮಗೆ ಮಾತ್.... ಮಾತಿನ ಕನ್ನಡ ಬೇಕಿದೆ ■ ಪುಟ–4

ಸ್ಫೋಟಕ್ಕೂ ಮುನ್ನ 3 ಗಂಟೆ ಕಾರು ಪಾರ್ಕಿಂಗ್!

ದೆಹಲಿ ಸ್ಫೋಟ ಪ್ರಕರಣ

ನವದೆಹಲಿ, ನ.11– ದೆಹಲಿಯ ಐತಿಹಾಸಿಕ ಕೆಂಪು ಕೋಟೆ ಬಳಿ ಸಂಭವಿಸಿದ ಕಾರು ಸ್ಫೋಟ ಘಟನೆ ಕುರಿತು ದೆಹಲಿ ಪೊಲೀಸರು ಮತ್ತು ಭದ್ರತಾ ಸಂಸ್ಥೆಗಳು ಮೂರು ನಿರ್ಣಾಯಕ ಆಯಾಮಗಳಲ್ಲಿ ತನಿಖೆ ಚುರುಕುಗೊಳಿಸಿವೆ. ಶಂಕಿತರ ಚಲನವಲನಗಳು, ಫರಿದಾಬಾದ್‌ನ ವಿಶ್ವವಿದ್ಯಾಲಯವೊಂದರ ಶಂಕಿತರ ಜಾಲ ಮತ್ತು ಘಟನೆಯಲ್ಲಿ ಬಳಸಲಾದ ಸ್ಫೋಟಕದ ಸ್ವರೂಪಗಳ ಮೇಲೆ ತಮ್ಮ ತನಿಖೆ ಕೇಂದ್ರೀಕರಿಸಿವೆ.

ಮೂರು ಗಂಟೆ ಕಾರು ಪಾರ್ಕಿಂಗ್: ಡಾ. ಉಮರ್ ಚಾಲನೆ ಮಾಡುತ್ತಿದ್ದ ಐ20 ಕಾರ್ ಕೆಂಪು ಕೋಟೆ ಪಾರ್ಕಿಂಗ್ ಪ್ರದೇಶದಲ್ಲಿ ಮೂರು ಗಂಟೆಗಳ ಕಾಲ ನಿಂತಿದ್ದರ ಬಗ್ಗೆ ಮಹತ್ವದ ತನಿಖೆ ನಡೆಸಲಾಗುತ್ತಿದೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದಾಗ ಕಾರು ಸ್ಫೋಟಿಸಲು ಸಂಚು ರೂಪಿಸಲಾಗಿತ್ತೇ ಎಂಬುದರ ಕುರಿತು ಪೊಲೀಸರು ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಶಂಕಿತ ಡಾ. ಉಮರ್ ಮಧ್ಯಾಹ್ನ 3:19ರಿಂದ ಸಂಜೆ 6.22ರ ನಡುವೆ ಏನು ಮಾಡುತ್ತಿದ್ದ, ಆತ ಕಾರು ಬಳಿಯೇ ಇದ್ದನಾ, ಯಾರನ್ನಾದರೂ ಭೇಟಿಯಾಗಿದ್ದಾನೆಯೇ ಅಥವಾ ಅಲ್ಲಿ ಪರಿಶೀಲನೆ ಮಾಡುತ್ತಿದ್ದನಾ ಎಂಬುದನ್ನು ಪತ್ತೆ ಹಚ್ಚಲು ತನಿಖಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಸ್ಫೋಟ ಸಂಭವಿಸುವ ಮುನ್ನ ಸಮೀಪದ ರಸ್ತೆಗಳಲ್ಲಿ ಪೀಕ್ ಅವರ್‌ನಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವುದಕ್ಕೆ ಆತ ಕಾಯುತ್ತಿದ್ದನೇ ಎಂಬುದರ ಕುರಿತು ತನಿಖೆ ಕೈಗೊಂಡಿದ್ದಾರೆ. ಮೂಲಗಳ ಪ್ರಕಾರ, ಶಂಕಿತ ಮಧ್ಯಾಹ್ನ 3–19ರ ■6ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 12 ನವೆಂಬರ್ 2025

ದೆಹಲಿ ಸ್ಫೋಟ: ಮೃತರ ಸಂಬಂಧಿಕರಿಗೆ 10 ಲಕ್ಷ, ಗಂಭೀರ ಗಾಯಾಳುಗಳಿಗೆ 2 ಲಕ್ಷ ಪರಿಹಾರ

ನವದೆಹಲಿ: ಸೋಮವಾರ ಸಂಜೆ ಕೆಂಪು ಕೋಟೆ ಬಳಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರ ಸಂಬಂಧಿಕರಿಗೆ ರೂ. 10 ಲಕ್ಷ ಪರಿಹಾರವನ್ನು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಘೋಷಿಸಿದ್ದಾರೆ. ಸ್ಫೋಟದಲ್ಲಿ ಶಾಶ್ವತವಾಗಿ ಅಂಗವಿಕಲರಾದವರಿಗೆ ರೂ. 5 ಲಕ್ಷ ಮತ್ತು ಗಂಭೀರವಾಗಿ ಗಾಯಗೊಂಡವರಿಗೆ ರೂ. 2 ಲಕ್ಷ ಪರಿಹಾರ ವನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ರೇಖಾ ಗುಪ್ತಾ

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, ದೆಹಲಿಯಲ್ಲಿ ನಡೆದ ದುರದೃಷ್ಟಕರ ಘಟನೆಯು ಇಡೀ ನಗರವನ್ನು ಆಘಾತವನ್ನುಂಟು ಮಾಡಿದೆ. ಈ ಸಂಕಷ್ಟದ ಸಮಯದಲ್ಲಿ ದೆಹಲಿ ಸರ್ಕಾರವು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಎಲ್ಲಾ ಕುಟುಂಬಗಳಿಗೆ ಮತ್ತು ಘಟನೆಯಲ್ಲಿ ಗಾಯಗೊಂಡವರಿಗೆ ತೀವ್ರವಾದ ಸಂತಾಪವನ್ನು ವ್ಯಕ್ತಪಡಿಸುತ್ತದೆ ಎಂದು ಹೇಳಿದ್ದಾರೆ. ದೆಹಲಿ ಸರ್ಕಾರ ಪ್ರತಿ ಸಂತ್ರಸ್ತ ಕುಟುಂಬದೊಂದಿಗೆ ದೃಢವಾಗಿ ನಿಲ್ಲುತ್ತದೆ ಮತ್ತು ತಕ್ಷಣದ ಪರಿಹಾರಕ್ಕಾಗಿ ನಿರ್ಧಾರವನ್ನು ತೆಗೆದುಕೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಶುಭ ಕೋರಿಕೆ...


ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ (ಕೆಪಿಸಿಸಿ) ಸದಸ್ಯರಾಗಿ ನೇಮಕಗೊಂಡ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ವಿಪ್ರ ಮುಖಂಡರೂ ಆದ ಹೆಚ್.ವಿ.ರಾಜೀವ್ ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿ ಡಾ.ಲಕ್ಷ್ಮೀದೇವಿ ಕೆ.ವಿ., ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಎಂ ವಿಶ್ವನಾಥಯ್ಯ, ವಿಪ್ರ ಮುಖಂಡರಾದ ನಂ.ಶ್ರೀಕಂಠ ಕುಮಾರ್, ಲಕ್ಷ್ಮೀನರಸಿಂಹ, ಸುರೇಶ್ ಮುಳ್ಳೂರು ಶುಭಕೋರಿದರು.

ಡಿ.6, ಮೈಸೂರಲ್ಲಿ ನಿವೇಶನ, ಮನೆ ಖರೀದಿ, ಮಾರಾಟ ಮಾಡುವವರಿಗೆ ರೇರಾ ಕುರಿತು ಅರಿವು ಕಾರ್ಯಕ್ರಮ

ಮೈಸೂರು,ನ.11(ಜಿಎ)–ನೂತನ ಲೇಔಟ್‌ಗಳಲ್ಲಿ ನಿವೇಶನ, ಮನೆ ಖರೀದಿ ಮತ್ತು ಮಾರಾಟ ಮಾಡುವ ಗ್ರಾಹಕರಿಗಾಗಿ ಕ್ರೆಡೈ ಮೈಸೂರು ಘಟಕದ ವತಿಯಿಂದ ಡಿ.6ರಂದು ಸಂಜೆ 4.30ಕ್ಕೆ ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ ಅಸೋಸಿಯೇಷನ್‌ನ ಎಂಬಿಸಿಟಿ ಹಾಲ್‌ನಲ್ಲಿ ರೇರಾ(ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ)ದ ನಿಯಮ ಕುರಿತ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕ್ರೆಡೈ ಅಧ್ಯಕ್ಷ ಎಂ.ಎಸ್.ಹರೀಶ್ ಶೆಣೈ ಈ ವಿಷಯ ತಿಳಿಸಿ, ಬಡಾವಣೆ ನಿರ್ಮಾಣ ಮಾಡುವವರು, ಡೆವಲಪರ್‌ಗಳು, ರಿಯಲ್ ಎಸ್ಟೇಟ್ ಕ್ಷೇತ್ರದವರಿಗೆ ರೇರಾ ಕುರಿತಂತೆ ಉಪಯುಕ್ತ ಕಾರ್ಯಕ್ರಮ ಇದಾಗಿದ್ದು, ಗ್ರಾಹಕರಿಗೂ ಅನುಕೂಲವಾಗಿದೆ. ರೇರಾ ಕಾಯ್ದೆಯ ಅನುಷ್ಠಾನದಲ್ಲಿ ಪಾರದರ್ಶಕತೆ, ಜವಾಬ್ದಾರಿ ಉತ್ತೇಜನ ಉದ್ದೇಶ ಇದರದ್ದಾಗಿದೆ. ರಾಜ್ಯದ ರೇರಾ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಭಾಗವಹಿಸಿ ಮಾಹಿತಿ ನೀಡಲಿದ್ದಾರೆ ಎಂದರು.

ಗ್ರೇಟರ್ ಮೈಸೂರು ಯೋಜನೆಯನ್ನು ಕ್ರೆಡೈ ಸ್ವಾಗತಿಸುತ್ತದೆ. ಈ ಯೋಜನೆಯು ಮೈಸೂರಿನ ಅಭಿವೃದ್ಧಿಗೆ ಪೂರಕವಾಗಿದ್ದು, ಮೈಸೂರು ನಗರ ಮತ್ತಷ್ಟು ವಿಸ್ತಾರಗೊಳ್ಳಲಿದೆ. ಕೋವಿಡ್ ನಂತರ ಇತ್ತೀಚೆಗೆ ರಿಯಲ್ ಎಸ್ಟೇಟ್ ಉದ್ಯಮ ವೃದ್ಧಿಯಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ರೇಟರ್ ಮೈಸೂರಿನ ಅನುಗುಣವಾಗಿ ನಿವೇಶನದ ಬೆಲೆಯೂ ಬದಲಾವಣೆ ಆಗುತ್ತದೆ ಎಂದರು.

ಅರಿವು ಕಾರ್ಯಕ್ರಮದಲ್ಲಿ ಪ್ರಶ್ನೋತ್ತರ ನಡೆಯಲಿದ್ದು, ತಜ್ಞರಿಂದ ಉತ್ತರ ಪಡೆದುಕೊಳ್ಳಬಹುದು. ಎಲ್ಲರಿಗೂ ಉಚಿತ ಪ್ರವೇಶವಿದೆ. ಆದರೆ ನೋಂದಣಿ ಅಗತ್ಯ. ಹೆಚ್ಚಿನ ಮಾಹಿತಿಗೆ ದೂ. 99451 47472 ಸಂಪರ್ಕಿಸಿ ಸದುಪಯೋಗ ಪಡೆದುಕೊಳ್ಳಿ ಎಂದರು. ಸುದ್ದಿಗೋಷ್ಠಿಯಲ್ಲಿ ನಾಗರಾಜ್ ವಿ.ಬೈರಿ, ಉದಯ್ ಎಸ್.ಕುಮಾರ್, ಎನ್.ಜಿ. ಮುರಳೀಧರ, ಶ್ರೀರಾಮ್ ಉಪಸ್ಥಿತರಿದ್ದರು.

ಅಭಿನಂದನೆ...


ರಾಜ್ಯೋತ್ಸವ ಪುರಸ್ಕೃತ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಮಾಜಿ ಮೇಯರ್ ಪುರುಷೋತ್ತಮ್ ಅಭಿನಂದಿಸಿದರು. ಸಾಹಿತಿ ಸಿದ್ದಸ್ವಾಮಿ, ಲೇಖಕ ಹ.ರಾ.ಕುಮಾರ್, ಪತ್ರಿಕಾ ವಿತರಕ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಸಮಾಜ ಸೇವಕ ಚಂದ್ರಶೇಖರಯ್ಯ, ಪುಟ್ಟರಾಜು, ರಾಜಣ್ಣ ಮತ್ತಿತರರಿದ್ದರು.



ಸಮಾಜ ಸೇವೆಗೆ ಪ್ರಶಸ್ತಿ

ಮೈಸೂರಿನ ವಿಜಯನಗರದ ಆರೋಗ್ಯ ಆಶ್ರಯಧಾಮ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಸುಜನಾ ಅವರಿಗೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಲಾಯಿತು. ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂಎಲ್‌ಸಿ ಡಾ.ತಿಮ್ಮಯ್ಯ ಮತ್ತಿತರರಿದ್ದರು.

ನಿಧನ



ಮುನಾವರ್ ಷರೀಫ್

ಮೈಸೂರು, ನ. 11– ಮೈಸೂರಿನ ಸಿದ್ದಿಖಿನಗರದ ನಿವಾಸಿ ಮುನಾವರ್ ಷರೀಫ್ (76) ನ.9ರಂದು ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಈ ಸಂಬಂಧ ಭಾನುವಾರ ಸಂಜೆ ಅಸರ್ ಸಲಾತ್ ನಂತರ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಸೀದಿ ಆಜಮ್ ಮರ್ಕಾಜ್ ಅಹಲೆ ಸುನ್ನತ್ ವಲ್ ಜಮಾತ್‌ನಲ್ಲಿ ನಮಾಜ್–ಎ–ಜನಾಜಾ (ಅಂತ್ಯಕ್ರಿಯೆಯ ಪ್ರಾರ್ಥನೆ) ನಡೆದ ಬಳಿಕ ನಂತರ ಮೈಸೂರಿನ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವರುದ್ರಸ್ವಾಮಿ



ಕೊಳ್ಳೇಗಾಲ ತಾಲೂಕಿನ ಹೊಸಮಾಲಂಗಿ ಗ್ರಾಮದ ಮೀಸೆ ಮಲ್ಲಪ್ಪನವರ ಮಗ ಶಿವರುದ್ರಸ್ವಾಮಿ (67) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ನ.12) ಹೊಸಮಾಲಂಗಿ ಗ್ರಾಮದಲ್ಲಿರುವ ಅವರ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಛಾಯಾಗ್ರಾಹಕ ಜಿ.ಗಣೇಶ್

ಮೈಸೂರು,ನ.11– ಇಟ್ಟಿಗೆಗೂಡು ನಿವಾಸಿ ಹಾಗೂ ಛಾಯಾಗ್ರಾಹಕ ಜಿ.ಗಣೇಶ್ (ಗಣು) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಮೃತರಿಗೆ 52 ವರ್ಷ ವಯಸ್ಸಾಗಿತ್ತು. ಇವರು ಪತ್ನಿ ಶೀಲಾ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನಾಳೆ (ನ.12ರ ಬುಧವಾರ) ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನ್ನಡದ ವಿಷಯದಲ್ಲಿ ಒಗ್ಗಟ್ಟಿನ ಹೋರಾಟ ಅನಿವಾರ್ಯ

ಕನ್ನಡಾಂಬೆ ಹಬ್ಬದಲ್ಲಿ ಶಾಸಕ ಜಿ.ಟಿ.ದೇವೇಗೌಡ ಕರೆ

ಮೈಸೂರು,ನ.11(ಜಿಎ)–ಕನ್ನಡದ ವಿಷಯದಲ್ಲಿ ಒಗ್ಗಟ್ಟಿನ ಹೋರಾಟ ಅಗತ್ಯ ಎಂದು ಶಾಸಕ ಜಿ.ಟಿ.ದೇವೇಗೌಡ ಇಂದಿಲ್ಲಿ ಅಭಿಪ್ರಾಯಪಟ್ಟರು.

ಕನ್ನಡಾಂಬೆ ರಕ್ಷಣಾ ವೇದಿಕೆಯು ಹೂಟಗಳ್ಳಿಯ ಸಂತೆಮೈದಾನದಲ್ಲಿ ಏರ್ಪಡಿಸಿದ್ದ ಕನ್ನಡಾಂಬೆ ಹಬ್ಬ, ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ಕನ್ನಡದ ಕೆಲಸವನ್ನು ಯಾರೇ ಮಾಡಿದರೂ ಬೆಂಬಲ ನೀಡಬೇಕು. ಈ ವಿಷಯದಲ್ಲಿ ತಾರತಮ್ಯ ಮಾಡಬಾರದು ಎಂದರು.

ಬೇಬಿ ಬೆಟ್ಟದ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮೀಜಿ ಮಾತನಾಡಿ, ಸಂಘಟಕರಾದ ರಾಜಶೇಖರ್ ಅವರು ಉತ್ತಮ ಸಂಘಟಕರು, ಗುರು ಹಿರಿಯರ ಬಗ್ಗೆ ಅಪಾರ ಭಕ್ತಿ, ಪ್ರೀತಿಯನ್ನು ಇಟ್ಟುಕೊಂಡಿದ್ದಾರೆ. ಅಲ್ಲದೇ ಕನ್ನಡ ಭಾಷೆಯ ಬಗ್ಗೆ, ಬಡವರು, ದೀನ ದಲಿರ ಬಗೆ ಅವರಿಗೆ ಅಪಾರ ಕಾಳಜಿ ಇದೆ. ಪೌರಕಾರ್ಮಿಕರಿಗೆ ಸನ್ಮಾನ ಮಾಡುವುದು, ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ಸೇರಿದಂತೆ ವಿವಿಧ ಲೇಖನ ಸಾಮಾಗ್ರಿ ನೀಡುವುದು ಅವರ ಜನಪರ ಕಾಳಜಿಯನ್ನು ತೋರುತ್ತದೆ. ಮೈಸೂರಿನಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಸಂಘಟನೆಯು ಜನಪರವಾಗಿ ಕೆಲಸ ಮಾಡುತ್ತಿದೆ ಎಂದರು.


ಕನ್ನಡಾಂಬೆ ರಕ್ಷಣಾ ವೇದಿಕೆಯು ಹೂಟಗಳ್ಳಿಯ ಸಂತೆ ಮೈದಾನದಲ್ಲಿ ಏರ್ಪಡಿಸಿದ್ದ ಕನ್ನಡಾಂಬೆ ಹಬ್ಬ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ತುಮಕೂರು ಜಿಲ್ಲೆಯ ಕರ್ನಾಟಕ ರಾಜ್ಯ ರೈತಸಂಘ, ಹಸಿರು ಸೇನೆಯ ಅಧ್ಯಕ್ಷ ಯೋಗೇಶ್(ಕರೀಗೌಡ್ರು), ಕರ್ನಾಟಕ ನ್ಯಾಯಪರ ವೇದಿಕೆ ರಾಜ್ಯಾಧ್ಯಕ್ಷೆ ಡಾ.ಸವಿತಾ, ಶಿರಸ್ತೇದಾರ್ ಕೆ.ಎಸ್. ಕುಬೇರ, ಇಲವಾಲ ಪೊಲೀಸ್ ಠಾಣೆಯ ಪಿಎಸ್ಐ ಪಿ.ಮಹೇಂದ್ರ, ಕುಣಿಗಲ್ ಕ್ಷೇತ್ರದ ಜಿಪಂ ಮಾಜಿ ಸದಸ್ಯ ಹೆಚ್.ಎ.ಜಯರಾಮಯ್ಯ ಅವರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಬಾಲ ಮಂಜುನಾಥ ಸ್ವಾಮೀಜಿ, ಕೊಳ್ಳೇಗಾಲ ತಾಲೂಕು ಚಿಲಕವಾಡಿ ಶಂಭುಲಿಂಗ ಕ್ಷೇತ್ರ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕನ್ನಡಾಂಬೆ ವಾರ್ಷಿಕ ಸಂಚಿಕೆಯನ್ನು ಬಿಜೆಪಿ ಯುವ ಮುಖಂಡ ವಿ.ಕವೀಶ್‌ಗೌಡ ಲೋಕಾರ್ಪಣೆಗೊಳಿಸಿದರು.

ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ವೇದಿಕೆ ಅಧ್ಯಕ್ಷ ಬಿ.ಬಿ. ರಾಜಶೇಖರ್, ಕುಮಾರ್ ಮೈದನಹಳ್ಳಿ, ಗೋಪಾಲಸ್ವಾಮಿ, ಕುಮಾರ್, ರಾಜ ಚೇತನ್, ಡಾ.ಸತೀಶ್, ಚಿಕ್ಕಣ್ಣ, ರವೀಂದ್ರ ಸಿ., ಮಂಜುನಾಥ್, ದೇವರಾಜು, ಮಹದೇವು, ಅಶೋಕ, ಡಿ.ಎಂ.ಲೋಕೇಶ್, ಕಾವಿ ಬಸಪ್ಪ, ಕುಮಾರ್ ಎಸ್., ಯೋಗಮೂರ್ತಿ, ಲೋಕೇಶ್ ಬೊಮ್ಮೇನಹಳ್ಳಿ, ನಂಜುಂಡ, ಸಂತೋಷ್, ಹೊನ್ನೇಗೌಡ, ಸಿಂಧುವಳ್ಳಿ ಶಿವಕುಮಾರ್, ಮಹದೇವ ಸ್ವಾಮಿ, ಲೋಕೇಶ್, ಇ.ವಿ. ನಾಗರಾಜ್, ಗೌತಮ್, ಶ್ರೀನಿವಾಸ್, ಕಿಕ್ಕೇರಿ ಕುಮಾರ್, ಕಿರಣ್ ಉಪಸ್ಥಿತರಿದ್ದರು.


ಮೈಸೂರು ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿ ನಿಯುಕ್ತಿಗೊಂಡಿರುವ ಉದಯ್ ಕುಮಾರ್, ಎಂಎಲ್‌ಸಿ ಕೆ.ವಿವೇಕಾನಂದ ಅವರನ್ನು ಭೇಟಿ ಮಾಡಿ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ಕೋರಿದರು. ಈ ವೇಳೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರದಲ್ಲಿ ಯಾವುದಾದರೂ ಪ್ರಸ್ತಾವನೆ ಇದ್ದಲ್ಲಿ ತಿಳಿಸಿ, ಇಲಾಖೆ ಅಭಿವೃದ್ಧಿಗೆ ನಿಮ್ಮೊಂದಿಗೆ ಸಹಕರಿಸುತ್ತೇನೆ ಎಂದು ವಿವೇಕಾನಂದ ಭರವಸೆ ನೀಡಿದರು.



ಪ್ರಶಸ್ತಿ ಪ್ರದಾನ

'ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಅವರು ಮೈಸೂರಿನ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ಅವರಿಗೆ ಮಂಡ್ಯದ ಕಲಾಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಕುವೆಂಪು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು.

ಭಾರತೀಯ ವೈದ್ಯಕೀಯ ಸಂಘದ ನೂತನ ಪದಾಧಿಕಾರಿಗಳು


ಭಾರತೀಯ ವೈದ್ಯಕೀಯ ಸಂಘದ ಮೈಸೂರು ಘಟಕದ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಮೈಸೂರು, ನ.11–ಮೈಸೂರಿನ ನ್ಯೂ ಸಂಯ್ಯಾಜಿರಾವ್ ರಸ್ತೆಯಲ್ಲಿರುವ ಐ.ಎಂ.ಎ ಕಟ್ಟಡದಲ್ಲಿ ನಡೆದ ಸಭೆಯಲ್ಲಿ 2022–2023ನೇ ಸಾಲಿನ ಭಾರತೀಯ ವೈದ್ಯಕೀಯ ಸಂಘದ ಮೈಸೂರು ಘಟಕದ ನೂತನ ಪದಾಧಿಕಾರಿಗಳನ್ನು ಅವಿರೋಧ'ವಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರು: ಡಾ.ಚಂದ್ರಭಾನ್ ಸಿಂಗ್ ಎನ್, ಕಾರ್ಯದರ್ಶಿ: ಡಾ.ಮಹೇಶ. ಬಿ.ಎಂ, ಖಜಾಂಚಿ: ಡಾ.ಸತ್ಯ. ಪಿ, ಅಧ್ಯಕ್ಷ ಚುನಾಯಿತ: ಡಾ. ಮಂಜುನಾಥ್. ಆರ್.ಡಿ, ಉಪಾಧ್ಯಕ್ಷರು: ಡಾ.ಶಿವಶಂಕರ್. ಬಿ.ಎನ್ ಮತ್ತು ಡಾ. ವಾಮದೇವ. ಜಿ.ಎಂ, ಜಂಟಿ ಕಾರ್ಯದರ್ಶಿ: ಡಾ.ಶಶಿಕುಮಾರ್ ಎಂ.ಆರ್.

ಕಾರ್ಯಕಾರಿ ಸಮಿತಿ ಸದಸ್ಯರು: ಡಾ॥ ಅರುಣ್ ಆರ್.ಎಂ, ಡಾ.ಅಶೋಕ್. ಎಸ್. ಈ, ಡಾ.ಆಯುಬ್ ಅಹಮದ್, ಡಾ.ಭರತ್‌ಕುಮಾರ್, ಡಾ.ದಿನೇಶ್. ಎಚ್.ಎನ್, ಡಾ.ಗೋವಿಂದ್‌ರಾಜ್ ಕೆ., ಡಾ.ಮಹದೇವು ಎನ್, ಡಾ.ಮಂಜುಳಾ. ಎ, ಡಾ.ಮಂಜುನಾಥ್. ಜಿ, ಡಾ. ರಾಜಾಪುರ್ ಪರಶುರಾವ್, ಡಾ. ರಂಗಸ್ವಾಮಿ. ಟಿ.ಕೆ, ಡಾ.ಶಶಿಧರ್. ಹೆಚ್.ಬಿ, ಡಾ.ಶ್ರೀಧರ್. ಎ

ರಾಜ್ಯ ಪರಿಷತ್ ಸದಸ್ಯರು: ಡಾ.ಅರವಿಂದಪ್ಪ. ವಿ, ಡಾ.ಅನಂದ್. ಬಿ.ಆರ್, ಡಾ.ಚಂದ್ರಶೇಖರ್. ಎನ್, ಡಾ.ಧನಂಜಯ, ಡಾ.ಮಹಮದ್ ಸುಲೆಮಾನ್, ಡಾ.ಶಮ್‌ಶದ್ ಸುಲೆಮಾನ್, ಡಾ. ಮಹದೇವಪ್ಪ. ಟಿ.ಎಂ, ಡಾ.ಪ್ರಕಾಶ್. ಎಸ್.ಬಿ, ಡಾ.ರಾಮೇಗೌಡ. ಎಚ್, ಡಾ. ಶ್ರೀನಿವಾಸ. ಎಂ, ಡಾ.ಪ್ರಭುಲಿಂಗ ಸ್ವಾಮಿ. ಎಸ್.ಎಂ, ಡಾ.ಶಿವಲಿಂಗ. ಎಸ್, ಡಾ.ಚಂದ್ರಶೇಖರ್, ಎನ್, ಡಾ. ಚಂದ್ರಶೇಖರ್. ಕೆ, ಡಾ.ಮಹಮದ್ ಶಿರಾಜ್ ಅಹಮದ್, ಡಾ. ಭುವನೇಂದ್ರ ಬಾಬು. ಎಸ್. ಜಿ.

ಕೇಂದ್ರ ಪರಿಷತ್ ಸದಸ್ಯರು: ಡಾ. ಆನಂದ ರವಿ. ಬಿ.ಎನ್, ಡಾ.ದೇವೇಗೌಡ. ಎಲ್, ಡಾ.ಹರೀಶ. ಎ.ಎಚ್, ಡಾ.ಜಯಂತ್. ಎಂ,ಎಸ್, ಡಾ.ಸುಜಾತ. ಎಸ್. ರಾವ್, ಡಾ.ಶಿವಕುಮಾರ್ ವೈ.ಎಂ, ಡಾ.ಸುರೇಶ್ ರುದ್ರಪ್ಪ, ಡಾ.ಕೆ.ಸೋಮಸುಂದರ್.

ಉತ್ತರ ಕರ್ನಾಟಕದ ರೈತರ ಕಬ್ಬಿಗೆ ನೀಡುವಷ್ಟೇ ಹೆಚ್ಚುವರಿ ದರ ದಕ್ಷಿಣ ಭಾಗದ ರೈತರಿಗೂ ನೀಡಿ

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹ

ಮೈಸೂರು,ನ.11(ಜಿಎ)–ಉತ್ತರ ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬಿಗೆ ನೀಡುವಷ್ಟೇ ಹೆಚ್ಚುವರಿ ದರವನ್ನು ದಕ್ಷಿಣ ಭಾಗದ ರೈತರಿಗೂ ನೀಡಬೇಕು ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.


ನಾಗೇಂದ್ರ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಭಾಗದಲ್ಲಿಯೂ ದರ ನೀಡಿಕೆ ಕುರಿತಂತೆ ಇಲ್ಲಿನ ಎಲ್ಲಾ ಜಿಲ್ಲಾಧಿಕಾರಿಗಳು ರೈತರು, ಕಾರ್ಖಾನೆ ಮಾಲೀಕರ ಸಭೆ ಕರೆಯಬೇಕು. ಎಸ್‌ಎಪಿ ಕಾಯ್ದೆ ಜಾರಿಗೆ ತರಬೇಕು. ಕೇಂದ್ರ ಸರ್ಕಾರ ಎಫ್‌ಆರ್‌ಪಿ ನಿಗದಿಗೆ 10.25 ಇಳುವರಿ ಮಾನದಂಡ ಮಾಡಿರುವುದು ಸರಿಯಲ್ಲ. ಇದನ್ನು ಕೂಡಲೇ 9.5ಕ್ಕೆ ಇಳಿಸಬೇಕು. ಎಥೆನಾಲ್ ಉತ್ಪಾದನೆಗೆ ಈಗ ನೀಡಿರುವ ಅವಕಾಶ ಕಡಿಮೆ ಇದ್ದು, ಅದನ್ನು ಹೆಚ್ಚು ಮಾಡಬೇಕು. ಎಥೆನಾಲ್ ಮಾರಾಟಕ್ಕೆ ಮಿತಿ ಹೇರಿರುವುದರಿಂದಾಗಿ ಕಾರ್ಖಾನೆಗಳಿಗೆ ತೊಂದರೆ ಆಗುತ್ತದೆ. ಸಕ್ಕರೆ ರಫ್ತನ್ನು ರೈತ ಮತ್ತು ಕಾರ್ಖಾನೆ ಹಿತದೃಷ್ಟಿಯಿಂದ ಹೆಚ್ಚಿಸಬೇಕೆಂದು ಆಗ್ರಹಿಸಿದರು.

ಸಕ್ಕರೆ ಸಹ ಕೇಂದ್ರ ಆಹಾರ ಮತ್ತು ನಾಗರಿಕ ಸೇವೆ ಸಚಿವರ ವ್ಯಾಪ್ತಿಗೆ ಬರಲಿರುವುದರಿಂದಾಗಿ ಸಕ್ಕರೆ ಕುರಿತ ಕೇಂದ್ರದ ನೀತಿ ಬದಲಾವಣೆಗೆ ಆಗ್ರಹಿಸಿ ಶೀಘ್ರದಲ್ಲೇ ಸಚಿವ ಪ್ರಹ್ಲಾದ್ ಜೋಶಿ ಅವರ ಧಾರವಾಡದ ನಿವಾಸಕ್ಕೆ ರೈತರು ಮುತ್ತಿಗೆ ಹಾಕುತ್ತೇವೆ ಎಂದರು. ಮೈಸೂರಿನ ಸರಗೂರು ತಾಲೂಕಿನಲ್ಲಿ ಒಂದೇ ತಿಂಗಳಲ್ಲಿ ಮೂವರು ಹುಲಿಗೆ ಬಲಿಯಾಗಿದ್ದಾರೆ. ಈ ಸಂಬಂಧ ಸರ್ಕಾರ ಅಧಿಕಾರಿಗಳ ಸಭೆ ನಡೆಸಿದ್ದನ್ನು ಬಿಟ್ಟರೆ ಗಂಭೀರ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ಪಿ.ಮರಂಕಯ್ಯ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.11.2025 ಬುಧವಾರ, ಮಳೆ ನಕ್ಷತ್ರ: ವಿಶಾಖ, 6.11.2025ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 12ರಿಂದ 1.30 ರವರೆಗೆ

- **ಕಾವೇರಿ ಆಯುರ್ವೇದ ಆಸ್ಪತ್ರೆ:** ಅಸ್ತಮಾ, ಉಬ್ಬಸಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಗೆ.
- **ಶ್ರೀ ನಟರಾಜ ವಸತಿ ಪ್ರಥಮ ದರ್ಜೆ ಮಹಿಳಾ ಕಾಲೇಜು :** ಅಂತರ ಕಾಲೇಜು ಸಂಭ್ರಮ, ಉದ್ಘಾಟನೆ : ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್ ಕಾರ್ಯದರ್ಶಿ ಸುರೇಶ್ ಜೈನ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಡಾ. ಬಿ. ಶ್ಯಾಮಸುಂದರ್, ಡಾ. ಪಿ.ಜಿ. ಪುಷ್ಪಾರಾಣಿ, ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಡಾ. ಜಿ. ಪ್ರಸಾದಮೂರ್ತಿ, ಎಂ.ಎನ್. ಸೂರಜ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಕುವೆಂಪು ಕಾವ್ಯಾಧ್ಯಯನ ಪೀಠ** : ಪ್ರೊ. ಕೆ.ಸಿ. ಶಿವಾರೆಡ್ಡಿ ಅವರಿಂದ ಕುವೆಂಪು ಅವರ ಓದುಗ–ಸಹೃದಯ ಚಿಂತನೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ. ಎನ್.ಕೆ. ಲೋಲಾಕ್ಷಿ, ಸ್ಥಳ: ಕುವೆಂಪು ಚಿತ್ರಕೂಟ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 11ಕ್ಕೆ.
- **ಮೈಸೂರು ವಿವಿ ಇಂಗ್ಲೀಷ್ ಅಧ್ಯಯನ ವಿಭಾಗ :** ಇಂಗ್ಲೀಷ್ ಲಿಟರರಿ ಕ್ಲಬ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫಾ, ಸ್ಥಳ: ಸೀನಿಯರ್ ಎಂ.ಎ. ಹಾಲ್, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿವಿ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** 30ನೇ ಇತಿಹಾಸ ಪುನಶ್ಚೇತನ ಶಿಬಿರ, ಉದ್ಘಾಟನೆ : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ. ಹೆಚ್.ಪಿ. ಜ್ಯೋತಿ, ಉಪಸ್ಥಿತರು : ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಜಿ.ಟಿ. ಸೋಮಶೇಖರ್, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಮತ್ತು ಕನ್ನಡ ಸಹೃದಯ ಬಳಗ :** ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಗಾನ ವೈಭವ, ಅಂತರರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ ಮತ್ತು ತಂಡದವರಿಂದ, ಸ್ಥಳ: ಚೆಲುವಾಂಬ ಅರಮನೆ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ, ಮಧ್ಯಾಹ್ನ 3.30ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ:** ಪಂಡಿತ್ ಬಾದ ರಾಮಣಾಚಾರ್ಯ ಅವರಿಂದ 'ಶ್ರೀಮತ್ ಭಾಗವತ್' ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.
- **ಸಪಸ ಸಂಗೀತ ವಿದ್ಯಾಲಯ :** ಗಾಯಕರಾದ ಪುರುಷೋತ್ತಮ್ ಕಿರಗಸೂರು ಅವರ ನೇತೃತ್ವದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಹಾಡುಗಳ ತರಬೇತಿ ಶಿಬಿರ, ಸ್ಥಳ: 2272, ಕಾರ್ನರ್ ಹೌಸ್, ಗಾನಭಾರತಿ ಪಕ್ಕ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.
- **ಆರೇಂಜ್ ಇನ್‌ಫ್ರಾ ಡೆವಲಪರ್ಸ್ ಅಂಡ್ ಪ್ರಮೋಟರ್ಸ್ :** ಕಲಾ ಸಪ್ತಮಿ ವಾರದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಕಲಾಶ್ರೀ ಡಾ. ಸತ್ಯನಾರಾಯಣರಾಜು ಅವರ 60ನೇ ಹುಟ್ಟುಹಬ್ಬದ ಆಚರಣೆಯ ವಿಶಿಷ್ಟ 60 ಪ್ರದರ್ಶನಗಳ ಭಾಗವಾಗಿ ಶಕ್ತಿ ವರ್ಣಚಕ್ರ ಕಾರ್ಯಕ್ರಮ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಕೃತಿ ಬಿಡುಗಡೆ ಹಾಗೂ ದಾನಶೀಲ ಕಬ್ಬಹಳ್ಳಿ ಸಾಹುಕಾರ್ ಚನ್ನಬಸಪ್ಪನವರ ಗ್ರಂಥಾಲಯ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ಗ್ರಂಥಾಲಯ ಉಪನಿರ್ದೇಶಕ ಬಿ. ಮಂಜುನಾಥ, ಶ್ರೀಮತಿ ಎಂ.ಎ. ನೀಲಾಂಬಿಕಾ ಅವರು ರಚಿಸಿರುವ ದಿವ್ಯ ಚೇತನಗಳು ಕೃತಿ ಲೋಕಾರ್ಪಣೆ : ಹೆಚ್.ಜಿ. ಗುರುಪ್ರಸಾದ್, ಕೃತಿ ಕುರಿತು : ಶ್ರೀಮತಿ ಎಂ.ಎ. ನೀಲಾಂಬಿಕಾ, ಪರಿಷತ್ ನಿಕಟಪೂರ್ವ ಅಧ್ಯಕ್ಷ ಮ.ಗು. ಸದಾನಂದಯ್ಯ ಅವರಿಂದ ವಚನ ಸಾಹಿತ್ಯ–ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಪರಿಷತ್ ಅಧ್ಯಕ್ಷ ಜಯಪ್ಪ ಹೊನ್ನಾಳಿ, ಉಪಸ್ಥಿತರು : ಡಿ.ಎನ್. ಲೋಕಪ್ಪ, ಎಂ. ಚಿನ್ನಸ್ವಾಮಿ, ಮೋಹನಶಂಕರ, ಸ್ಥಳ: ಸಾಹುಕಾರ್ ಕಬ್ಬಹಳ್ಳಿ ಚನ್ನಬಸಪ್ಪನವರ ವೀರಶೈವ ಆಶ್ರಮ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ.ಪುಟ್ಟಿ, ವ್ಯಾಖ್ಯಾನ–ಡಾ. ಹೆಚ್.ಎಂ.ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಚಾಮರಾಜನಗರ ಜಿಲ್ಲೆ, ಜ್ಯೋತಿಗೌಡನ ಪುರದ ರಾಜಮ್ಮ ಮತ್ತು ಸಂಗಡಿಗರಿಂದ ಚಾಮುಂಡಿ ಹಾಡು. 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ, ಸಾಧನ ಶಿಖರ–ಮೌಂಟ್ ಎವರೆಸ್ಟ್ ಪರ್ವತ ಏರಿರುವ ಮೈಸೂರಿನ ಮೊದಲ ಮಹಿಳೆ ಡಾ.ಉಷಾಹೆಗ್ಡೆ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ಕೀರ್ತನಾ .ವಿ, 4.30 ಹಿಂದಿ ಚಿತ್ರಗೀತೆಗಳು, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನ ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು– ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಚಾಪ್ಟರ್, ವಿಷಯ–ಕಟ್ಟಡ ಕಾಯಿದೆಗಳು, ಅನುಮತಿಗಳು ಮತ್ತು ಕಟ್ಟಡ ಮಂಜುರಾತಿಗಳ ಅರಿವು. ಭಾಗವಹಿಸುತ್ತಾರೆ–ಪ್ರಮುರ್ ಗ್ರೂಪ್‌ನ ಚೇರ್ಮನ್ ಎಸ್. ಪ್ರಕಾಶ್ ಮತ್ತು ಮೈಸೂರು ಟೌನ್ ಪ್ಲಾನಿಂಗ್ ಸದಸ್ಯರಾದ ಜಯಸಿಂಹ. ಪ್ರಸ್ತುತಿ –ಎನ್.ಕೇಶವಮೂರ್ತಿ, 6.50 ಕೃಷಿರಂಗ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿ ಗ್ರಾಮದ ಅರ್ಚನಾ ಫಾರಂನಲ್ಲಿ ಏರ್ಪಾಡಾಗಿದ್ದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ. ಪ್ರಸ್ತುತಿ– ಆರ್. ಲೋಕೇಶ್ವರಿ, 7.45 ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು ನೆನಪುಗಳ ಹೊತ್ತು–ವಿಶೇಷ ಕಾರ್ಯಕ್ರಮ ಸರಣಿ, ನಿವೃತ್ತ ಪ್ರಾಂಶುಪಾಲರು ಹಾಗೂ ಲೇಖಕರಾದ ಟಿ. ಎಸ್. ಗೋಪಾಲ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು ನಗರ ಪ್ರವೇಶ, ನಿರ್ಗಮನ ವಾಹನಗಳು, ಜನರ ಮೇಲೆ ಹದ್ದಿನ ಕಣ್ಣು



ಮೈಸೂರು ರೈಲ್ವೇ ನಿಲ್ದಾಣದಲ್ಲಿ ಪ್ರಯಾಣಿಕರ ಸರಕು ಪರಿಶೀಲನೆ



ವಿಶೇಷ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸುತ್ತಿರುವುದು

ಮೈಸೂರು, ನ.11– ದೆಹಲಿಯಲ್ಲಿ ಸ್ಫೋಟ ಸಂಭವಿಸಿದ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಸಾಕಷ್ಟು ಕಟ್ಟು ನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ನಗರದ ಪ್ರವೇಶ ಹಾಗೂ ನಿರ್ಗಮನ ಸ್ಥಳಗಳಲ್ಲಿ ಒಟ್ಟು 10 ವಿಶೇಷ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ, ತಪಾಸಣೆಗೆ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅವರು ವಾಹನಗಳ ತಪಾಸಣೆ ನಡೆಸಿ, ನಗರಕ್ಕೆ ಆಗಮಿಸುವ ವ್ಯಕ್ತಿಗಳ ಮಾಹಿತಿ ಪರಿಶೀಲಿಸಿ, ದಾಖಲಿಸಿಕೊಳ್ಳುತ್ತಿದ್ದಾರೆ.



ಸೀಮಾ ಲಾಟ್ಕರ್

ಅರಮನೆ ಚಾಮುಂಡಿಬೆಟ್ಟದ ದೇವಸ್ಥಾನ, ದಸರಾ ವಸ್ತುಪ್ರದರ್ಶನ ಮೈದಾನ ಸೇರಿದಂತೆ ಹೆಚ್ಚು ಜನಸಂದಣಿ ಉಂಟಾಗುವ ಸ್ಥಳಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ. ಅಲ್ಲಿನ ಪ್ರವೇಶ ದ್ವಾರದಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಿ, ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಹೆಚ್ಚುವರಿ ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್(ಡಿಎಫ್‌ಎಂಡಿ)ಗಳನ್ನು ಅಳವಡಿಸುವುದರ ಜೊತೆಗೆ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

ರೈಲ್ವೆ ನಿಲ್ದಾಣ, ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣ, ಬಸ್ ಡಿಪೋಗಳು, ಶಾಪಿಂಗ್ ಸಂಕೀರ್ಣಗಳು, ಮಾಲ್‌ಗಳು, ಚಿತ್ರಮಂದಿರಗಳಂತಹ ಸ್ಥಳಗಳಲ್ಲಿ ಅನುಮಾನಾಸ್ಪದ ವಸ್ತುಗಳನ್ನು ಗುರುತಿಸಲು ಮೆಟಲ್ ಡಿಟೆಕ್ಟರ್ ಮೂಲಕ ತಪಾಸಣೆ ನಡೆಸಲಾಗುತ್ತಿದೆ. ಇದೇ ವೇಳೆ ಸಮಾಜ ವಿರೋಧಿ ವರ್ತನೆ ಬಗ್ಗೆ ನಿಗಾ ವಹಿಸಲಾಗಿದೆ.

ಎಲ್ಲಾ ವಸತಿಗೃಹಗಳು, ಹೋಂಸ್ಟೇ, ಡಾರ್ಮಿಟರಿಗಳು, ಹೋಟೆಲ್‌ಗಳಲ್ಲಿ ನಿರಂತರ ತಪಾಸಣೆ ನಡೆಸಲಾಗುತ್ತಿದ್ದು, ನಗರದಲ್ಲಿ ನೆಲೆಸಿರುವ ಹೊಸಬರ ಬಗ್ಗೆ ಸಂಪೂರ್ಣ ಮಾಹಿತಿ ಕಲೆ ಹಾಕಲಾಗುತ್ತಿದೆ. ಸುರಕ್ಷತೆ ದೃಷ್ಟಿಯಿಂದ ಅವರ ಭೇಟಿಯ ಉದ್ದೇಶವನ್ನು ಪರಿಶೀಲಿಸಲಾಗುತ್ತಿದೆ.

ಜೊತೆಗೆ ಸಾಮಾಜಿಕ ಜಾಲತಾಣಗಳ ಮೇಲೆ ವಿಶೇಷ ನಿಗಾ ವಹಿಸಲಾಗುತ್ತಿದೆ. ಸುಳ್ಳು ಸುದ್ದಿಗಳು, ಪ್ರಚೋದನಕಾರಿ ಹಾಗೂ ಸಮಾಜದ ಶಾಂತಿ ಕದಡುವಂತಹ ಪೋಸ್ಟ್ ಹಾಕುವವರನ್ನು ಪತ್ತೆ ಮಾಡಿ, ಅಂತಹವರ ವಿರುದ್ಧ ಕಟ್ಟುನಿಟ್ಟಾಗಿ ಕಾನೂನು ಕ್ರಮಕ್ಕೆ ಸೂಚಿಸಲಾಗಿದೆ.

ನಗರದಲ್ಲಿ ಶಾಂತಿ ಸುವ್ಯವಸ್ಥೆ, ರಕ್ಷಣೆ ಜೊತೆಗೆ ಭದ್ರತೆ ಮತ್ತು ಶಾಂತಿಗೆ ಧಕ್ಕೆಯಾಗದಂತೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಾಗರಿಕರ ಹಿತದೃಷ್ಟಿಯಿಂದ ಬಿಗಿ ಕ್ರಮಗಳನ್ನು ಕೈಗೊಂಡಿದ್ದು, ಇದಕ್ಕೆ ಸಾರ್ವಜನಿಕರ ಸಹಕಾರ ಮುಖ್ಯವಾಗಿದೆ. ಪೊಲೀಸರ ಕಾರ್ಯ ನಿರ್ವಹಣೆಗೆ ಆಕ್ಷೇಪ ವ್ಯಕ್ತಪಡಿಸದೆ ಕೈಜೋಡಿಸಬೇಕೆಂದು ಪೊಲೀಸ್ ಆಯುಕ್ತರು ಮನವಿ ಮಾಡಿದ್ದಾರೆ.

ಮತಗಟ್ಟೆ ಸಮೀಕ್ಷೆಗಳ ಭವಿಷ್ಯ

ಬಿಹಾರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಗೆಲುವು

ನವದೆಹಲಿ, ನ.11– ಬಿಹಾರ ವಿಧಾನಸಭೆಗೆ ಎರಡು ಹಂತದಲ್ಲಿ ನಡೆದ ಮತದಾನ ಇಂದು ಅಂತ್ಯಗೊಂಡಿದ್ದು, ಈ ಚುನಾವಣೆ ದೇಶದ ಇತರ ಚುನಾವಣೆಗಳ ಮೇಲೂ ಪರಿಣಾಮ ಬೀರಲಿದೆ ಎಂದು ಅಂದಾಜಿಸಲಾಗಿದೆ. ಕಾರಣ ಆಪರೇಷನ್ ಸಿಂಧೂರ್ ನಡೆದ ಬಳಿಕ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ. ಹೀಗಾಗಿ ಇಡೀ ದೇಶವೇ ಕುತೂಹಲದಿಂದ ನೋಡುತ್ತಿದೆ. ಇದೀಗ ಬಹುತೇಕ ಮತಗಟ್ಟೆ ಸಮೀಕ್ಷೆಗಳ ಫಲಿತಾಂಶ ಪ್ರಕಟಗೊಂಡಿದೆ. ಎಲ್ಲಾ ಸಮೀಕ್ಷೆಗಳು ಬಿಜೆಪಿ ನೇತೃತ್ವದ ಎನ್‌ಡಿಎಗೆ ಬಹುಮತ ನೀಡಿವೆ. ಕಾಂಗ್ರೆಸ್, ಆರ್‌ಜೆಡಿ ಸೇರಿದಂತೆ ಇತರ ಪಕ್ಷಗಳ ಮಹಾಘಟ ಬಂಧನ್ ಮತ್ತೆ ಸೊರಗಿದೆ. ಆದರೆ ತೀವ್ರ ಹೋರಾಟದ ಹಾದಿ ಹಿಡಿದು ಬಂದ ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷ ಕೆಳ ಗರಿಷ್ಠ 5 ಸ್ಥಾನ ನೀಡಿದ್ದರೆ, ಬಹುತೇಕ ಸಮೀಕ್ಷೆಗಳು ಶೂನ್ಯ ಸ್ಥಾನ ನೀಡಿವೆ.

ಪೀಪಲ್ ಪಲ್ ಮತಗಟ್ಟೆ ಸಮೀಕ್ಷೆ

ಎನ್‌ಡಿಎ:	133–159
ಮಹಾಘಟಬಂಧನ್:	75–101
ಜೆಎಸ್‌ಪಿ:	0–5
ಇತರರು:	2–8

ಟೈಮ್ಸ್ ನೌ ಮತಗಟ್ಟೆ ಸಮೀಕ್ಷೆ

ಎನ್‌ಡಿಎ:	135–150
ಮಹಾಘಟಬಂಧನ್:	88–100
ಜೆಎಸ್‌ಪಿ:	0–01

ಮ್ಯಾಟ್ರಿಜ್ ಮತಗಟ್ಟೆ ಸಮೀಕ್ಷೆ

ಎನ್‌ಡಿಎ:	147–167
ಮಹಾಘಟಬಂಧನ್:	70–90
ಇತರರು:	0–02

ದೈನಿಕ್ ಭಾಸ್ಕರ್ ಮತಗಟ್ಟೆ ಸಮೀಕ್ಷೆ

ಎನ್‌ಡಿಎ:	145–160
ಮಹಾಘಟಬಂಧನ್:	73–91
ಜೆಎಸ್‌ಪಿ:	0–03
ಇತರರು:	5–7

ಪೀಪಲ್ ಇನ್‌ಸೈಟ್ ಮತಗೆಟ್ಟೆ ಸಮೀಕ್ಷೆ

ಎನ್‌ಡಿಎ:	133–148
ಮಹಾಘಟಬಂಧನ್:	87–102
ಜೆಎಸ್‌ಪಿ:	0–2
ಇತರರು:	3–6

ಪೋಲ್ ಆಫ್ ಪೋಲ್

ಎನ್‌ಡಿಎ:	138–155
ಮಹಾಘಟಬಂಧನ್:	82–98
ಇತರರು:	0–02

ಬಿಹಾರ ಚುನಾವಣೆ ಫಲಿತಾಂಶ ತೀವ್ರ ಕುತೂಹಲ ಕೆರಳಿಸಿದೆ. ಇದರ ಬೆನ್ನಲ್ಲೇ ಕೆಲ ರಾಜ್ಯಗಳ ಚುನಾವಣೆ ನಡೆಯಲಿದೆ. ಬಿಹಾರದ 242 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆದಿದೆ. ಸರ್ಕಾರ ರಚಿಸಲು 122 ಸ್ಥಾನದ ಅವಶ್ಯಕತೆ ಇದೆ. ಎನ್‌ಡಿಎ ಹಾಗೂ ಜೆಡಿಯು ತಲಾ 101 ಸ್ಥಾನಗಳಿಗೆ ಸ್ಪರ್ಧಿಸಿದ್ದವು.

ಬಿಹಾರ ವಿಧಾನಸಭೆಗೆ ಎರಡನೇ ಹಂತದಲ್ಲಿ ಶೇ.67.14ರಷ್ಟು ಮತದಾನ

ಪಾಟ್ನಾ, ನ.11– ಬಿಹಾರದಲ್ಲಿ ನಡೆದ ವಿಧಾನಸಭಾ ಚುನಾವಣೆಯ ಎರಡನೇ ಹಂತದಲ್ಲಿ ದಾಖಲೆಯ ಶೇ.67.14ರಷ್ಟು ಮತದಾನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡನೇ ಹಂತದಲ್ಲಿ 122 ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ಬೆಳಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮತದಾರರು ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಈ ಕ್ಷೇತ್ರಗಳಲ್ಲಿ ಒಟ್ಟು 3.70 ಕೋಟಿ ಮತದಾರರಿದ್ದರು.

ಈ ಮೂಲಕ 243 ವಿಧಾನಸಭಾ ಕ್ಷೇತ್ರಗಳಿಗೆ ಎರಡು ಹಂತದಲ್ಲಿ ನಡೆದ ಮತದಾನ ಪ್ರಕ್ರಿಯೆ ಮುಕ್ತಾಯವಾಗಿದೆ. ನ.14ರಂದು ಮತ ಎಣಿಕೆ ನಡೆಯಲಿದೆ.

ಮೊದಲ ಹಂತದಲ್ಲಿ ನ.6ರಂದು 121 ಕ್ಷೇತ್ರಗಳಿಗೆ ಮತದಾನ ನಡೆದಿದ್ದು, ಶೇ.65.09ರಷ್ಟು ಮತದಾನವಾಗಿತ್ತು. ಈ ಕ್ಷೇತ್ರಗಳಲ್ಲಿ 3.75 ಕೋಟಿ ಮತದಾರರಿದ್ದರು.

ಸ್ಫೋಟಕ್ಕೆ ಭದ್ರತಾ ವೈಫಲ್ಯ ಕಾರಣ

● ರಾಜ್ಯದ ಕೆಲ ಸಚಿವರು ಪ್ರತಿಕ್ರಿಯೆ ● ದೇಶ, ಜನರ ಪರ ನಿಲ್ಲುವ ಶಪಥ

ಬೆಂಗಳೂರು, ನ. 11(ಕೆಎಂಶಿ)–ದೆಹಲಿ ಬಾಂಬ್ ಸ್ಫೋಟ ಪ್ರಕರಣಕ್ಕೆ ಭದ್ರತಾ ವೈಫಲ್ಯವೇ ಕಾರಣ ಎಂದು ರಾಜ್ಯದ ಸಚಿವರು ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಸಚಿವರಾದ ಎಂ.ಬಿ. ಪಾಟೀಲ್, ಮಧು ಬಂಗಾರಪ್ಪ ಮತ್ತು ಪ್ರಿಯಾಂಕ್ ಖರ್ಗೆ, ಈ ವಿಷಯದಲ್ಲಿ ನಾವು ಒಗ್ಗಟ್ಟಾಗಿ ರಾಷ್ಟ್ರದ ಪರ ನಿಲ್ಲಬೇಕಿದೆ.

ಸ್ಫೋಟಕ್ಕೆ ಉಗ್ರರ ಕೈವಾಡವೋ ಅಥವಾ ರಾಸಾಯನಿಕ ಆಕಸ್ಮಿಕವೋ ಎಂಬುದನ್ನು ತಿಳಿಯಬೇಕಿದೆ, ಇದು ಭಯೋತ್ಪಾದಕರಿಂದ ನಡೆದಿದ್ದರೆ, ಹೇಯ ಕೃತ್ಯ ಎಂದಿದ್ದಾರೆ.

ಬಿಹಾರ ವಿಧಾನಸಭೆಗೆ ಎರಡನೇ ಹಂತದ ಮತದಾನಕ್ಕೂ ಮುನ್ನ ಸ್ಫೋಟ ಸಂಭವಿಸಿರುವುದನ್ನು ನಾವು ರಾಜಕೀಯ ಎನ್ನುವುದಿಲ್ಲ. ಆಪರೇಷನ್ ಸಿಂಧೂರ ಏಕಾಯಿತು. ಅದಕ್ಕೂ ಮುನ್ನ ಏನಾಯಿತು ಎಂಬುದನ್ನು ನೋಡಬೇಕಲ್ಲವೇ, ಇದರ ಪೂರ್ಣ ಹೊಣೆಗಾರಿಕೆಯನ್ನು ಪ್ರಧಾನಿಯವರೇ ವಹಿಸಿಕೊಳ್ಳಬೇಕು ಎಂದಿದ್ದಾರೆ.

ನಾವು ದೇಶ ಹಾಗೂ ಜನರ ಪರವಾಗಿ ನಿಲ್ಲಬೇಕು. ಕೆಂಪು ಕೋಟೆ ಬಳಿ ಘಟನೆ ನಡೆದಿದೆ ಎಂದರೆ, ಭದ್ರತಾ ವೈಫಲ್ಯವನ್ನು ತೋರಿಸುತ್ತದೆ. ಈಗಾಗಲೇ ಹಲವೆಡೆ ಸ್ಫೋಟಕ ರಾಸಾಯನಿಕಗಳನ್ನು ವಶಕ್ಕೆ ಪಡೆಯಲಾಗಿದೆ.


ಕೇಂದ್ರ ಸರ್ಕಾರ ಹಿಂದಿನ ಘಟನೆಗಳಿಂದ ಪಾಠ ಕಲಿತಂತೆ ಕಾಣಿಸುತ್ತಿಲ್ಲ. ಇದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಷಾ ವೈಫಲ್ಯವೇ ಕಾರಣ. ಪುಲ್ವಾಮಾ, ಪಹಲ್ಗಾಮ್ ಆಯಿತು. ಹೀಗೆ ಸಾಕಷ್ಟು ಪ್ರಕರಣಗಳು ಸಂಭವಿಸಿದರೂ ಪ್ರಧಾನಿ ಅವರು ಅಮಿತ್ ಷಾ ಮೇಲೆ ಕ್ರಮ ಕೈಗೊಳ್ಳದೆ, ಏಕೆ ಹೆದರುತ್ತಿದ್ದಾರೆ ಎಂದರು.

ಬೇರೆ ದೇಶಗಳಲ್ಲಿ ಆಗಿದ್ದರೆ ಇಷ್ಟೊತ್ತಿಗೆ ಖಾತೆ ಹೊಣೆಗಾರಿಕೆ ಹೊತ್ತ ಸಚಿವರನ್ನು ವಜಾ ಮಾಡಲಾಗುತ್ತಿತ್ತು. ಆರ್‌ಎಸ್‌ಎಸ್‌ನವರೂ ಏನೂ ಮಾತನಾಡುತ್ತಿಲ್ಲ. ಏನಾದರೂ ಹೇಳಿದರೆ ಅಮಿತ್ ಷಾ ಬಾಂಗ್ಲಾ ಪ್ರಜೆಗಳು ನುಸುಳುತ್ತಿದ್ದಾರೆ ಎನ್ನುತ್ತಾರೆ.

ಇವರಿಗೆ ಹೊಣೆಗಾರಿಕೆ ಇಲ್ಲವೆ, ಎಲ್ಲದಕ್ಕೂ ಒಂದು ಮಿತಿ ಇದೆ. ಜನರ ತಾಳ್ಮೆ ಪರೀಕ್ಷಿಸಬೇಡಿ, ಇನ್ನೂ ಎಷ್ಟು ಜನ ಪ್ರಾಣ ಕಳೆದುಕೊಳ್ಳಬೇಕು ಎಂದು ಪ್ರಶ್ನಿಸಿದ್ದಾರೆ.

ಆಂತರಿಕ ಭದ್ರತೆ ಹೊಣೆ ರಾಜ್ಯಗಳದ್ದು; ಅವುಗಳು ಸದಾ ನಿಗಾ ವಹಿಸಬೇಕಿದೆ

ಶ್ರೀರಾಮ ಸೇನೆ ರಾಜ್ಯಾಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿಕೆ



ಮೈಸೂರು, ನ.11– ದೇಶದ ಆಂತರಿಕ ಭದ್ರತೆಯಲ್ಲಿ ಎಲ್ಲಾ ರಾಜ್ಯ ಸರ್ಕಾರಗಳ ಜವಾಬ್ದಾರಿಯೂ ಮುಖ್ಯವಾಗಿದೆ ಎಂದು ಶ್ರೀರಾಮ ಸೇನೆಯ ರಾಜ್ಯಾಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿದರು.

ಕಾರ್ಯ ನಿಮಿತ್ತ ಮಂಗಳವಾರ ಸಂಜೆ ಮೈಸೂರಿಗೆ ಆಗಮಿಸಿದ್ದ ವೇಳೆ ದೆಹಲಿ ಬಾಂಬ್ ಸ್ಫೋಟದ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರ ದೇಶದ ಗಡಿಯಲ್ಲಿ ಭದ್ರತೆ ನೀಡುವಂತೆ, ಆಂತರಿಕ ಭದ್ರತೆಗೆ ಆಯಾಯ ರಾಜ್ಯಗಳ ಸರ್ಕಾರಗಳು ನಿಗಾ ವಹಿಸಬೇಕು ಎಂದರು.

ಬೆಂಗಳೂರಿನ ಶಮ ಎಂಬ ಇಂಜಿನಿಯರಿಂಗ್ ಮಹಿಳೆಯನ್ನು ಎನ್‌ಐಎ ವಿಚಾರಣೆ ನಡೆಸಿದೆ. ಆಕೆಯಿಂದ ಬಹಳಷ್ಟು ಮಾಹಿತಿ ಕಲೆ ಹಾಕಿದ್ದಾರೆ. ಆಕೆಯಂತಹವರು ಸಾಕಷ್ಟು ಜನ ಇರಬಹುದು. ಕರ್ನಾಟಕದ ಜೈಲುಗಳಲ್ಲಿ 13 ಪಾಕಿಸ್ತಾನದ ಉಗ್ರರಿದ್ದಾರೆ. ಅವರಿಗೆ ಜೈಲಿನಲ್ಲಿಯೇ ಮೊಬೈಲ್, ಇಂಟರ್ನೆಟ್ ಸಿಗುತ್ತದೆ. ಹೀಗಾದರೆ ಸಮಾಜದ ಗತಿಯೇನು?. ಜನರ ಮತ ಮಾತ್ರ ಬೇಕು, ಅವರಿಗೆ ಭದ್ರತೆ ನೀಡುವುದು ಬೇಡವಾ?. ರಾಜ್ಯದ ಪೊಲೀಸರು ಇದನ್ನು ಗಂಭೀರವಾಗಿ ಪರಿಗಣಿಸಿ, ರಾಜ್ಯದೆಲ್ಲೆಡೆ ಸೂಕ್ತ ಭದ್ರತೆ ಒದಗಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರ್ಕಾರದ ಕೆಲವು ಸಚಿವರು ಹಿಂದೂ ಧರ್ಮ, ಆಚರಣೆ ಬಗ್ಗೆ ಮನಬಂದಂತೆ ಮಾತನಾಡುತ್ತಾರೆ. ಕೆಂಪೇಗೌಡ ವಿಮಾನ ನಿಲ್ದಾಣದ ಕಾರಿಡಾರ್, ರೈಲ್ವೆ ಹಾಗೂ ಬಸ್ ನಿಲ್ದಾಣದಲ್ಲಿ ಕಾನೂನು ಬಾಹಿರವಾಗಿ ನಮಾಜ್ ಮಾಡಿದ್ದನ್ನು ಪ್ರಶ್ನಿಸಿದರೆ ಅವರೇನು ನಾಮ ಹಾಕಿಕೊಂಡು ತಟ್ಟೆ ಹಿಡಿದು ಭಿಕ್ಷೆ ಬೇಡುತ್ತಿಲ್ಲ ಎಂದು ಉದ್ಧಟತನದ ಹೇಳಿಕೆ ನೀಡುತ್ತಾರೆ. ಈ ಮೂಲಕ ಹಿಂದೂಗಳನ್ನು ಕೆಣಕುತ್ತಿದ್ದಾರೆ. ಈ ವರ್ತನೆಯನ್ನು ಹಿಂದೂಗಳು ಸಹಿಸುವುದಿಲ್ಲ. ಉದ್ಧಟತನದ ಹೇಳಿಕೆಗಳನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ದೆಹಲಿ ಸ್ಫೋಟದ ತನಿಖೆ ಎನ್‌ಐಎಗೆ ವರ್ಗಾಯಿಸಿದ ಕೇಂದ್ರದ ಗೃಹ ಸಚಿವಾಲಯ

ನವದೆಹಲಿ, ನ.11– ದೇಶದ ರಾಜಧಾನಿ ನವದೆಹಲಿಯ ಕೆಂಪು ಕೋಟೆ ಸಮೀಪದ ಮೆಟ್ರೊ ನಿಲ್ದಾಣ ಬಳಿ ಸಂಭವಿಸಿದ ಕಾರು ಸ್ಫೋಟ ಪ್ರಕರಣದ ತನಿಖೆಯನ್ನು ಕೇಂದ್ರದ ಗೃಹ ವ್ಯವಹಾರಗಳ ಸಚಿವಾಲಯವು(ಎಂಎಚ್‌ಎ) ರಾಷ್ಟ್ರೀಯ ತನಿಖಾ ಸಂಸ್ಥೆಗೆ(ಎನ್‌ಐಎ) ವರ್ಗಾಯಿಸಿದೆ ಎಂದು ಮೂಲಗಳು ತಿಳಿಸಿವೆ.



ಸ್ಫೋಟದಲ್ಲಿ 12 ಮಂದಿ ಮೃತಪಟ್ಟಿದ್ದು, ಇದೊಂದು ಭಯೋತ್ಪಾದಕ ಕೃತ್ಯ ಎಂದು ಪರಿಗಣಿಸಿರುವ ಕೇಂದ್ರ ಸರ್ಕಾರ, ಎನ್‌ಐಎಗೆ ಪ್ರಕರಣ ವರ್ಗಾಯಿಸಿದೆ ಎಂದು ಮೂಲಗಳು ತಿಳಿಸಿವೆ.

ಸ್ಫೋಟದ ಬೆನ್ನಲ್ಲೇ ಕೇಂದ್ರದ ಗೃಹ ಸಚಿವ ಅಮಿತ್ ಶಾ ರಾಜಧಾನಿ ದೆಹಲಿ ಮತ್ತು ದೇಶದ ವಿವಿಧೆಡೆ ಭದ್ರತಾ ಪರಿಶೀಲನೆ ನಡೆಸಿದ ಕೆಲ ಗಂಟೆಗಳ ಬಳಿಕ ಈ ಆದೇಶ ಬಂದಿದೆ. ಇದೇ ವೇಳೆ, ಮಂಗಳವಾರ ಮಧ್ಯಾಹ್ನ ಅಮಿತ್ ಶಾ ಮತ್ತೊಂದು ಭದ್ರತಾ ಸಭೆ ನಡೆಸಿದ್ದಾರೆ. ಸ್ಫೋಟ ಕುರಿತಂತೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿದ್ದು, ಆಳಕ್ಕೆ ಇಳಿದು ಪರಿಶೀಲನೆ ನಡೆಸಲಿವೆ ಎಂದು ಶಾ ಹೇಳಿದ್ದಾರೆ.

ಪಶು ವೈದ್ಯರ ಬೇಡಿಕೆ ಈಡೇರಿಕೆಗೆ ಆಗ್ರಹ; ಕಾಲು–ಬಾಯಿ ಜ್ವರಕ್ಕೆ ಲಸಿಕೆ ಹಾಕುವ ಅಭಿಯಾನ ಸ್ಥಗಿತ ಎಚ್ಚರಿಕೆ

ಮೈಸೂರು, ನ.11(ಎಸ್‌ಪಿಎನ್)– ಗ್ರಾಮೀಣ ಪ್ರದೇಶದ ಪಶು ವೈದ್ಯರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನ.17 ರಿಂದ ಕಾಲು ಬಾಯಿ ಜ್ವರಕ್ಕೆ ಲಸಿಕೆ ಹಾಕುವ ಅಭಿಯಾನವನ್ನು ಸಂಪೂರ್ಣ ನಿಲ್ಲಿಸಲಾಗುವುದು ಎಂದು ಕರ್ನಾಟಕ ಪಶು ವೈದ್ಯಕೀಯ ಸಂಘ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

> ಪಶು ವೈದ್ಯರ ಬೇಡಿಕೆ ಈಡೇರಿಕೆಗೆ ರಾಜ್ಯ ಸಂಘವು ನ.16 ರವರೆಗೆ ಸರ್ಕಾರಕ್ಕೆ ಗಡುವು ನೀಡಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ನ.16 ರವರೆಗೆ 8ನೇ ಸುತ್ತಿನ ಕಾಲುಬಾಯಿ ಜ್ವರ ಲಸಿಕೆ ನೀಡುವ ಅಭಿಯಾನದಲ್ಲಿ ಭಾಗವಹಿಸುತ್ತೇವೆ. ಆದರೆ, ಮಂಗಳವಾರದಿಂದ 16 ರವರೆಗೆ ನಡೆಸುವ ಲಸಿಕಾ ಅಭಿಯಾನದ ಪ್ರಗತಿ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸುವುದಿಲ್ಲ. ನಮ್ಮ ಬೇಡಿಕೆ ಈಡೇರಿಸದಿದ್ದರೆ, ರಾಜ್ಯ ಸಂಘದ ನಿರ್ದೇಶನದಂತೆ ನ.17 ರಿಂದ ಕಾಲುಬಾಯಿ ಲಸಿಕಾ ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಿಲ್ಲಿಸುವುದು ಅನಿವಾರ್ಯ.
>
> – ಡಾ.ವೈ.ಡಿ.ರಾಜಣ್ಣ, ಜಿಲ್ಲಾಧ್ಯಕ್ಷರು, ಕರ್ನಾಟಕ ಪಶು ವೈದ್ಯಕೀಯ ಸಂಘ

ಪಶು ವೈದ್ಯಾಧಿಕಾರಿಗಳ ದೀರ್ಘಕಾಲದಿಂದ ಬಾಕಿ ಉಳಿದಿರುವ ಸೇವಾ ಸೌಲಭ್ಯಗಳ ಬೇಡಿಕೆಗಳ ಈಡೇರಿಸಿಲ್ಲ. ಪಶು ವೈದ್ಯ ಸೇವಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯರಿಗೆ 2012ರ ಡಿಸೆಂಬರ್ 31 ರಿಂದ ಪೂರ್ವಾನ್ವಯವಾಗುವಂತೆ 6 ಮತ್ತು 13 ವರ್ಷಗಳ ಪದೋನ್ನತಿ ನೀಡಬೇಕು ಮತ್ತು ಅರ್ಹ ಪಶು ವೈದ್ಯರಿಗೆ 6 ಮತ್ತು 13 ವರ್ಷಗಳ ಕಾಲಮಿತಿ ಬಡ್ತಿ ನೀಡಬೇಕು ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬರೆದಿರುವ ಪತ್ರದಲ್ಲಿ ಅಧ್ಯಕ್ಷ ಡಾ.ಶಿವಶರಣಪ್ಪ ಜಿ.ಯಲಗೋಡ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.



ನಿವೃತ್ತಿ ಹೊಂದಿದ ಪಶುವೈದ್ಯರಿಗೆ ನಿಯಮಿತವಾಗಿ ನಿವೃತ್ತಿ ಸೌಲಭ್ಯದ ಪಸ್ತಾವನೆಗಳು ಮತ್ತು ಅರ್ಹ ನಿವೃತ್ತ ಪಶು ವೈದ್ಯರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು 247ಎ ರಂತೆ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಪರಿಗಣಿಸಬೇಕು.

ಈ ಸಂಬಂಧ ಪಶು ಸಂಗೋಪನಾ ಇಲಾಖೆಯ ಸಚಿವರು, ಕಾರ್ಯದರ್ಶಿ ಮತ್ತು ಆಯುಕ್ತರ ನೇತೃತ್ವದಲ್ಲಿ ಕಳೆದ 2 ವರ್ಷಗಳಲ್ಲಿ ಸುಮಾರು 7 ಸಭೆಗಳಾಗಿವೆ. ಇದೇ ವೇಳೆ 6 ಜನ ಕಾರ್ಯದರ್ಶಿಗಳು ಬದಲಾವಣೆ ಆಗಿದ್ದಾರೆ. ಇದರ ಪರಿಣಾಮವಾಗಿ, ಕಾಲಬದ್ಧ ಬಡ್ತಿಯನ್ನು ಕೊಟ್ಟಿಲ್ಲ. ಮೇಲ್ಮಟ್ಟದ ಹುದ್ದೆಗಳಿಗೆ ನಿರಂತರವಾಗಿ ಪದೋನ್ನತಿ ನೀಡಲಾಗುತ್ತಿದೆ. ಆದರೆ, ಪಶುವೈದ್ಯರಿಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಆದ್ದರಿಂದ ಅನಿವಾರ್ಯವಾಗಿ ಹೋರಾಟದ ಹಾದಿ ಹಿಡಿಯಬೇಕಾಗಿದೆ ಎಂದಿದ್ದಾರೆ.

ಮೈಸೂರು ವೈದ್ಯಕೀಯ ಕಾಲೇಜಿನಿಂದ ಮೂಳೆಶಸ್ತ್ರಚಿಕಿತ್ಸೆ ಕುರಿತು ಕಾರ್ಯಾಗಾರ



ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಇತ್ತೀಚೆಗೆ ಮೂಳೆಶಸ್ತ್ರಚಿಕಿತ್ಸೆ ಕುರಿತು ಕಾರ್ಯಾಗಾರ ನಡೆಯಿತು.

ಮೈಸೂರು,ನ.11(ಪಿಎಂ)– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ–ಆರ್‌ಐ) ವತಿಯಿಂದ ಅಸಾಮಿ (ಅಸೋಸಿಯೇಷನ್ ಆಫ್ ಸರ್ಜನ್ಸ್ ಫಾರ್ ದಿ ಅಪ್ಲಿಕೇಷನ್ ಅಂಡ್ ಮೆಥಡಾಲಜಿ ಆಫ್ ಇಲಿಜಾರೋವ್) ಇಂಡಿಯಾ ಸಹಯೋಗದಲ್ಲಿ ಮೂಳೆಶಸ್ತ್ರಚಿಕಿತ್ಸೆ ಕುರಿತು ಇತ್ತೀಚೆಗೆ ಕಾರ್ಯಾಗಾರ ನಡೆಯಿತು.

ಮೈಸೂರಿನ ಜೆಕೆ ಮೈದಾನದ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಕಂಟ್ಯೂನಿಟಿಂಗ್ ಮೆಡಿಕಲ್ ಎಜುಕೇಷನ್ (ಸಿಎಂಇ) ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ಇಲಿಜಾರೋವ್ ತಂತ್ರಗಳ ಕುರಿತು ಈ ಕಾರ್ಯಾಗಾರದಲ್ಲಿ ಕರ್ನಾಟಕ ಹಾಗೂ ನೆರೆ ರಾಜ್ಯಗಳಿಂದ 100ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ವೈಜ್ಞಾನಿಕ ಅಧಿವೇಶನಗಳು ಹಾಗೂ ಪ್ರಾಯೋಗಿಕ ಪ್ರದರ್ಶನಗಳನ್ನು ಪಾಲಕ್ಕಾಡ್‌ನ ಡಾ.ವಾಸುದೇವನ್, ಬೆಂಗಳೂರಿನ ಡಾ.ಹರ್ಷದ್ ಶಾ ಹಾಗೂ ಅಸಾಮಿ ಇಂಡಿಯಾ ತಂಡದ ತಜ್ಞರು ನಡೆಸಿಕೊಟ್ಟರು. ಅರ್ಥೋಪೆಡಿಕ್ ಶಸ್ತ್ರಚಿಕಿತ್ಸಕರಾಗಿ ಹೊಸದಾಗಿ ಕಾರ್ಯಾರಂಭ ಮಾಡಿರುವ ಯುವ ವೈದ್ಯರಿಗೆ ಇಲಿಜಾರೋವ್ ತತ್ವಗಳು ಹಾಗೂ ಶಸ್ತ್ರಚಿಕಿತ್ಸೆ ತಂತ್ರಗಳ ಬಗ್ಗೆ ಮೂಲಭೂತ ಜ್ಞಾನ ಒದಗಿಸಿಕೊಡುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕೆಆರ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರೂ ಆದ ಎಂಎಂಸಿ–ಆರ್‌ಐನ ಅರ್ಥೋಪೆಡಿಕ್ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಪಿ.ಶೋಭಾ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಅರ್ಥೋಪೆಡಿಕ್ ಅಸೋಸಿಯೇಷನ್ ಅಧ್ಯಕ್ಷ ಡಾ.ಎಸ್.ಆರ್.ಆನಂದ್, ವೈದ್ಯರಾದ ಡಾ.ವರುಷ್ ರಾವ್, ಡಾ.ಎಂ.ಕೆ.ದೀಪಕ್, ಡಾ.ಆರ್.ರವಿಶಂಕರ್, ಡಾ.ನೀಲನ್‌ಗೌಡ ಪಾಟೀಲ್, ಡಾ.ಪಿ.ಸಿ.ಸುನಿಲ್ ಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ: ಆನ್‌ಲೈನ್‌ನಲ್ಲಿ ಸ್ವಯಂ ಘೋಷಣೆ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು: ರಾಜ್ಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸಲು ಸಾಧ್ಯವಾಗದೇ ಇರುವವರಿಗೆ ಆನ್‌ಲೈನ್‌ನಲ್ಲಿ ಪಾಲ್ಗೊಳ್ಳುವ ಅವಧಿಯನ್ನು ಇದೇ ನ.30ರವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಜನರ ಹಿಂದುಳಿದ ವರ್ಗಗಳು, ಇತರೆ ಜಾತಿಗಳು, ಅನುಸೂಚಿತ ಜಾತಿ ಮತ್ತು ಪಂಗಡಗಳು ಸೇರಿದಂತೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಳ್ಳಲಾಗಿತ್ತು. ಆದರೆ ವಿವಿಧ ಕಾರಣಗಳಿಂದಾಗಿ ಕೆಲವರಿಗೆ ಸಮೀಕ್ಷೆಯಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಅಂತವರಿಗೆ ಅವಕಾಶ ನೀಡುವ ಹಿನ್ನೆಲೆ ಆನ್‌ಲೈನ್ ಮೂಲಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಅವಧಿಯನ್ನು ಇದೇ ನ.10ರವರೆಗೆ ವಿಸ್ತರಿಸಲಾಗಿತ್ತು. ಆದರೆ ಇದೀಗ ನೀಡಲಾಗಿದ್ದ ಅವಧಿಯನ್ನು ಮತ್ತೆ ವಿಸ್ತರಿಸಲಾಗಿದೆ.

ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ನೀಡುವ ದೃಷ್ಟಿಯಿಂದ ಆನ್‌ಲೈನ್ ಲಿಂಕ್ https://kscbcselfdeclaration.karnataka.gov.in ಮೂಲಕ ಸ್ವಯಂ ಪಾಲ್ಗೊಳ್ಳಬಹುದು. ಅವಧಿಯನ್ನು ಅಂತಿಮವಾಗಿ ನ.30ರವರೆಗೆ ವಿಸ್ತರಿಸಲಾಗಿದೆ. ಸಮೀಕ್ಷೆಯಲ್ಲಿ ಇದುವರೆಗೂ ಪಾಲ್ಗೊಳ್ಳದೇ ಇರುವವರು ಸದರಿ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕುಡಿತ ಬಿಡಿಸುವ ಉಚಿತ ಶಿಬಿರಕ್ಕೆ ಚಾಲನೆ ; ಆರತಿ ಬೆಳಗಿ ವ್ಯಸನಿಗಳಿಗೆ ವಿನೂತನ ರೀತಿ ಸ್ವಾಗತ

ವ್ಯಸನವನ್ನು ದ್ವೇಷಿಸಬೇಕೇ ಹೊರತು ವ್ಯಸನಿಯನ್ನಲ್ಲ ; ಬಸವಮಾರ್ಗ ವ್ಯಸನಮುಕ್ತ ಸಂಸ್ಥೆ ಸಂಸ್ಥಾಪಕ ಎಸ್.ಬಸವರಾಜು

ಮೈಸೂರು,ನ.11(ಪಿಎಂ)– ನಗರದ ಹೆಬ್ಬಾಳ ರಿಂಗ್ ರಸ್ತೆಯಲ್ಲಿರುವ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಿಂದ ಮಹಿಳೆಯರು ಮತ್ತು ಪುರುಷರಿಗೆ ಆಯೋಜಿಸಿರುವ 10 ದಿನಗಳ ಕುಡಿತ (ಮದ್ಯ) ಬಿಡಿಸುವ ಉಚಿತ ಶಿಬಿರಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ಶಿಬಿರಕ್ಕೆ ದಾಖಲಾದ ವ್ಯಸನಿಗಳಿಗೆ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು, ಹೂವಿನ ಹಾರ ಹಾಕಿ, ಆರತಿ ಬೆಳಗಿ ವಿನೂತನವಾಗಿ ಬರಮಾಡಿಕೊಂಡರು. ಅಲ್ಲದೆ, ಶಿವಲಿಂಗಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು. ಜೊತೆಗೆ ವ್ಯಸನಮುಕ್ತರಾಗಿ ಜೀವನ ನಡೆಸುವಂತೆ ಶಿಬಿರಾರ್ಥಿಗಳಿಗೆ ಕಂಕಣ ಕಟ್ಟಿಸಿ, ಸಂಕಲ್ಪ ಮಾಡಿಸಲಾಯಿತು.

ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಎಸ್.ಬಸವರಾಜು, ಕಳೆದ 6 ವರ್ಷಗಳಿಂದ ನಿರಂತರ ಸೇವೆ ನೀಡುತ್ತಿರುವ ನಮ್ಮ ಸಂಸ್ಥೆ ಈವರೆಗೆ 54 ಉಚಿತ ಶಿಬಿರಗಳನ್ನು ಯಶಸ್ವಿಯಾಗಿ ಪೂರೈಸಿದೆ. 12 ಸಾವಿರಕ್ಕೂ ಹೆಚ್ಚು ವ್ಯಸನಿಗಳು ವ್ಯಸನದಿಂದ ಮುಕ್ತರಾಗಿದ್ದು, ಇದರಿಂದ ಸಾವಿರಾರು ಕುಟುಂಬಗಳು ನೆಮ್ಮದಿ ಜೀವನ ನಡೆಸುತ್ತಿವೆ. ಈ 55ನೇ ಶಿಬಿರಕ್ಕೆ ನಿರೀಕ್ಷೆಗೂ ಮೀರಿ ಶಿಬಿರಾರ್ಥಿಗಳು ಬಂದಿದ್ದಾರೆ. ಇದೇ ಮೊದಲ ಬಾರಿಗೆ ದಾಖಲೆ ಪ್ರಮಾಣದಲ್ಲಿ ದಾಖಲಾತಿ ಆಗಿದೆ.



ಕುಡಿತ ಬಿಡಿಸುವ ಉಚಿತ ಶಿಬಿರದಲ್ಲಿ ಎಸ್.ಬಸವರಾಜು, ವ್ಯಸನಿಗಳಿಗೆ ಹಾರ ಹಾಕಿ, ಆರತಿ ಬೆಳಗಿ ಸ್ವಾಗತಿಸಿದರು.

ಒಬ್ಬ ವ್ಯಸನಿ, ವ್ಯಸನ ಬಿಡುತ್ತೇನೆ ಎನ್ನುವುದೇ ದೊಡ್ಡ ಸಾಧನೆ. ಆದ್ದರಿಂದಲ್ಲೇ ಹಾರ ಹಾಕಿ, ಆರತಿ ಬೆಳಗಿ ದಾಖಲು ಮಾಡಿಕೊಳ್ಳಲಾಗಿದೆ. ಆ ಮೂಲಕ ವ್ಯಸನದ ವಿರುದ್ಧ ಸಂಭ್ರಮಾಚರಣೆ ಮಾಡಲಾಗಿದೆ ಎಂದು ವಿನೂತನ ಪ್ರಯೋಗದ ಬಗ್ಗೆ ವಿವರಣೆ ನೀಡಿದರು.

ಕುಟುಂಬವಾಗಲಿ, ಸಮಾಜವಾಗಲಿ ವ್ಯಸನವನ್ನು ದ್ವೇಷಿಸಬೇಕೇ ಹೊರತು ವ್ಯಸನಿಯನ್ನಲ್ಲ. ವ್ಯಸನಿಯನ್ನು ಪ್ರೀತಿ, ಕರುಣೆ, ಅಧ್ಯಾತ್ಮದ ಮೂಲಕ ದುಶ್ಚಟದಿಂದ ಹೊರತರಬೇಕು. ದೇಹಕ್ಕೂ, ಮನಸ್ಸಿಗೂ ನೋವುಂಟು ಮಾಡದೇ ವ್ಯಸನ ಬಿಡಿಸುವುದೇ ನಮ್ಮ ಸಂಸ್ಥೆಯ ಧ್ಯೇಯ ಎಂದರು.

ಮಕ್ಕಳ ಪುನರ್ವಸತಿ ಕೇಂದ್ರ ಶೀಘ್ರ: ವ್ಯಸನಿಯ ಮನಪರಿವರ್ತನೆಗೆ ಪೂರಕ ವಾತಾವರಣ ಇಲ್ಲಿ ಕಲ್ಪಿಸಿಕೊಡಲಾಗುತ್ತದೆ. ಯೋಗ, ಧ್ಯಾನ, ಅಧ್ಯಾತ್ಮ, ಪೂಜೆ, ಆಪ್ತ ಸಮಾಲೋಚನೆ, ತರಗತಿ, ವ್ಯಕ್ತಿತ್ವ ವಿಕಸನ, ಮನರೋರಂಜನೆ, ಸ್ಪರ್ಧೆ, ಪೌಷ್ಠಿಕ ಆಹಾರದ ಮೂಲಕ ಆರೋಗ್ಯ ಸಂಬಂಧಿತ ಚಿಕಿತ್ಸೆ ನೀಡಲಾಗುತ್ತದೆ. ಇಷ್ಟು ವರ್ಷ ಕೇವಲ ಪುರುಷರಿಗಷ್ಟೆ ಸೀಮಿತವಾಗಿದ್ದ ಪುನರ್ವಸತಿ ಕೇಂದ್ರವನ್ನು ಈಗ ಮಹಿಳೆಯರಿಗೂ ವಿಸ್ತರಿಸಲಾಗಿದೆ. ಮಹಿಳೆಯರಿಗೆಂದೇ ಪ್ರತ್ಯೇಕ ಪುನರ್ವಸತಿ ಕೇಂದ್ರವನ್ನು ನಗರದ ಸರಸ್ವತಿಪುರಂನಲ್ಲಿ ತೆರೆದು ಈಗಾಗಲೆ ಕೆಲಸ ಪ್ರಾರಂಭಿಸಲಾಗಿದೆ. ಮಹಿಳೆಯರ ದಾಖಲಾತಿಯಲ್ಲಿ ಸಂಸ್ಥೆ ಗೌಪ್ಯತೆ ಕಾಯ್ದುಕೊಳ್ಳುತ್ತದೆ. ಶೀಘ್ರದಲ್ಲೆ 18 ವರ್ಷದೊಳಗಿನ ಮಕ್ಕಳಿಗೂ ಪುನರ್ವಸತಿ ಕೇಂದ್ರ ತೆರೆಯಲಾಗುತ್ತಿದ್ದು, ಯಾವುದೇ ವ್ಯಸನಕ್ಕೆ ದಾಸರಾದ ಮಕ್ಕಳನ್ನು ದಾಖಲಿಸಿ ಚಿಕಿತ್ಸೆ ಕೊಡಿಸಬಹುದು ಎಂದು ಅವರು ಮಾಹಿತಿ ನೀಡಿದರು.

ಸಂಸ್ಥೆಯ ವ್ಯವಸ್ಥಾಪಕ ಮಹೇಶ್, ಸಿಬ್ಬಂದಿಯಾದ ಮಂಜುನಾಥ್, ನಿಶ್ಚಿತಾ, ಆಶಾರಾಣಿ, ರಾಧಿಕಾ, ನೇತ್ರಾವತಿ, ಸಂಜು, ನಂದೀಶ್, ರಾಘು, ಪ್ರದೀಪ್, ರಾಘವೇಂದ್ರ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟರ್ ಈ ಹೂವಿನ ಹಾರ ಇಲ್ಲಿ ಯಾಕೆ?
ಡಾಕ್ಟರ್ : ಅದಾ, ಇದು ನನ್ನ ಮೊದಲನೇ ಆಪರೇಷನ್.
ಸಕ್ಸಸ್ ಆದರೆ ನನಗೆ...
ಫೇಲ್ ಆದರೆ ಅದು ನಿನಗೆ...!

ಮೈಸೂರು ಮಿತ್ರ

ಬುಧವಾರ, 12 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನೀನು ನಮ್ಮವನು ಅಂತ ಮಾತಲ್ಲಿ ಯಾರು ಬೇಕಾದರೂ ಹೇಳ್ತಾರೆ. ಆದರೆ, ಕಷ್ಟ ಬಂದಾಗಲೇ ಗೊತ್ತಾಗೋದು ನಿಜವಾಗಿಯೂ ನಮ್ಮ ಜೊತೆಗಿರುವವರು ಯಾರು ಅಂತ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿ ಇದ್ದವನಲ್ಲಿ ಶ್ರದ್ಧೆ, ನಿದ್ದೆ ಬಾರದವನಲ್ಲಿ ವಿದ್ಯೆ.

ನಿಮ್ಮ ಪತ್ರಗಳು

■ ಬೋಗಾದಿಗೆ ಕಬಿನಿ ಕುಡಿಯುವ ನೀರಿನ ಪೂರೈಕೆ ಎಂದು ಆರಂಭ?

ಮಾನ್ಯರೆ,

ಮೈಸೂರು ಬೋಗಾದಿ–ಗದ್ದಿಗೆ ರಸ್ತೆಯ ಅಕ್ಕಪಕ್ಕ ಅಮೃತ್ ಯೋಜನೆಯಡಿ ಕುಡಿಯುವ ನೀರಿನ ಪೂರೈಕೆಗೆ ಪೈಪ್ ಅಳವಡಿಸಿ ಎರಡು ತಿಂಗಳೇ ಕಳೆದಿವೆ. ಆದರೆ ಇನ್ನು ಕೂಡ ಕಬಿನಿ ಕುಡಿಯುವ ನೀರು ಯಾರ ಮನೆಗೂ ಬಂದಿಲ್ಲ. ಕೇವಲ ಪೈಪ್ ಲೈನ್ ಹಾಕಿ, ಅಧಿಕಾರಿಗಳು ನಾಪತ್ತೆಯಾಗಿದ್ದಾರೆ.

ಕೆಲವು ಖಾಸಗಿ ಬಡಾವಣೆಗಳಿಗೆ ನೇರವಾಗಿ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ ಕಾನೂನುಬದ್ಧ ಲೇಔಟ್‌ಗಳ ನಿವಾಸಿಗಳು ಇನ್ನೂ ಹಾರ್ಡ್ ವಾಟರ್‌ನಲ್ಲೇ ಕೈ ತೊಳೆಯುತ್ತಿದ್ದಾರೆ.

ಬೋಗಾದಿ, ಕಾವೇರಿ ನಗರ, ಖಜಾನೆ ಲೇಔಟ್, ನ್ಯಾಯಾಂಗ ಬಡಾವಣೆ ಮತ್ತು ಕೇರ್ಗಳ್ಳಿಯಲ್ಲಿ ಸಾವಿರಾರು ನಿವಾಸಿಗಳು ಕಬಿನಿ ನೀರಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಈಗಲಾದರೂ ಅಧಿಕಾರಿಗಳು, ಸ್ಥಳೀಯ ಶಾಸಕರಾದ ಜಿ ಟಿ ದೇವೇಗೌಡರು ಈ ಬಗ್ಗೆ ತಕ್ಷಣ ಗಮನಹರಿಸುವಂತೆ ಈ ಮೂಲಕ ಮನವಿ.

–ಸುರಭಿ ಭಟ್, ರೂಪಾನಗರ, ಮೈಸೂರು.

■ ಬ್ಯಾಂಕುಗಳಲ್ಲಿ ರಾಷ್ಟ್ರೀಯ ಹಬ್ಬಗಳಿಲ್ಲ

ಮಾನ್ಯರೆ,

ಕೇಂದ್ರ ಸರ್ಕಾರದ ರಾಷ್ಟ್ರೀಕೃತ ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಸೇರಿದಂತೆ ಕನ್ನಡ ರಾಜ್ಯೋತ್ಸವವನ್ನು ಕೂಡ ಬ್ಯಾಂಕುಗಳಲ್ಲಿ ಆಚರಿಸುವುದಿಲ್ಲವೇಕೆ? ರಾಷ್ಟ್ರೀಯ ಹಬ್ಬಗಳನ್ನು ದೇಶದ ಪ್ರತಿಯೊಂದು ಗ್ರಾಮ ಪಂಚಾಯಿತಿ ಕಾರ್ಯಾಲಯದಿಂದ ಹಿಡಿದು ದೆಹಲಿಯ ಸಂಸತ್ತಿನವರೆಗೂ ಆಚರಣೆ ಮಾಡಿ ಗೌರವವಂದನೆ ನೀಡುವುದು ಕರ್ತವ್ಯವಾಗಿದೆ. ಆದರೆ ಬ್ಯಾಂಕುಗಳಲ್ಲಿ ರಾಷ್ಟ್ರೀಯ ಹಬ್ಬಗಳು ಸೇರಿದಂತೆ ಕನ್ನಡ ರಾಜ್ಯೋತ್ಸವವನ್ನೂ ಆಚರಿಸದೇ ಇರುವುದು ದುರದೃಷ್ಟಕರ ಸಂಗತಿ. ಇನ್ನೂ ಮುಂದಾದರು ರಾಷ್ಟ್ರೀಕೃತ ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿ ರಾಷ್ಟ್ರೀಯ ಹಬ್ಬ ಮತ್ತು ಕನ್ನಡ ರಾಜ್ಯೋತ್ಸವವನ್ನು ಆಚರಿಸಿ ಸ್ವಾತಂತ್ರ್ಯ ಹಾಗೂ ಗಣರಾಜ್ಯಕ್ಕೆ ಗೌರವ ವಂದನೆ ಸಲ್ಲಿಸಲಿ. ಇದರ ಬಗ್ಗೆ ಎಲ್ಲಾ ಸಂಸದರು ಹಾಗೂ ಆಯಾ ಬ್ಯಾಂಕಿನ ಹಿರಿಯ ಅಧಿಕಾರಿಗಳು ನಿರ್ದೇಶಿಸಬೇಕೆಂದು ಈ ಮೂಲಕ ಮನವಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು

■ ವನ್ಯಜೀವಿಗಳಿಗೆ ಕಂಟಕವಾದ ಲಂಟಾನ ಕಳೆ

ಮಾನ್ಯರೆ,

ಲಂಟಾನ ಕಳೆ ಮಾನವ ಹಾಗೂ ವನ್ಯಜೀವಿಗಳ ಸಂಘರ್ಷಕ್ಕೆ ಕಾರಣಗಳಲ್ಲಿ ಪ್ರಮುಖ ಕಾರಣವಾಗಿದೆ ಎಂದು ಅಂತರರಾಷ್ಟ್ರೀಯ ಖ್ಯಾತಿಯ ವನ್ಯಜೀವಿ ಛಾಯಾಗ್ರಾಹಕ ಹಾಗೂ ಪರಿಸರ ತಜ್ಞರಾದ ಕೃಪಾಕರ್ ಅವರು, ನಾಡಿಗಿಂತ ಹೆಚ್ಚಾಗಿ ಕಾಡಿನಲ್ಲಿ ವಾಸ್ತವ್ಯ ಹೂಡಿದುದರ ಅನುಭವದಿಂದ ವಾಸ್ತವ ಸಂಗತಿಯನ್ನು ತಮ್ಮ ಅಭಿಪ್ರಾಯದ ಮೂಲಕ ವ್ಯಕ್ತಪಡಿಸಿರುವುದು ತುಂಬಾ ಶ್ಲಾಘನೀಯ. ಬ್ರಿಟಿಷರಿಂದ ಬಂದ ಲಂಟಾನ ಪ್ರಸ್ತುತ ಶೇ.60 ರಷ್ಟು ಕಾಡನ್ನು ಆಕ್ರಮಿಸಿಕೊಂಡು, ಸ್ಥಳೀಯ ಜೀವವೈವಿಧ್ಯತೆಯನ್ನು ಹಾಳು ಮಾಡಿ, ಹುಲ್ಲು ಹಾಗೂ ಪರಿಸರ ಸ್ನೇಹಿ, ಪಶು ಆಹಾರ ಗಿಡಗಳು ಬೆಳೆಯಲು ಅವಕಾಶ ಮಾಡಿಕೊಡದೆ, ಜಿಂಕೆ, ಕಡವೆ, ಕಾಡೆಮ್ಮೆಗಳ ಸಂಖ್ಯೆ ಕಡಿಮೆ ಆಗುತ್ತಿದ್ದು, ಪರಿಣಾಮವಾಗಿ ಮಾಂಸಾಹಾರಿ ಪ್ರಾಣಿಗಳಿಗೆ ಆಹಾರದ ಕೊರತೆ ಸೃಷ್ಟಿಯಾಗುತ್ತದೆ ಎಂದು ತಿಳಿಸಿರುವುದು ಗಮನಾರ್ಹ. ಲಂಟಾನ ಕಳೆಯನ್ನು ನಿರ್ಮೂಲನೆ ಮಾಡಬೇಕಾದರೆ ಕೈಯಿಂದಲೇ ಕೀಳಬೇಕು, ಉದ್ಯೋಗ ಖಾತರಿ ಯೋಜನೆಯಡಿ ಅಲ್ಲಿನ ಬುಡಕಟ್ಟು ಜನರನ್ನು ಬಳಸಿಕೊಂಡು ವರ್ಷವಿಡೀ ಉದ್ಯೋಗ ನೀಡುವುದರ ಜೊತೆಗೆ, ಕಾಡಿನ ಗುಣಮಟ್ಟ ಸುಧಾರಿಸಿ, ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಾಗಿ, ವನ್ಯಜೀವಿಗಳು ಕಾಡಿನಿಂದ ಹೊರಗೆ ಬರುವುದು ಕಡಿಮೆಯಾಗಬಹುದು ಎಂದು ಹೇಳಿರುವುದು ಸ್ವಾಗತಾರ್ಹ. ಹುಲಿಗಳು ವಯೋಸಹಜವಾಗಿ ಶಕ್ತಿ ಕಳೆದುಕೊಂಡು ಕಾಡಿನಲ್ಲಿ ಬೇಟೆಯಾಡಲು ಬೇರೆ ಪ್ರಾಣಿಗಳೊಂದಿಗೆ ಸೆಣಸಾಡಲು ಸಾಧ್ಯವಾಗದೆ, ಸುಲಭವಾಗಿ ಲಭ್ಯವಾಗಬಹುದಾದ ಮನುಷ್ಯರನ್ನು ಗುರಿಯಾಗಿಸಿಕೊಳ್ಳುತ್ತವೆ ಎಂದು ಹೇಳಿರುವುದು ನಿಜವಾದ ಸಂಗತಿ. ಕಾಡಿನ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ಅವಲೋಕಿಸುವುದು ಅತ್ಯಗತ್ಯ ಎಂದು ಹೇಳಿರುವುದು ಪ್ರತಿಯೊಬ್ಬರೂ ಮೆಚ್ಚಲೇಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಹದಗೆಟ್ಟಿದ್ದ ಕನ್ಸರ್‌ವೆನ್ಸಿ ಸ್ವಚ್ಛಗೊಳಿಸಿದ ಪೌರ ಕಾರ್ಮಿಕರು !



ಮಾನ್ಯರೆ,

ಮೈಸೂರಿನ ಕೆ.ಆರ್. ಮೊಹಲ್ಲಾ, ಬಸವೇಶ್ವರ ರಸ್ತೆ 10ನೇ ಕ್ರಾಸಿಗೆ ಹೊಂದಿಕೊಂಡಂತೆ ಇರುವ ಕನ್ಸರ್‌ವೆನ್ಸಿಯಲ್ಲಿ ಬಹಳ ದಿನಗಳಿಂದ ಗಿಡಗಂಟಿಗಳು ಬೆಳೆದು ಪ್ರಕೃತಿಗೆ ಅನಾನುಕೂಲವಾಗಿತ್ತು. ಇಲ್ಲಿನ ಸ್ಥಳೀಯ ನಿವಾಸಿಗಳು ಇದರ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿರಲಿಲ್ಲ. ಕೊನೆಗೆ ಸಿ.ಆಶಾ ಪ್ರಕಾಶ್ ಆದ ನಾನು ವಾರ್ಡ್ ನಂ.3ರ ಪಾಲಿಕೆ ಆರೋಗ್ಯಾಧಿಕಾರಿ ಶೋಭಾ ಅವರಿಗೆ ದೂರವಾಣಿಯ ಮೂಲಕ ವಿಷಯ ತಿಳಿಸಿದಾಗ ಇಲ್ಲಿಗೆ ಆಗಮಿಸಿ, ಸಮಸ್ಯೆಗೆ ಶೀಘ್ರ ಸ್ಪಂದಿಸಿ ಸ್ಥಳ ಪರಿಶೀಲಿಸಿದ ಶೋಭಾ ಅವರು ಪೌರ ಕಾರ್ಮಿಕರನ್ನು ಕರೆಸಿ ಕನ್ಸರ್‌ವೆನ್ಸಿಯನ್ನು ಯಾವುದೇ ಯಂತ್ರಗಳಿಲ್ಲದೇ ಹಾಗೆ ಕೈನಲ್ಲಿ ಸ್ವಚ್ಛಗೊಳಿಸಿದ್ದಾರೆ. ಇದೀಗ ಸಾರ್ವಜನಿಕರು ನಿರಾಳವಾಗಿದ್ದು ಕನ್ಸರ್‌ವೆನ್ಸಿ ಸುಂದರವಾಗಿ ಕಾಣುತ್ತಿದೆ. ಪಾಲಿಕೆ ಚುನಾವಣೆ ಬಹಳ ವರ್ಷಗಳಿಂದ ನಡೆಯದೇ ಇದ್ದರೂ ಪಾಲಿಕೆ ಅಧಿಕಾರಿಗಳು ಈ ರೀತಿ ಸ್ಪಂದಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಕನ್ಸರ್‌ವೆನ್ಸಿ ಗಲೀಜಾಗಿದ್ದರೆ ಇಲಿ, ಹೆಗ್ಗಣ ಮುಂತಾದ ಪ್ರಾಣಿಗಳಿಗೆ ವಾಸ ಮಾಡುವ ಪ್ರದೇಶವಾಗಿ ಬಿಡುತ್ತದೆ. ಸಮಸ್ಯೆಗೆ ಸ್ಪಂದಿಸಿದ ಆರೋಗ್ಯಾಧಿಕಾರಿ ಶೋಭಾ ಅವರಿಗೆ ಅನಂತ ಧನ್ಯವಾದಗಳು.

– ಸಿ.ಆಶಾ ಪ್ರಕಾಶ್, ಗೃಹಿಣಿ, ಬಸವೇಶ್ವರ ರಸ್ತೆ, ಮೈಸೂರು



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ತುರ್ತಾಗಿ ನಮಗೆ ಮಾತ್.... ಮಾತಿನ ಕನ್ನಡ ಬೇಕಿದೆ



ನವೆಂಬರ್ 1, ಕರ್ನಾಟಕ ರಾಜ್ಯೋತ್ಸವ. ಅದು, ನಮ್ಮ ರಾಜ್ಯದ ಜನ್ಮದಿನವೂ ಹೌದು. ಪ್ರತಿ ವರ್ಷವೂ ನಮ್ಮ ನಾಯಕರು ಕನ್ನಡ ಉತ್ತೇಜಿಸುವ ಬಗ್ಗೆ ಮಾತನಾಡುತ್ತಾರೆ.

ಪ್ರತಿಸಲವೂ ಕನ್ನಡಪರ ಚಳವಳಿಗಾರರು ಹೊರಗಿನವರು ಕನ್ನಡ ಕಲಿಯಲೇಬೇಕೆನ್ನುತ್ತಾರೆ. ಏಕೆಂದರೆ ಕನ್ನಡ ತನ್ನದೇ ತಾಯ್ನಾಡಿನಲ್ಲಿ ನಿಧಾನವಾಗಿ ಮರೆಯಾಗುತ್ತಿದೆ. ಏಕೆ?

ಇದರರ್ಥ, ನಾವು ಕ್ರಿಯಾತ್ಮಕ ಕನ್ನಡವನ್ನು ಕಲಿಸುತ್ತಿಲ್ಲ. ನಾವು ಮಾತನಾಡುವ ಕನ್ನಡ ಕಲಿಸುವ ಬದಲು ವ್ಯಾಕರಣ ಬದ್ಧ ಹಾಗೂ ಬರವಣಿಗೆಯ ಕನ್ನಡವನ್ನಷ್ಟೇ ಕಲಿಸಲು ಉತ್ತೇಜಿಸುತ್ತಿದ್ದೇವೆ.

ಸತ್ಯ ಸಂಗತಿ ಎಂದರೆ ಅಂಗಡಿಗಳ ಧ್ವಂಸಗೊಳಿಸುವುದರಿಂದ ಇಲ್ಲವೇ ವ್ಯಾಪಾರಸ್ಥರು, ಹೊರಗಿನವರನ್ನು ಬೆದರಿಸುವುದರಿಂದ ಕನ್ನಡವನ್ನು ಉಳಿಸಿ–ಬೆಳೆಸುವುದು ಸಾಧ್ಯವಿಲ್ಲ.

ಕನ್ನಡವನ್ನು ಉಳಿಸಿ–ಬೆಳೆಸಬೇಕಾದರೆ ಮೊದಲು ನಾವು ಕನ್ನಡಿಗರು ನಮ್ಮ ಮನೆ, ಕಚೇರಿ ಹಾಗೂ ದೈನಂದಿನ ಜೀವನದಲ್ಲಿ ಕನ್ನಡವನ್ನು ಮಾತನಾಡುವುದನ್ನು ರೂಢಿಸಿಕೊಳ್ಳಬೇಕಿದೆ.

ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಂದು ಮಾತು ಹೇಳಿದ್ದರು; **"ನಾವೆಲ್ಲಾ ಕನ್ನಡಿಗರು. ರಾಜ್ಯದಲ್ಲಿ ವಾಸಿಸುವ ಪ್ರತಿಯೊಬ್ಬರೂ ಕನ್ನಡ ಮಾತನಾಡುವುದನ್ನು ಕಲಿಯಬೇಕು"**. ಅದು ಬಹಳ ಗಂಭೀರವಾದ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ; ಕನ್ನಡಿಗರೆಂದರೆ ಯಾರು?

1983ರ ಹಿಂದೆಯೇ ಸರೋಜಿನಿ ಮಹಿಷಿ ಸಮಿತಿಯೂ ಕನ್ನಡಿಗನೆಂದರೆ; **'ಯಾರು ಕರ್ನಾಟಕದಲ್ಲಿ 15 ವರ್ಷಗಳಿಗೂ ಅಧಿಕ ಕಾಲದಿಂದ ವಾಸಿಸುತ್ತಿದ್ದು, ತಕ್ಕಮಟ್ಟಿಗೆ ಓದಲು, ಬರೆಯಲು, ಮಾತನಾಡಲು ಬಲ್ಲವರು'** ಎಂದು ಪ್ರತಿಪಾದಿಸಿತ್ತು.

ವಾಸ್ತವ ಸಂಗತಿ ಎಂದರೆ ಬಹುಪಾಲು ಕನ್ನಡಿಗರಾದ ನಮಗೆ ಕನ್ನಡವನ್ನೇ ಸರಿಯಾಗಿ ಬರೆಯಲು ಇಲ್ಲವೇ ಸ್ಪಷ್ಟವಾಗಿ ಓದಲೂ ಬರುವುದಿಲ್ಲ. ಆದರೆ, ಸುಲಲಿತವಾಗಿ ಮಾತನಾಡುತ್ತೇವೆ.

ಆದ್ದರಿಂದ ಕನ್ನಡಿಗರೆಂದರೆ ಯಾರು ಎಂಬುವುದರಲ್ಲಿ ಸ್ವಲ್ಪ ಬದಲಾವಣೆ ಅನಿವಾರ್ಯ. ನೀವು ಇಲ್ಲಿ ಹೆಚ್ಚು ಕಾಲ ಇದ್ದು, ಕನ್ನಡವನ್ನು ಚೆನ್ನಾಗಿ ಮಾತನಾಡುವವರಾದರೆ, ಆಗ ನೀವು ಕನ್ನಡಿಗರು.

ಈಗ ನಮಗೆ ಕನ್ನಡವನ್ನು ಉಳಿಸಿ–ಬೆಳೆಸಲು ತುರ್ತಾಗಿ ಬೇಕಾಗಿರುವುದು ಮಾತಿನ ಕನ್ನಡಕ್ಕೆ ಪ್ರೋತ್ಸಾಹ. ಏಕೆಂದರೆ ಮಾತನಾಡುವ ಕನ್ನಡ ಕರ್ನಾಟಕ ವನ್ನು 1956ರಿಂದ ಇಷ್ಟು ವರ್ಷಗಳ ಕಾಲ ಒಟ್ಟಾಗಿ ಬಿಗಿದಿದೆ.

ಕರ್ನಾಟಕ ಭಾರತದ ಅತೀ ವೈವಿಧ್ಯತೆ ಹೊಂದಿದಂತಹ ರಾಜ್ಯ. ಅದು ಆಹಾರದಲ್ಲಿ, ಮಾತಲ್ಲಿ, ಸಂಸ್ಕೃತಿ ಹಾಗೂ ಆಚಾರ–ವಿಚಾರಗಳಲ್ಲಿ ಕೂಡ.

ಮಂಗಳೂರಿನ ಬಂಟ್ಸ್‌ಗಳು ತುಳುವನ್ನು ಮಾತನಾಡಿದರೆ, ಕೊಡವರು ಕೊಡವ ಥಕ್ ಅನ್ನು, ಮುಸ್ಲಿಮರು ದಖನಿ, ಕೊಂಕಣರು ಕೊಂಕಣಿ ಭಾಷೆ ಮಾತನಾಡಿದರೂ ಅಂತಿಮವಾಗಿ ಅವರೆಲ್ಲ ಕನ್ನಡವನ್ನೂ ಮಾತನಾಡುತ್ತಾರೆ.

ಹಲವು ವರ್ಷಗಳಿಂದ ಇಲ್ಲೇ ವಾಸಿಸುತ್ತಿರುವ ತಮಿಳರು, ತೆಲುಗಿನವರು, ರಾಜಸ್ಥಾನಿಗಳು, ಗುಜರಾತಿಗಳು ಎಲ್ಲರೂ ಕನ್ನಡದಲ್ಲಿ ಸರಾಗವಾಗಿ ಸಂಭಾಷಿಸುತ್ತಾರೆ. ಅವರು ಕನ್ನಡವನ್ನು ಬರೆಯದಿರಬಹುದು ಆದರೆ ಮಾತನಾಡಬಲ್ಲರು. ಅದೇ ಅವರನ್ನು ಈ ಮಣ್ಣಿನ ಭಾಗವಾಗಿಸಿದೆ. ಆ ಪರಸ್ಪರರ ಮಾತಿನ ಭಾಷೆಯು ಕರ್ನಾಟಕದ ಸಾಮಾಜಿಕ ಸೆಲೆಯನ್ನಾಗಿಸಿದೆ.

ಆದರೆ, ಇಂದು ಉತ್ತರ ಭಾರತದಿಂದ ಅಪಾರ ಸಂಖ್ಯೆಯಲ್ಲಿ ಬರುತ್ತಿರುವ ವಲಸಿಗರು ಹಾಗೂ ನಮ್ಮ ನಗರಗಳಲ್ಲಿನ ಹಿಂದಿ ಪ್ರಾಬಲ್ಯದಿಂದ ಈ ಅಂಟು ತೆಳುವಾಗುತ್ತಿದೆ.

ನಮ್ಮ ನಗರಗಳಲ್ಲಿ ಕನ್ನಡವನ್ನು ಮಾತನಾಡಲು ನಿಲ್ಲಿಸಿದರೆ, ನಾವು ಕೇವಲ ನಮ್ಮ ಸಾಂಸ್ಕೃತಿಕ ಗುರುತನ್ನು ಮಾತ್ರ ಕಳೆದುಕೊಳ್ಳುವುದಲ್ಲ. ಸಮಾಜದ ಸಾಮರಸ್ಯವನ್ನೂ ಕಳೆದುಕೊಳ್ಳುತ್ತೇವೆ.

ಹಾಗಾಗಿ ಕರ್ನಾಟಕ ಸರ್ಕಾರವು ತತ್‌ಕ್ಷಣವೇ ಮಾತನಾಡುವ ಕನ್ನಡವನ್ನು ಬಳಸಲು ಕ್ರಿಯಾತ್ಮಕವಾಗಬೇಕು. ಬಲವಂತ ಜಾರಿಯಿಂದಲ್ಲ, ಬದಲಿಗೆ ಪ್ರೋತ್ಸಾಹದ ಮೂಲಕ. ನೀತಿ ಬೋಧನೆ ಇಲ್ಲವೇ ನೈತಿಕ ಪೊಲೀಸ್ ಗಿರಿಯಿಂದಲೂ ಅಲ್ಲ. ಆದರೆ, ಒಳಗೊಳ್ಳುವಿಕೆ ಹಾಗೂ ಪ್ರೋತ್ಸಾಹಕಗಳ ಮೂಲಕ ಆಗಿರಬಹುದು.

> **"** **ಕರ್ನಾಟಕ ಸರ್ಕಾರವು ತತ್‌ಕ್ಷಣವೇ ಮಾತನಾಡುವ ಕನ್ನಡವನ್ನು ಬಳಸಲು ಕ್ರಿಯಾತ್ಮಕವಾಗಬೇಕು. ಬಲವಂತ ಜಾರಿಯಿಂದಲ್ಲ, ಬದಲಿಗೆ ಪ್ರೋತ್ಸಾಹದ ಮೂಲಕ. ನೀತಿ ಬೋಧನೆ ಇಲ್ಲವೇ ನೈತಿಕ ಪೊಲೀಸ್ ಗಿರಿಯಿಂದಲೂ ಅಲ್ಲ. ಆದರೆ, ಒಳಗೊಳ್ಳುವಿಕೆ ಹಾಗೂ ಪ್ರೋತ್ಸಾಹಕಗಳ ಮೂಲಕ ಆಗಿರಬಹುದು.**
>
> **ಮಾತನಾಡುವ ಕನ್ನಡಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಏಕೆಂದರೆ ಜನರು ಪರಸ್ಪರ ಅರ್ಥ ಮಾಡಿಕೊಳ್ಳುವುದನ್ನು ನಿಲ್ಲಿಸಿದಾಗ, ಅವರಲ್ಲಿ ಪರಸ್ಪರ ಅಪಾರ್ಥಕ್ಕೆ ಎಡೆಯಾಗುತ್ತದೆ.**
>
> **ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಕೋರ್ಸ್‌ಗಳನ್ನು ನಡೆಸುತ್ತಿದ್ದು, ಆದರೆ ಅವರು ಸಂಭಾಷಿಸು ವುದಕ್ಕಿಂತ ವ್ಯಾಕರಣದ ಬಗ್ಗೆ ಹೆಚ್ಚು ಗಮನಹರಿಸುತ್ತಾರೆ. ನಮಗೆ ಮುಖ್ಯವಾಗಿ ಬೇಕಿರುವುದು ದೈನಂದಿನ ಜೀವನ ಕ್ಕಾಗಿ ಕನ್ನಡವೇ ಹೊರತು ಪಿಎಚ್.ಡಿಗಾಗಿ ಅಲ್ಲ !.**
>
> **ಕರ್ನಾಟಕವು ಸಾಮರಸ್ಯವನ್ನು ಬಯಸಿದರೆ, ಬೆಂಗಳೂರಲ್ಲಿ ಶಾಂತಿ ನೆಲೆಗೊಳ್ಳಬೇಕಿದ್ದರೆ, ಸರ್ಕಾರವು ಮೊದಲಿಗೆ ಮಾತನಾಡುವ ಕನ್ನಡವನ್ನು ಉತ್ತೇಜಿಸಬೇಕಿದೆಯೇ ಹೊರತು ಬರವಣಿಗೆ ಕನ್ನಡವಲ್ಲ. ಏಕೆಂದರೆ, ಅಂತಿಮವಾಗಿ ಕನ್ನಡ ಏಳ್ಗೆ ಹೊಂದಲು ನಮಗೆ ಅಗತ್ಯವಿರುವುದು ಹೆಚ್ಚು ಹೆಚ್ಚು ಸಂಖ್ಯೆಯ ಕನ್ನಡ ಮಾತನಾಡುವವರೇ ಹೊರತು, ಬರೀ ಕನ್ನಡ ಸಾಹಿತಿಗಳಲ್ಲ.**

ಸರ್ಕಾರವು ಕಟ್ಟಡ ಕಾಮಗಾರಿಗಳ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ಐಟಿ ವಲಯ ಮತ್ತು ಸೇವಾ ಉದ್ಯಮಗಳು ಕನ್ನಡ ಮಾತನಾಡುವುದನ್ನು ಕಲಿಸುವುದಕ್ಕಾಗಿಯೇ ಕಿರು–ಕನ್ನಡ ಕೋರ್ಸ್‌ಗಳ ನಡೆಸಬೇಕು. ಅವರ ಕನ್ನಡೇತರ ಉದ್ಯೋಗಿಗಳಿಗೆ ಕನ್ನಡದ ಬಗ್ಗೆ ತರಬೇತಿ ನೀಡುವ ಕಂಪನಿಗಳಿಗೆ ತೆರಿಗೆಯಲ್ಲಿ ವಿನಾಯಿತಿ ನೀಡಬೇಕು.

ಮಾತನಾಡುವ ಕನ್ನಡಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಏಕೆಂದರೆ ಜನರು ಪರಸ್ಪರ ಅರ್ಥ ಮಾಡಿಕೊಳ್ಳುವುದನ್ನು ನಿಲ್ಲಿಸಿದಾಗ, ಅವರಲ್ಲಿ ಪರಸ್ಪರ ಅಪಾರ್ಥಕ್ಕೆ ಎಡೆಯಾಗುತ್ತದೆ.

ನೆನಪಿರಲಿ! ಮಹಾರಾಷ್ಟ್ರದಲ್ಲಿ ನಡೆದ ವಲಸೆ ವಿರೋಧಿ ಗಲಭೆಯು ಶಿವಸೇನೆಗೆ ಜನ್ಮ ನೀಡಿತು. ತಮಿಳುನಾಡಿನ ಹಿಂದಿ ವಿರೋಧಿ ಹೋರಾಟವು ಡಿಎಂಕೆಗೆ ಜನ್ಮ ನೀಡಿತು? ಸದ್ಯ, ಕರ್ನಾಟಕಕ್ಕೆ ಅಂತಹ ರಾಜಕೀಯ ಬೇಡವೇ ಬೇಡ.

ಆದರೆ, ನಮ್ಮಲ್ಲಿನ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಜೆಡಿ(ಎಸ್) ಮತ್ತು ಬಿಜೆಪಿಯು ಮಾತನಾಡುವ ಕನ್ನಡವನ್ನು ನಿರ್ಲಕ್ಷಿಸುವುದನ್ನು ಮುಂದುವರೆಸಿದರೆ ಒಂದಲ್ಲಾ ಒಂದು ದಿನ ಕರ್ನಾಟಕ ರಕ್ಷಣಾ ವೇದಿಕೆಯ ರಾಜಕೀಯ ಅವತಾರವನ್ನು ನೋಡಬೇಕಾಗಿ ಬರಬಹುದು.

ಕರ್ನಾಟಕ ಸರ್ಕಾರವು ಕನ್ನಡ ಮಾಧ್ಯಮ ಶಿಕ್ಷಣ, ಮೂಲ ಸೌಕರ್ಯ ಮತ್ತು ನಿರ್ವಹಣೆಗಾಗಿ ಪ್ರತಿ ವರ್ಷ ಸುಮಾರು 39,000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ. ಆ ಹಣದ ಸ್ವಲ್ಪ ಭಾಗದಿಂದ ಮಾತನಾಡುವ ಕನ್ನಡವನ್ನು ರಾಜ್ಯಾದ್ಯಂತ ವಿಶ್ವವಿದ್ಯಾನಿಲಯಗಳು, ಕಾರ್ಪೊರೇಟ್‌ಗಳು, ಸಾರ್ವಜನಿಕ ಸೇವೆಗಳಲ್ಲಿ ಕ್ರಿಯಾಶೀಲಗೊಳಿಸಲು ಕಾರ್ಯಕ್ರಮಗಳನ್ನು ಆಯೋಜಿಸಬಹುದು.

ಆಸಕ್ತಿಕರ ವಿಷಯವೆಂದರೆ, ನಮ್ಮ ತಂತ್ರಜ್ಞ ಜಾಣ ಯುವಕರು ಕನ್ನಡವನ್ನು ಸಕ್ರಿಯಗೊಳಿಸುವಲ್ಲಿ ಸರ್ಕಾರದ ಸಮಿತಿಗಳು ಅಥವಾ ಚಳವಳಿಗಾರರಿಗಿಂತ ಹೆಚ್ಚಿನ ಕೆಲಸ ಮಾಡಿದ್ದಾರೆ.

'ಕನ್ನಡ ಬರುತ್ತೆ', 'ಲರ್ನ್ ಕನ್ನಡ ಕ್ವಿಕ್ಲಿ', 'ಡೆ ಟುಡೆ ಕನ್ನಡ', ಮತ್ತು 'ಕನ್ನಡ ಗೊತ್ತಿಲ್ಲಕಾಮ್'ನಂತಹ ಆಪ್‌ಗಳು ಸಂವಹನ ಕನ್ನಡಕ್ಕಾಗಿ ಅದ್ಭುತ ಕೆಲಸವನ್ನೆ ಮಾಡಿವೆ.

ಅಲ್ಲದೆ, ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯೂ (CIIL) ಕನ್ನಡ ಕೋರ್ಸುಗಳನ್ನು ಆನ್‌ಲೈನಿನಲ್ಲಿ ನಡೆಸುತ್ತಿದೆ. ನೈಜ ಅಧಿಕಾರಿಶಾಹಿ ಶೈಲಿಯದ್ದಾದರೂ ನೀವು 'ನಮಸ್ಕಾರ' ಎಂದು ಕಲಿಯುವ ಮುಂಚೆ 'ನಮಸ್ಕಾರ' ಎನ್ನುವುದನ್ನು ಅಕ್ಷರಗಳಲ್ಲಿ ಬರೆಯಲು ತಯಾರಿ ಮಾಡುತ್ತದೆ.

ಮತ್ತೊಂದೆಡೆ ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಕೋರ್ಸ್‌ಗಳನ್ನು ನಡೆಸುತ್ತಿದ್ದು, ಆದರೆ ಅವರು ಸಂಭಾಷಿಸುವುದಕ್ಕಿಂತ ವ್ಯಾಕರಣದ ಬಗ್ಗೆ ಹೆಚ್ಚು ಗಮನಹರಿಸುತ್ತಾರೆ. ನಮಗೆ ಮುಖ್ಯವಾಗಿ ಬೇಕಿರುವುದು ದೈನಂದಿನ ಜೀವನಕ್ಕಾಗಿ ಕನ್ನಡವೇ ಹೊರತು ಪಿಎಚ್.ಡಿಗಾಗಿ ಅಲ್ಲ!.

ಈಗ, ಕನ್ನಡೇತರರು ಕನ್ನಡವನ್ನು ಕಲಿಯುವುದು ಶರಣಾಗತಿ ಸೂಚಕವೇನಲ್ಲ. ಬದಲಿಗೆ ಇಲ್ಲಿನ ಅಸ್ತಿತ್ವದ ಸಾಕ್ಷಿಯೂ ಆಗಿದೆ. ಇದರ ಜೊತೆಗೆ ದಿನನಿತ್ಯದ ಜೀವನ ಸುಲಭವಾಗಿರುತ್ತದೆ. ಅಲ್ಲದೆ, ನೀವು ನೆಲೆಸಿರುವ ನಾಡಿಗೆ ಕೊಡುವ ಗೌರವದ ಒಂದು ಭಾವವೂ ಆಗಿದೆ.

ಹಲವು ವರ್ಷಗಳು ಇಲ್ಲಿಯೇ ಇದ್ದೂ ಸ್ಥಳೀಯ ಭಾಷೆಯನ್ನು ಕಲಿಯಲು ನಿರಾಕರಿಸುವುದು ಕಾರ್ಯಸಾಧ್ಯವಲ್ಲ ಎಂಬುದರ ಬದಲು, ಅದನ್ನು ಅಹಂಕಾರ ಇಲ್ಲವೇ ಅಗೌರವದ ವರ್ತನೆ ಎಂದು ಗ್ರಹಿಸಬೇಕಾಗುತ್ತದೆ. ಭಾಷೆ ಕೇವಲ ಸಂವಹನ ಸಾಧನ ಮಾತ್ರವಲ್ಲ. ಅದೊಂದು ಸಂಪರ್ಕವೂ ಆಗಿದೆ.

ನೆಲ್ಸನ್ ಮಂಡೆಲಾ ಹೇಳಿದಂತೆ, **'ಓರ್ವ ವ್ಯಕ್ತಿಗೆ ತಿಳಿದಿರುವ ಭಾಷೆಯಲ್ಲಿ ನೀನು ಮಾತನಾಡಿದರೆ ಅದು ಅವನ ತಲೆಗೆ ಹೋಗುತ್ತದೆ. ಆದರೆ ನೀವು ಅವನ ಭಾಷೆಯಲ್ಲಿಯೇ ಮಾತನಾಡಿದರೆ ಅದು ಅವನ ಹೃದಯಕ್ಕೆ ಮುಟ್ಟುತ್ತದೆ'**

ಕರ್ನಾಟಕವು ಸಾಮರಸ್ಯವನ್ನು ಬಯಸಿದರೆ, ಬೆಂಗಳೂರಲ್ಲಿ ಶಾಂತಿ ನೆಲೆಗೊಳ್ಳಬೇಕಿದ್ದರೆ, ಸರ್ಕಾರವು ಮೊದಲಿಗೆ ಮಾತನಾಡುವ ಕನ್ನಡವನ್ನು ಉತ್ತೇಜಿಸಬೇಕಿದೆಯೇ ಹೊರತು ಬರವಣಿಗೆ ಕನ್ನಡವಲ್ಲ.

ಏಕೆಂದರೆ, ಅಂತಿಮವಾಗಿ ಕನ್ನಡ ಏಳ್ಗೆ ಹೊಂದಲು ನಮಗೆ ಅಗತ್ಯವಿರುವುದು ಹೆಚ್ಚು ಹೆಚ್ಚು ಸಂಖ್ಯೆಯ ಕನ್ನಡ ಮಾತನಾಡುವವರೇ ಹೊರತು, ಬರೀ ಕನ್ನಡ ಸಾಹಿತಿಗಳಲ್ಲ.

Email: vikram@starofmysore.com

ಬಾಲಿವುಡ್‌ನ ನಟ ಧರ್ಮೇಂದ್ರ ಆರೋಗ್ಯ ಸ್ಥಿರ: ಕುಟುಂಬ

ಮುಂಬೈ: ಬಾಲಿವುಡ್‌ನ ಪ್ರಸಿದ್ಧ ನಟ ಧರ್ಮೇಂದ್ರ (89) ಅವರ ಆರೋಗ್ಯ ಸ್ಥಿರವಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮಂಗಳವಾರ ಪ್ರತಿಕ್ರಿಯಿಸಿರುವ ಅವರ ಕುಟುಂಬದವರು, 'ಮೇರು ನಟನ ಆರೋಗ್ಯದ ಕುರಿತು ಸುಳ್ಳು ಸುದ್ದಿ ಪ್ರಕಟಿಸುವುದನ್ನು ಮಾಧ್ಯಮಗಳು ನಿಲ್ಲಿಸಬೇಕು' ಎಂದು ಆಗ್ರಹಿಸಿದ್ದಾರೆ. ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ನಟ ದಾಖಲಾಗಿದ್ದು, ತೀವ್ರ ನಿಗಾದಲ್ಲಿದ್ದಾರೆ ಎಂದು ಅವರು ಹೇಳಿದ್ದಾರೆ.



ಧರ್ಮೇಂದ್ರ ಅವರು ಮೃತಪಟ್ಟಿದ್ದಾರೆ ಎಂಬ ಸುದ್ದಿ ಮಂಗಳವಾರ ಬೆಳಿಗ್ಗೆ ಹರಿದಾಡಿತ್ತು. ಅದನ್ನು ನಿರಾಕರಿಸಿ ಧರ್ಮೇಂದ್ರ ಅವರ ಪುತ್ರಿ ಇಶಾ ಡಿಯೋಲ್ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಮಾಧ್ಯಮವು ಅತಿಯಾಗಿ ಪ್ರಚಾರ ಮಾಡುತ್ತಿದೆ ಮತ್ತು ಸುಳ್ಳು ಸುದ್ದಿಗಳನ್ನು ಹರಡುತ್ತಿದೆ. ನನ್ನ ತಂದೆ ಆರೋಗ್ಯ ಸ್ಥಿರವಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ನಮ್ಮ ಕುಟುಂಬದ ಖಾಸಗೀತನವನ್ನು ಗೌರವಿಸಿ ಹಾಗೂ ಅಪ್ಪನ ತ್ವರಿತ ಚೇತರಿಕೆಗೆ ಪ್ರಾರ್ಥಿಸಿ ಎಂದು ಇಶಾ ಬರೆದಿದ್ದಾರೆ.

ಧರ್ಮೇಂದ್ರ ಅವರ ಪತ್ನಿ, ನಟಿ, ರಾಜಕಾರಣಿ ಹೇಮಾ ಮಾಲಿನಿ ಅವರು 'ಎಕ್ಸ್'ನಲ್ಲಿ ಮಾಧ್ಯಮದ ವರದಿಯನ್ನು ಟೀಕಿಸಿದ್ದು, ಬೇಜವಾಬ್ದಾರಿಯ ನಡೆ ಎಂದು ದೂರಿದ್ದಾರೆ. ಹಿರಿಯ ನಟ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಅವರ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ನಾವೆಲ್ಲರೂ ಪ್ರಾರ್ಥಿಸೋಣ ಎಂದು ಧರ್ಮೇಂದ್ರ ಅವರ ಮಗ ಸನ್ನಿ ಡಿಯೋಲ್ ಪ್ರತಿಕ್ರಿಯಿಸಿದ್ದಾರೆ.

ರಕ್ಷಣಾ ಸಚಿವ ರಾಜನಾಥ ಸಿಂಗ್, ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್, ಗೀತರಚನೆಕಾರ ಜಾವೇದ್ ಅಖ್ತರ್ ಸೇರಿದಂತೆ ಹಲವರು 'ಎಕ್ಸ್'ನಲ್ಲಿ ಶ್ರದ್ಧಾಂಜಲಿ ಸಲ್ಲಿಸಿ ಪೋಸ್ಟ್ ಮಾಡಿದ್ದರು.

ಕನ್ನಡ ರಾಜ್ಯೋತ್ಸವ ಆಚರಣೆ...



ಮೈಸೂರಿನ ಸಖಿ ಫೌಂಡೇಷನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆವರಣದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ನಂತರ ಮಹಿಳೆಯರಿಗಾಗಿ ಕಿವಿ ತಪಾಸಣಾ ಶಿಬಿರ ನಡೆಯಿತು. ಲೇಖಕಿ, ಸಂಸ್ಥಾಪಕಿ ಗಾಯತ್ರಿ ಸುಂದರೇಶ್, ಸಾಹಿತಿಗಳಾದ ಬಿ.ಆರ್.ನಾಗರತ್ನ, ಕೆ.ಟಿ.ಶ್ರೀಮತಿ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದೆಹಲಿ ಸ್ಫೋಟದ ಹಿಂದಿನ ಸಂಚುಕೋರರ ಸುಮ್ಮನೆ ಬಿಡಲ್ಲ

ಪಿತೂರಿ ನಡೆಸಿದವರಿಗೆ ತಕ್ಕ ಶಿಕ್ಷೆ ಖಚಿತ: ಪ್ರಧಾನಿ ಮೋದಿ

ಥಿಂಪು(ಭೂತಾನ್), ನ.11–ಸೋಮವಾರ ಸಂಜೆ ದೆಹಲಿಯಲ್ಲಿ ನಡೆದ ನಿಗೂಢ



ಸ್ಫೋಟಕ್ಕೆ ಸಂಬಂಧಿಸಿದಂತೆ ಇಂದು ಭೂತಾನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದ್ದಾರೆ. ಸಂಚುಕೋರರನ್ನು ಸುಮ್ಮನೆ ಬಿಡುವುದಿಲ್ಲ ಅಪರಾಧಿಗಳಿಗೆ ಖಂಡಿತಾ ಶಿಕ್ಷೆಯಾಗುತ್ತದೆ ಎಂದು ಮೋದಿ ಹೇಳಿದ್ದಾರೆ.

ಇಂದಿನಿಂದ ಎರಡು ದಿನಗಳ ಕಾಲ ಭೂತಾನ್ ಭೇಟಿಯಲ್ಲಿರುವ ಪ್ರಧಾನಿ, ನಮ್ಮ ತನಿಖಾ ಸಂಸ್ಥೆಗಳು ಪಿತೂರಿಯ ಬೇರುಗಳನ್ನು ಆಳವಾಗಿ ಅಗೆಯುತ್ತವೆ. ದೆಹಲಿ ಸ್ಫೋಟದಿಂದ ಬಾಧಿತರಾದವರ ಕುಟುಂಬಗಳೊಂದಿಗೆ ಇಡೀ ರಾಷ್ಟ್ರವು ನಿಂತಿದೆ. ದೆಹಲಿಯಲ್ಲಿ ನಡೆದ ಭಯಾನಕ ಘಟನೆ ಎಲ್ಲರನ್ನೂ ಆಘಾತಗೊಳಿಸಿದೆ ಎಂದು ಹೇಳಿದ್ದಾರೆ. ಇಂದು ನಾನು ತುಂಬಾ ಭಾರವಾದ ಹೃದಯದಿಂದ ಇಲ್ಲಿಗೆ ಬಂದಿದ್ದೇನೆ. ನಿನ್ನೆ ಸಂಜೆ ದೆಹಲಿಯಲ್ಲಿ ನಡೆದ ಭೀಕರ ಘಟನೆ ಎಲ್ಲರನ್ನೂ ತೀವ್ರವಾಗಿ ದುಃಖಿಸಿದೆ. ಸಂತ್ರಸ್ತ ಕುಟುಂಬಗಳ ದುಃಖ ನನಗೆ ಅರ್ಥವಾಗುತ್ತದೆ. ಇಡೀ ರಾಷ್ಟ್ರ ಇಂದು ಅವರೊಂದಿಗೆ ನಿಂತಿದೆ ಎಂದರು.

ಈ ಘಟನೆಯ ತನಿಖೆ ನಡೆಸುತ್ತಿರುವ ಎಲ್ಲಾ ಸಂಸ್ಥೆಗಳೊಂದಿಗೆ ನಾನು ನಿನ್ನೆ ರಾತ್ರಿಯಿಡೀ ಸಂಪರ್ಕದಲ್ಲಿದ್ದೆ. ನಮ್ಮ ಸಂಸ್ಥೆಗಳು ಈ ಪಿತೂರಿಯ ಆಳವನ್ನು ಹುಡುಕುವ ಪ್ರಯತ್ನ ಮಾಡುತ್ತಿವೆ. ಇದರ ಹಿಂದಿನ ಪಿತೂರಿಗಾರರನ್ನು ಬಿಡಲಾಗುವುದಿಲ್ಲ. ಹೊಣೆಗಾರರಾದ ಎಲ್ಲರಿಗೂ ಶಿಕ್ಷೆಯಾಗುವುದು ಖಚಿತ ಎಂದರು.

ಅಭಿನಂದನೆ...



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರನ್ನು ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ರಾಮೇಗೌಡ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಪರಪ್ಪನ ಅಗ್ರಹಾರ ಜೈಲಲ್ಲಿ ಕೈದಿಗಳಿಗೆ ರಾಜಾತಿಥ್ಯ

ಎಫ್‌ಐಆರ್, 3 ಎನ್‌ಸಿಆರ್ ದಾಖಲು



ಬೆಂಗಳೂರು,ನ.11–ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದೊಳಗೆ ಕೈದಿಗಳಿಗೆ ಸಿಗುತ್ತಿರುವ ರಾಜಾತಿಥ್ಯದ ವೀಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬೆನ್ನಲ್ಲೇ ಪೊಲೀಸರು ಮೂರು ಎನ್‌ಸಿಆರ್ ಮತ್ತು ಒಂದು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಸಹಾಯಕ ಅಧೀಕ್ಷಕ ಇಮಾಮ್ ಸಾಬ್ ಮೈಗೇರಿ ಅವರು ಜೈಲರ್ ಗೋಪಿನಾಥ್ ಡಿ ಮೂಲಕ ದೂರು ಸಲ್ಲಿಸಿದ್ದು, ದೂರಿನಲ್ಲಿ ವೈರಲ್ ಆಗಿರುವ ವೀಡಿಯೊಗಳಲ್ಲಿ ನಾಲ್ವರು ವಿಚಾರಣಾಧೀನ ಕೈದಿಗಳು–ಕಾರ್ತಿಕ್, ಧನಂಜಯ, ಮಂಜುನಾಥ್ ವಿ. ಮತ್ತು ಚರಣ್ ರಾವ್ ಬಿ–ಜೈಲಿನ ಬ್ಯಾರಕ್ ಸಂಖ್ಯೆ 8, ಕೊಠಡಿ ಸಂಖ್ಯೆ 7ರೊಳಗೆ ನೃತ್ಯ ಮಾಡುತ್ತಿರುವುದು ಕಂಡುಬಂದಿದೆ.

ವೀಡಿಯೊಗಳಲ್ಲಿ, ಕೈದಿಗಳು ಜೈಲಿನ ಆವರಣದೊಳಗೆ ನಿಷೇಧಿತ ವಸ್ತುಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ಈ ವೀಡಿಯೊ ರೆಕಾರ್ಡ್ ಮಾಡಿದ್ದವರು ಯಾರು? ಮಾಧ್ಯಮಗಳಿಗೆ ಸೋರಿಕೆ ಮಾಡಿದವರು ಯಾರು? ಎಂಬುದನ್ನು ತನಿಖೆ ನಡೆಸಬೇಕೆಂದು ದೂರಿನಲ್ಲಿ ತಿಳಿಸಿದ್ದಾರೆ.

ದೂರಿನ ಆಧಾರದ ಮೇಲೆ, ಪರಪ್ಪನ ಅಗ್ರಹಾರ ಪೊಲೀಸರು ಸೋಮವಾರ ಕರ್ನಾಟಕ ಕಾರಾಗೃಹ ಕಾಯ್ದೆಯ ಸೆಕ್ಷನ್ 42 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಹೆಚ್ಚುವರಿಯಾಗಿ, ಶಂಕಿತ ಭಯೋತ್ಪಾದಕ, ಸೀರಿಯಲ್ ರೇಪಿಸ್ಟ್ ಉಮೇಶ್ ರೆಡ್ಡಿ ಮತ್ತು ನಟ ತರುಣ್ ಜೈಲಿನೊಳಗೆ ಮೊಬೈಲ್ ಫೋನ್ ಬಳಸುತ್ತಿರುವ ವೀಡಿಯೊ ಕುರಿತು ಮೂರು ಎನ್‌ಸಿಆರ್‌ಗಳನ್ನು ದಾಖಲಿಸಿಕೊಂಡಿದ್ದಾರೆ. ವೀಡಿಯೊವನ್ನು ಹೇಗೆ ರೆಕಾರ್ಡ್ ಮಾಡಲಾಗಿದೆ ಮತ್ತು ಪ್ರಸಾರ ಮಾಡಲಾಗಿದೆ ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಯುತ್ತಿದೆ.


ಸನ್ಮಾನ...



ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪೈ ಇಟ್ಟಿಗೆಗೂಡು ಎನ್.ಚಂದ್ರಶೇಖರ್ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಹರೀಶ್ ಆತ್ಮೀಯವಾಗಿ ಸನ್ಮಾನಿಸಿದರು.

ಮೈಸೂರು ಸೇರಿ ರಾಜ್ಯದ ಐದು ಕಡೆ ವಿಶ್ವದರ್ಜೆ ಏರೋಸ್ಪೇಸ್ ಪಾರ್ಕ್ ಸ್ಥಾಪನೆ

ಬೆಂಗಳೂರು: ದೇವನಹಳ್ಳಿಯ ಕೆಐಎಡಿಬಿ ಏರೋಸ್ಪೇಸ್ ಪಾರ್ಕ್‌ನಲ್ಲಿ ಕಾಲಿನ್ಸ್ ಏರೋಸ್ಪೇಸ್ ಕಂಪನಿ ಅಭಿವೃದ್ಧಿಪಡಿಸಿರುವ 'ಕಾಲಿನ್ಸ್ ಇಂಡಿಯಾ ಆಪರೇಷನ್ ಸೆಂಟರ್'ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಚಾಲನೆ ನೀಡಿದರು.



ಬಳಿಕ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಕಾಲಿನ್ಸ್ ಏರೋಸ್ಪೇಸ್ ರಾಜ್ಯದಲ್ಲಿ 25 ಮಿಲಿಯನ್ ಡಾಲರ್ ಹೂಡಿಕೆ ಮಾಡುತ್ತಿದೆ. ಈ ನೂತನ ಘಟಕದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ, ಆಧುನಿಕ ತಯಾರಿಕೆಗಳಲ್ಲಿ 2 ಸಾವಿರಕ್ಕೂ ಹೆಚ್ಚು ಕೌಶಲ್ಯಪೂರ್ಣ ಉದ್ಯೋಗ ಸೃಷ್ಟಿ ಆಗಲಿದೆ. ಭಾರತದ ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದಲ್ಲಿ ರಾಜ್ಯದ ಕೊಡುಗೆ ಶೇಕಡ 65ರಷ್ಟಿದೆ ಎಂದರು.

ಬೆಂಗಳೂರು, ಬೆಳಗಾವಿ, ಮೈಸೂರು, ತುಮಕೂರು ಮತ್ತು ಚಾಮರಾಜನಗರದಲ್ಲಿ ವಿಶ್ವದರ್ಜೆಯ ಐದು ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದಲ್ಲಿ ತೊಡಗಿಸಿಕೊಂಡಿರುವ 2 ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಉದ್ಯಮಗಳು ರಾಜ್ಯದಲ್ಲಿವೆ. ಮಹೀಂದ್ರ ಏರೋಸ್ಪೇಸ್, ರಂಗ್‌ಸನ್ಸ್ ತರಹದ ವೈಮಾಂತರಿಕ್ಷ ಕಂಪನಿಗಳು ರಾಜ್ಯದಲ್ಲಿ ಅಪಾರ ಹೂಡಿಕೆ ಮಾಡಿದ್ದು, ಈ ವಲಯದಲ್ಲಿ 48 ಒಡಂಬಡಿಕೆಗಳಾಗಿವೆ. ರಂಗ್‌ಸನ್ಸ್ ಕಂಪನಿಯು ಬೋಯಿಂಗ್ ಕಂಪನಿ ಜತೆ ಸಹಭಾಗಿತ್ವ ಹೊಂದಿದ್ದು, 2,915 ಕೋಟಿ ರೂ. ಹೂಡಿಕೆ ಮಾಡುತ್ತಿದೆ. ಮುಂದಿನ ಐದು ವರ್ಷಗಳಲ್ಲಿ 45 ಸಾವಿರ ಕೋಟಿ ರೂ. ಹೂಡಿಕೆ ಆಕರ್ಷಿಸಿ, 60 ಸಾವಿರ ಉದ್ಯೋಗ ಸೃಷ್ಟಿಸುವ ಗುರಿ ಇದೆ ಎಂದು ಅವರು ವಿವರಿಸಿದ್ದಾರೆ.

ಸಚಿವ ಎಂ.ಬಿ. ಪಾಟೀಲ ಮಾತನಾಡಿ, ಭಾರತದಲ್ಲಿ ಉತ್ಪಾದನೆ ಆಧಾರಿತ ಪ್ರೋತ್ಸಾಹ (ಪಿಎಲ್‌ಐ) ಪಡೆದುಕೊಂಡಿರುವ ಕಾಲಿನ್ಸ್ ಕಂಪನಿಯ ಮೊದಲ ಘಟಕ ಇದಾಗಿದೆ. ಇದು ಬೋಯಿಂಗ್, ಏರ್‌ಬಸ್ ತರಹದ ವೈಮಾನಿಕ ಉದ್ದಿಮೆಗಳಿಗೆ ತನ್ನ ಸೇವೆಯನ್ನು ಒದಗಿಸಲಿದೆ. ಇದನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಕೆಐಎಡಿಬಿ ಮತ್ತು ಕರ್ನಾಟಕ ಉದ್ಯೋಗ ಮಿತ್ರ ಕ್ಷಿಪ್ರ ಗತಿಯಲ್ಲಿ ಸ್ಪಂದಿಸಿ ಅಗತ್ಯ ಅನುಮೋದನೆಗಳು, ಮೂಲಸೌಕರ್ಯ ಮತ್ತು ತಯಾರಿಕಾ ಚಟುವಟಿಕೆಗಳಿಗೆ ಬೇಕಾದ ಸಂಪೂರ್ಣ ಬೆಂಬಲ ನೀಡಿವೆ ಎಂದಿದ್ದಾರೆ.

ರಾಜ್ಯದ ಹೊಸ ಕೈಗಾರಿಕಾ ನೀತಿಯಲ್ಲಿ ಹೈಟೆಕ್ ವಲಯಗಳಾಗಿರುವ ವೈಮಾಂತರಿಕ್ಷ, ರಕ್ಷಣೆ ಮತ್ತು ವಿದ್ಯುನ್ಮಾನಕ್ಕೆ ಭಾರೀ ಒತ್ತು ಕೊಡಲಾಗಿದೆ. ಕಾಲಿನ್ಸ್ ಏರೋಸ್ಪೇಸ್ ರಾಜ್ಯದಲ್ಲಿ ಮಾಡಿರುವ ಹೂಡಿಕೆಯು ಐತಿಹಾಸಿಕವಾಗಿದ್ದು, ಸರಕಾರದ ದೂರದೃಷ್ಟಿಗೆ ಪೂರಕವಾಗಿದೆ ಎಂದರು.

ಅತ್ಯುತ್ತಮ ಭವಿಷ್ಯದ ಮೈಸೂರಿಗೆ ಕಾರ್ಯಕ್ರಮ ರೂಪಿಸುವ ಅನಿವಾರ್ಯತೆ

● ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ ದ್ವಾರಕಾನಾಥ್ ಪ್ರತಿಪಾದನೆ ● ರಾಜ್ಯ, ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಸನ್ಮಾನ

ಮೈಸೂರು, ನ. 11(ಎಂಟಿವೈ)– ಭವಿಷ್ಯದ ಮೈಸೂರನ್ನು ಉತ್ತಮವಾಗಿ ರೂಪಿಸಲು ಸಂಘ–ಸಂಸ್ಥೆಗಳು ಸೇರಿದಂತೆ ಸಮಸ್ತ ನಾಗರಿಕರ ಬೆಂಬಲ ಪಡೆದು ಗ್ರೀನ್, ಕ್ಲೀನ್, ಸೇಫ್, ಹೆಲ್ತಿ ಮೈಸೂರು ಸೇರಿದಂತೆ ವಿವಿಧ ಸ್ವರೂಪದ ಕಾರ್ಯಕ್ರಮ ರೂಪಿಸಲು ಚಿಂತಿಸಲಾಗಿದೆ ಎಂದು ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಯೋಗಾತ್ಮ ಶ್ರೀಹರಿ ದ್ವಾರಕನಾಥ್ ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜಿಎಸ್‌ಎಸ್ ಫೌಂಡೇಷನ್ ಪ್ರತಿನಿಧಿ ಫೌಂಡೇಷನ್ ಮತ್ತು ಜಿಎಸ್‌ಎಸ್ ಮಾಧ್ಯಮದ ಸಂಸ್ಥೆ ವತಿಯಿಂದ ಆಯೋಜಿಸಿದ್ದ ರಾಜ್ಯ ಹಾಗೂ ಜಿಲ್ಲಾಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮೈಸೂರು ನಗರವನ್ನು ಭವಿಷ್ಯದಲ್ಲಿ ಮತ್ತಷ್ಟು ಸುಂದರ ಹಾಗೂ ಸುರಕ್ಷಿತ ನಗರವಾಗಿ ರೂಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಆ ಕಾರಣದಿಂದ ಮೈಸೂರನ್ನು ಉತ್ತಮಪಡಿಸಲು ಏಳು ವಿಭಾಗಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಲು ಉದ್ದೇಶಿಸಲಾಗಿದ್ದು, ಎಲ್ಲಾ ಪತ್ರಿಕಾ ಸಂಸ್ಥೆಗಳು, ಸಂಘ–ಸಂಸ್ಥೆಗಳ ನೆರವಿನೊಂದಿಗೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. ಗ್ರೀನ್ ಮೈಸೂರು, ಸೇಫ್ ಮೈಸೂರು, ಹೆಲ್ತಿ ಮೈಸೂರು, ಫಿಟ್ ಮೈಸೂರು, ಕಲ್ಚರಲ್ ಮೈಸೂರು, ಸ್ಕಿಲ್ ಮೈಸೂರು, ಎಜುಕೇಷನಲ್ ಮೈಸೂರು ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜಿಎಸ್‌ಎಸ್ ಮಾಧ್ಯಮದ ಸಂಸ್ಥೆ ವತಿಯಿಂದ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತರನ್ನು ಅಭಿನಂದಿಸಲಾಯಿತು.

ಈ ಕಾರ್ಯಕ್ರಮಗಳ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಸಮಾಜ ಕಟ್ಟಿಕೊಡಬೇಕಿದೆ. ನಮ್ಮೂರಿನ ರಸ್ತೆಗಳು ಚೆನ್ನಾಗಿರದೆ, ಅಪರಾಧ, ರಕ್ತಪಾತಗಳೇ ಸೃಷ್ಟಿಯಾದರೆ, ಯಾವುದೇ ಉದ್ಯಮಿಗಳು ನಮ್ಮೂರಿನಲ್ಲಿ ಹೂಡಿಕೆ ಮಾಡಲು ಬರುವುದಿಲ್ಲ. ಹೀಗಾಗಿ ಉತ್ತಮವಾದ ವಾತಾವರಣ ಕಲ್ಪಿಸುವುದು ಪತ್ರಿಕೋದ್ಯಮದ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಮಾದರಿಯಾದ ಮೈಸೂರಿನ ಪತ್ರಿಕೋದ್ಯಮ: ಕಾರ್ಯಕ್ರಮವನ್ನು ಉದ್ಘಾಟಿಸಿದ ವಾರ್ತಾ ಇಲಾಖೆಯ ಉಪನಿರ್ದೇಶಕ ವಿನೋದ್ ಚಂದ್ರ ಮಾತನಾಡಿ, ಮೈಸೂರಿನ ಪತ್ರಿಕೋದ್ಯಮ ದೇಶಕ್ಕೆ ಮಾದರಿಯಾಗಿದೆ. ಇಲ್ಲಿನ ಪತ್ರಕರ್ತರ ಕಾರ್ಯವೈಖರಿ ಗಮನಾರ್ಹವಾಗಿದೆ ಎಂದರು.

ನೈತಿಕತೆ, ವಿಶ್ವಾಸಾರ್ಹತೆ ಇರಲಿ: ಸನ್ಮಾನ ಸ್ವೀಕರಿಸಿದ ಬಳಿಕ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪತ್ರಕರ್ತರು ತಮ್ಮ ಕೆಲಸದ ಮೂಲಕ ಗುರುತಿಸುವಂತೆ ಬೆಳೆಯಬೇಕು. ಪತ್ರಕರ್ತರಿಗೆ ನೈತಿಕತೆ ಮತ್ತು ವಿಶ್ವಾಸಾರ್ಹತೆ ಇರಬೇಕು. ಸಮಾಜ ಪ್ರತಿಯೊಂದನ್ನು ಸಹ ಗಮನಿಸಲಿದ್ದು, ಇದನ್ನೆಲ್ಲಾ ಅರಿತು ಆತ್ಮಾವಲೋಕನ ಮಾಡಿಕೊಂಡು ಕೆಲಸ ಮಾಡಬೇಕಿದೆ. ಈ ನಿಟ್ಟಿನಲ್ಲಿ ಪತ್ರಕರ್ತರಾಗಿ ನಾವೆಲ್ಲರೂ ಕೂಡ ಸಮಾಜದ ವಿಶ್ವಾಸಾರ್ಹತೆ ಉಳಿಸಿಕೊಂಡು ಕೆಲಸ ಮಾಡುತ್ತಾ, ಕೆಲಸದ ಮೂಲಕವೇ ಸಮಾಜದಲ್ಲಿ ಗುರುತಿಸಿಕೊಳ್ಳಬೇಕಿದೆ ಎಂದರು.

ಅಸ್ಮಿತೆಯ ಸಮಸ್ಯೆ ಕಾಡುತ್ತಿದೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಎಲ್ಲರನ್ನೂ ಅಸ್ಮಿತೆಯ ಸಮಸ್ಯೆ ಕಾಡುತ್ತಿದೆ. ಇಂತಹ ಸ್ವಾರ್ಥದ ಕಾಲಘಟ್ಟದಲ್ಲಿ ಜಾತಿ, ಧರ್ಮ, ಮನಸ್ಸು ಮತ್ತು ಸಮಾಜಗಳನ್ನು ಒಡೆದು ತಮ್ಮ ಅಸ್ಮಿತೆಗಳನ್ನು ಉಳಿಸಿಕೊಳ್ಳುವ ಪ್ರಯತ್ನಗಳು ಹೆಚ್ಚಾಗಿವೆ. ಈ ರೀತಿಯ ಪ್ರಯತ್ನಗಳ ನಡುವೆ ಸಮಾಜ ಕಟ್ಟುವಿಕೆ, ಒಗ್ಗೂಡಿಸುವ ವ್ಯಕ್ತಿಗಳು ಸಿಗುವುದು ಅತ್ಯಂತ ವಿರಳವಾಗಿದ್ದು, ಅಂತಹ ವ್ಯಕ್ತಿಗಳಲ್ಲಿ ಶ್ರೀಹರಿ ಅವರು ಒಬ್ಬರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ: ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಧರ್ಮಾಪುರ ನಾರಾಯಣ್, ದಯಾಶಂಕರ್ ಮೈಲಿ, ಎಂ.ಟಿ.ಯೋಗೇಶ್ ಕುಮಾರ್, ಮಹೇಶ್ ಭಗೀರಥ, ವೀರಭದ್ರಪ್ಪ ಬಿಸ್ಲಳ್ಳಿ, ಕೆ.ಬಿ.ರಮೇಶ್ ನಾಯಕ್, ಶೇಖರ್ ಕಿರುಗುಂದ, ಹೆಚ್.ಎಸ್.ದಿನೇಶ್‌ಕುಮಾರ್, ಎಂ.ಎ.ಶ್ರೀರಾಮ್, ಹಂಪಾ ನಾಗರಾಜು, ಸುಧೀಂದ್ರಕುಮಾರ್, ಈ. ಕಾರ್ತಿಕ್ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರತಿನಿಧಿ ದಿನಪತ್ರಿಕೆ ಪ್ರಧಾನ ಸಂಪಾದಕ ಸಿ.ಕೆ.ಮಹೇಂದ್ರ, ಜಿಎಸ್‌ಎಸ್ ಮಾಧ್ಯಮ ವಿಭಾಗದ ಮುಖ್ಯಸ್ಥೆ ರೂಪಶ್ರೀ, ಆಂದೋಲನ ದಿನಪತ್ರಿಕೆ ಸಂಪಾದಕ ರವಿಕೋಟಿ, ಎಂ.ಆರ್. ಸತ್ಯನಾರಾಯಣ, ಎಸ್.ಟಿ.ರವಿಕುಮಾರ್, ಸತೀಶ್‌ಕುಮಾರ್, ಎನ್.ಎಂ.ಬಸವ ರಾಜು, ಎಂ.ಸುಬ್ರಹ್ಮಣ್ಯ, ಬಿ.ರಾಘವೇಂದ್ರ ಮುಳ್ಳೂರು ರಾಜು, ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ್ ತಿಮಕಾಪುರ ಸೇರಿದಂತೆ ಹಲವಾರು ಮಂದಿ ಪಾಲ್ಗೊಂಡಿದ್ದರು.



ಸನ್ಮಾನ...

ನವೆಂಬರ್ 7ರಂದು ರಾಜ್ಯಾದ್ಯಂತ ಬಿಡುಗಡೆಗೊಂಡು ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿರುವ 'ಐ ಯಾಂ ಗಾಡ್' ಕನ್ನಡ ಚಲನಚಿತ್ರದ ನಾಯಕ ನಟ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಸಿ.ಬಸವೇಗೌಡರ ಪುತ್ರ ರವಿಗೌಡ ಮತ್ತು ಸಿ.ಬಸವೇಗೌಡ ಅವರನ್ನು ಮೈಸೂರಿನ ಜಯಲಕ್ಷ್ಮೀಪುರಂ ಬಿ.ಎಂ.ಹ್ಯಾಬಿಟೇಟ್ ಮಾಲ್‌ನಲ್ಲಿರುವ ಡಿ.ಆರ್.ಸಿ.ಯಲ್ಲಿ ಅಭಿಮಾನಿಗಳು ಆತ್ಮೀಯವಾಗಿ ಸನ್ಮಾನಿಸಿದರು.

ಅರ್ಜಿ ಆಹ್ವಾನ

ಮೈಸೂರು,ನ.11–ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಗೌರವಧನದ ಆಧಾರದ ಮೇಲೆ ಮೈಸೂರು ತಾಲೂಕಿನ ಉದ್ಬೂರು, ದೂರ ಹಾಗೂ ಮಾರ್ಬಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿಯಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ಸಂಪರ್ಕಿಸುವುದು, ದೂ.ಸಂ: 0821–2490111, 0821–2490333 ಅನ್ನು ಸಂಪರ್ಕಿಸಬಹುದು

ಅಂಗನವಾಡಿ ಕಾರ್ಯಕರ್ತೆ, ಮಿನಿ ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ನ.11– ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆ ವತಿಯಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಬಿಳಿಗೆರೆ ಯೋಜನೆ ವ್ಯಾಪ್ತಿಯಡಿ ಖಾಲಿ ಇರುವ 4 ಅಂಗನವಾಡಿ ಕಾರ್ಯಕರ್ತೆ, 1 ಮಿನಿ ಅಂಗನವಾಡಿ ಕಾರ್ಯಕರ್ತೆ, ಹಾಗೂ 21 ಅಂಗನವಾಡಿ ಸಹಾಯಕಿಯರು ಒಟ್ಟು 26 ಗೌರವಧನ ಸೇವೆಯ ಹುದ್ದೆಗಳ ಭರ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಲ್ಲದೆ, ಹುಣಸೂರು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ 13 ಅಂಗನವಾಡಿ ಕಾರ್ಯಕರ್ತೆ ಮತ್ತು 56 ಅಂಗನವಾಡಿ ಸಹಾಯಕಿಯರ ಗೌರವಧನ ಸೇವೆಯ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಇದಲ್ಲದೆ, ಪಿರಿಯಾಪಟ್ಟಣ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ 15 ಅಂಗನವಾಡಿ ಕಾರ್ಯಕರ್ತೆ ಮತ್ತು 52 ಅಂಗನವಾಡಿ ಸಹಾಯಕಿಯರ ಗೌರವಧನ ಸೇವೆಯ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು https://karnemakaone.kar.nic.in/abcd/ ಮೂಲಕ ಡಿಸೆಂಬರ್ 8ರ ಸಂಜೆ 5.30 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಸ್ಟ್ರೋಕ್ ಗುಣಪಡಿಸುವ ವಿಧಾನದ ಬಗ್ಗೆ ಮಣಿಪಾಲ್ ಆಸ್ಪತ್ರೆ ತಜ್ಞರ ಸಲಹೆ



ಮಣಿಪಾಲ್ ಆಸ್ಪತ್ರೆಯಲ್ಲಿ 'ಮಣಿಪಾಲ್ ಹೆಲ್ತ್ ಸಮ್ಮಿಟ್'ನ ವಿಶೇಷ ಆವೃತ್ತಿ ಆಯೋಜಿಸಿತ್ತು.

ಮೈಸೂರು: ಪಾರ್ಶ್ವವಾಯು (ಸ್ಟ್ರೋಕ್) ಚಿಕಿತ್ಸೆಯಲ್ಲಿ ಸಮಯದ ಜಾಗೃತಿ ಮೂಡಿಸುವ ಸಲುವಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ 'ಮಣಿಪಾಲ್ ಹೆಲ್ತ್ ಸಮ್ಮಿಟ್'ನ ವಿಶೇಷ ಆವೃತ್ತಿ ಆಯೋಜಿಸಿತ್ತು.

ಸಮಯೋಚಿತ ಚಿಕಿತ್ಸೆ ಮೂಲಕ ಪಾರ್ಶ್ವವಾಯುವಿನಿಂದಾಗುವ ದುಷ್ಪರಿಣಾಮಗಳನ್ನು ಹೇಗೆ ತಡೆಯಬಹುದು ಎಂಬುದರ ಮೇಲೆ 100ಕ್ಕೂ ಅಧಿಕ ಆಸಕ್ತರು ಸೇರಿದ್ದ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು. ಪಾರ್ಶ್ವವಾಯುವಿನ ಲಕ್ಷಣಗಳು ಕಾಣಿಸಿಕೊಂಡ ಆರಂಭಿಕ 4.5 ಗಂಟೆಗಳ ಅವಧಿಯನ್ನು 'ಗೋಲ್ಡನ್ ಅವರ್' (ಸುವರ್ಣಾವಧಿ) ಎಂದು ಪರಿಗಣಿಸಲಾಗುತ್ತದೆ. ಈ ನಿರ್ಣಾಯಕ ಅವಧಿಯೊಳಗೆ ರೋಗಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಲಭ್ಯವಾದರೆ, ಸಂಭವನೀಯ ಶಾಶ್ವತ ಅಂಗ ವೈಕಲ್ಯ ತಡೆಯಬಹುದು. ಮೆದುಳಿಗೆ ಆಗುವ ಹಾನಿಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು ಎಂದು ತಜ್ಞರು ಮನವರಿಕೆ ಮಾಡಿಕೊಟ್ಟರು.

ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಸೀನಿಯರ್ ಕನ್ಸಲ್ಟೆಂಟ್ ನ್ಯೂರೋಸರ್ಜರಿ, ಸೆರೆಬ್ರೋವಾಸ್ಕುಲರ್ ಮತ್ತು ಎಂಡೋವಾಸ್ಕುಲರ್ ಸರ್ಜರಿ ಡಾ. ಎ.ಆರ್.ಮಕ್ಸೂದ್ ಅಹ್ಮದ್ ಮಾತನಾಡಿ, ದೇಹಕ್ಕೆ ಅತಿ ಕಡಿಮೆ ಹಾನಿ ಉಂಟುಮಾಡುವ ಎಂಡೋವಾಸ್ಕುಲರ್ ಚಿಕಿತ್ಸಾ ವಿಧಾನಗಳು, ವಿಶೇಷವಾಗಿ ಇಸ್ಕೆಮಿಕ್ ಸ್ಟ್ರೋಕ್ (ರಕ್ತ ಹೆಪ್ಪುಗಟ್ಟುವಿಕೆಯಿಂದ ಉಂಟಾಗುವ ಪಾರ್ಶ್ವವಾಯು) ಪೀಡಿತರಲ್ಲಿ ಚೇತರಿಕೆಯ ಸಾಧ್ಯತೆಗಳನ್ನು ಹೇಗೆ ಹೆಚ್ಚಿಸಿವೆ ಎಂಬುದನ್ನು ವಿವರಿಸಿದರು. ಆದರೆ, ರೋಗಿಯು ಸಕಾಲದಲ್ಲಿ ಆಸ್ಪತ್ರೆ ತಲುಪಿದಾಗ ಮಾತ್ರ ಈ ಚಿಕಿತ್ಸೆಗಳು ಫಲಪ್ರದವಾಗುತ್ತವೆ ಎಂದು ಸ್ಪಷ್ಟಪಡಿಸಿದರು.

ಪಾರ್ಶ್ವವಾಯು ಖಂಡಿತವಾಗಿಯೂ ಚಿಕಿತ್ಸೆ ನೀಡಬಹುದಾದ ಕಾಯಿಲೆ. ಆದರೆ ರೋಗಿಗಳು ತಕ್ಷಣವೇ ಆಸ್ಪತ್ರೆಗೆ ಧಾವಿಸುವುದು ಮುಖ್ಯ. 'ಗೋಲ್ಡನ್ ಅವರ್' ಅವಧಿಯೊಳಗೆ ಇಸ್ಕೆಮಿಕ್ ಸ್ಟ್ರೋಕ್ ರೋಗಿಗಳು ಆಸ್ಪತ್ರೆಗೆ ತಲುಪಿದರೆ, ಥ್ರೊಂಬೋಲಿಸಿಸ್, ಮೆಕ್ಯಾನಿಕಲ್ ಥ್ರೊಂಬೆಕ್ಟಮಿಯಂತಹ ಸುಧಾರಿತ ಚಿಕಿತ್ಸೆ ಬಳಸಿ ಮೆದುಳಿನ ರಕ್ತ ಸಂಚಾರ ಸುಗಮಗೊಳಿಸಬಹುದು. ಇದರಿಂದ ಮೆದುಳಿನ ಜೀವಕೋಶಗಳು ನಾಶವಾಗುವುದನ್ನು ತಡೆದು, ಚಿಕಿತ್ಸೆಯ ಫಲಿತಾಂಶವನ್ನು ಸುಧಾರಿಸಬಹುದು. ಇದರ ಹಿಂದಿರುವ ಪ್ರಮುಖ ಸಂದೇಶ ಒಂದೇ. ಸಮಯವನ್ನು ವ್ಯರ್ಥ ಮಾಡಬೇಡಿ, ತಕ್ಷಣವೇ ಆಸ್ಪತ್ರೆಗೆ ಧಾವಿಸಿ ಎಂದು ಕಿವಿಮಾತು ಹೇಳಿದರು.

ಕನ್ನಡಿಗರು ಯಾವ ಭಾಷೆಯ ಪ್ರಭಾವಕ್ಕೂ ಒಳಗಾಗಬಾರದು

● ಕನ್ನಡ ಶಾಸ್ತ್ರೀಯ ಭಾಷೆ ಅತ್ಯುನ್ನತ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ತಳವಾರ್ ಕಿವಿಮಾತು ● ಶ್ರೀ ನಟರಾಜ ಪ್ರತಿಷ್ಠಾನದಲ್ಲಿ ಕನ್ನಡ ರಾಜ್ಯೋತ್ಸವ

ಮೈಸೂರು: ಕನ್ನಡಿಗರಾದ ನಾವು ಅನ್ಯ ಭಾಷೆಯ ಪ್ರಭಾವಕ್ಕೆ ಒಳಗಾಗಬಾರದು ಎಂದು ಕನ್ನಡ ಶಾಸ್ತ್ರೀಯ ಭಾಷೆ ಅತ್ಯುನ್ನತ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್ ಹೇಳಿದರು.

ನಗರದ ಶ್ರೀ ನಟರಾಜ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ಕನ್ನಡ ಭಾಷೆಯು ಆಯಾಯ ಕಾಲಘಟ್ಟದಲ್ಲಿ ಸಂಸ್ಕೃತ, ಪ್ರಾಕೃತ, ಹಿಂದಿ ಭಾಷೆಗಳಿಗೆ ಒಳಗಾಗಿದ್ದರೂ ತನ್ನದೇ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ಈಗ ಇಂಗ್ಲಿಷ್ ಭಾಷೆಯ ಪ್ರಭಾವಕ್ಕೆ ಒಳಗಾಗಿದೆ ಎಂದರು.

ಆದರೆ, ಇಂಗ್ಲಿಷ್ ಭಾಷೆ ಅಂಬೆಗಾಲಿಡುವಾಗಲೇ ಕನ್ನಡ ಭಾಷೆ ಪ್ರಬುದ್ಧವಾಗಿತ್ತು. ಬಿ.ಎಂ.ಶ್ರೀಕಂಠಯ್ಯನವರು ಒಂದು ಕೈಯ್ಯಲ್ಲಿ ಕುಮಾರವ್ಯಾಸನ ಕೃತಿಯನ್ನು, ಮತ್ತೊಂದು ಕೈಯಲ್ಲಿ ಪಂಪನ ಕೃತಿಯನ್ನು ಹಿಡಿದುಕೊಂಡು ಪ್ರಪಂಚವನ್ನು ಸುತ್ತಿಕೊಂಡು ಬರುತ್ತೇನೆ ಎಂದು ಇಂಗ್ಲಿಷ್ ಬರುವ ಮೊದಲೇ ಅಭಿಮಾನದಿಂದ ನುಡಿದಿದ್ದರು. ಕನ್ನಡಿಗರಾದ ನಾವು ಬೇರೆ ಭಾಷೆಯ ಪ್ರಭಾವಕ್ಕೆ ಒಳಗಾಗದೇ ಅನ್ಯ ಭಾಷಿಕರಿಗೆ ಕನ್ನಡ ಕಲಿಸುವುದರ ಜೊತೆಗೆ ನೆರೆ–ಹೊರೆಯವರೊಂದಿಗೆ ಸೌಹಾರ್ದದಿಂದ ಬದುಕಬೇಕಾಗಿದೆ. ಕುವೆಂಪು ಅವರ ಮಾತಿನಂತೆ ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದು, ರಾಷ್ಟ್ರೀಯತೆಯನ್ನು ಒಪ್ಪಿಕೊಂಡು ನೆರೆ–ಹೊರೆಯವರನ್ನು ಪ್ರೀತಿಸಿಕೊಂಡು ಕನ್ನಡ ಬೆಳೆಸಬೇಕಾಗಿದೆ ಎಂದು ಹೇಳಿದರು.



ಶ್ರೀ ನಟರಾಜ ಪ್ರತಿಷ್ಠಾನದಿಂದ ನಟರಾಜ ಸಭಾಭವನದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ 70 ಕನ್ನಡದ ದೀಪಗಳನ್ನು ವಿದ್ಯಾರ್ಥಿನಿಯರು ಬೆಳಗಿದರು. ಪ್ರೊ.ತಳವಾರ್, ಪ್ರೊ.ಶಿವರಾಜಪ್ಪ, ಅಂಶಿ ಪ್ರಸನ್ನಕುಮಾರ್, ಎಂ.ಆರ್.ಸತ್ಯನಾರಾಯಣ, ಉಡಿಗಾಲ ಮಹದೇವಪ್ಪ, ಡಾ.ಶಾರದಾ, ಸುನೀತಾ ರಾಣಿ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ ಮಾತನಾಡಿ, ನಮ್ಮ ನಾಲಿಗೆಯ ಭಾಷೆ ಮತ್ತು ತನು–ಮನದ ಭಾಷೆ ಕನ್ನಡ. ಕನ್ನಡ ಭಾಷೆಗೆ ಹೃದಯವನ್ನು ಕಂಪಿಸುವ ಮತ್ತು ಕಿವಿಯನ್ನು ನಿಮಿರಿಸುವ ಶಕ್ತಿ ಇದೆ. ನಮ್ಮ ಕನ್ನಡ ಪ್ರೀತಿ ಪ್ರತಿ ವರ್ಷ ನವೆಂಬರ್ ತಿಂಗಳಿಗೆ ಸೀಮಿತವಾಗದೇ ವರ್ಷಪೂರ್ತಿ ಕನ್ನಡ ಭುವನೇಶ್ವರಿ ರೇಷ್ಮೆ ಸೀರೆಯುಟ್ಟು ಕಂಗೊಳಿಸಬೇಕು ಎಂದು ಅಭಿಪ್ರಾಯಪಟ್ಟರು.

ಈ ಬಾರಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸನ್ಮಾನ ಸ್ವೀಕರಿಸಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲೇ ಕನ್ನಡಿಗರು ಒಂದಾಗಬೇಕು ಎಂಬ ಪರಿಕಲ್ಪನೆಯಲ್ಲಿ ನಮ್ಮ ಕವಿಗಳಾದ ಹುಯಿಲಗೋಳ ನಾರಾಯಣರಾಯರು, ಕುವೆಂಪು ಮತ್ತು ಡಿ.ಎಸ್.ಕರ್ಕಿ ಕನ್ನಡದ ಗೀತೆಗಳನ್ನು ರಚಿಸಿದ್ದಾರೆ. ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಕನ್ನಡಿಗರ ಹೋರಾಟದ ಫಲವಾಗಿ ಕನ್ನಡ ರಾಜ್ಯ ಉದಯವಾಯಿತು. ನಮ್ಮ ಕನ್ನಡ ಭಾಷೆಯು ಎಷ್ಟು ಪ್ರಬುದ್ಧವಾಗಿದೆ, ಶ್ರೀಮಂತವಾಗಿದೆ ಎಂದರೆ ಎಂಟು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವುದೇ ಇದಕ್ಕೆ ಸಾಕ್ಷಿ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್.ಶಿವರಾಜಪ್ಪ ಮಾತನಾಡಿ, ಕನ್ನಡ ತೋರಿಕೆಯ ಭಾಷೆಯಾಗಬಾರದು. ಹೃದಯದ ಭಾಷೆಯಾಗಬೇಕು, ಅನ್ನದ ಭಾಷೆಯಾಗಬೇಕು. ಕನ್ನಡ ಭಾಷೆ ಕಲಿಕೆ ಮತ್ತು ಬೆಳೆಸುವಿಕೆಯಲ್ಲಿ ಶ್ರೀ ನಟರಾಜ ಪ್ರತಿಷ್ಠಾನವು ಅಗ್ರಸ್ಥಾನದಲ್ಲಿದೆ ಎಂದರು.

ರಾಜ್ಯ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಗೌರಿಶಂಕರ ನಂದಿಧ್ವಜ ಸಂಘದ ಅಧ್ಯಕ್ಷ ಉಡಿಗಾಲ ಮಹದೇವಪ್ಪ ಮಾತನಾಡಿದರು.

ಸುನೀತಾರಾಣಿ ಸ್ವಾಗತಿಸಿದರು, ಶ್ರೀ ನಟರಾಜ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಎಂ.ಆರ್. ಪವಿತ್ರಾ ವಂದಿಸಿದರು. ಶ್ರೀ ನಟರಾಜ ಆಂಗ್ಲಮಾಧ್ಯಮ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಎಚ್.ಜಿ. ಮಮತಾ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮೈಸೂರು ಮಿತ್ರ
ಬುಧವಾರ 12 ನವೆಂಬರ್ 2025

ಸಮ ಸಮಾಜಕ್ಕೆ ಶ್ರಮಿಸಿದವರು ಕನಕದಾಸರು

ಕೆ.ಆರ್.ಪೇಟೆ, ನ.11– ದಾಸಶ್ರೇಷ್ಠ ಭಕ್ತ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತಿದ್ದಿದವರು. ಬಡವರು, ಶೋಷಿತರು, ಹಿಂದುಳಿದ ಸಮುದಾಯದ ಪರವಾದ ಧ್ವನಿಯಾಗಿ 15ನೇ ಶತಮಾನದಲ್ಲಿಯೇ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಮಹಾನ್ ಸಂತ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.


ಶಾಸಕ ಹೆಚ್.ಟಿ.ಮಂಜು ಸೇರಿ ಇತರ ಗಣ್ಯರನ್ನು ಅಭಿನಂದಿಸಲಾಯಿತು.

ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲಾ ಆವರಣದಲ್ಲಿ (ಶತಮಾನದ ಶಾಲೆ) ತಾಲೂಕು ಆಡಳಿತವು ಆಯೋಜಿಸಿದ್ದ 538ನೇ ಕನಕದಾಸ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನಕದಾಸರ ಕಾಲದಲ್ಲಿ ಜಾತಿಯ ವ್ಯವಸ್ಥೆ ಉಚ್ಚ್ರಾಯ ಸ್ಥಿತಿಯಲ್ಲಿದ್ದ 15–16ನೇ ಶತಮಾನದ ಅಂದಿನ ಕಾಲಘಟ್ಟದಲ್ಲಿ ಶೂದ್ರರಿಗೆ ಮಠ ಮಾನ್ಯಗಳಲ್ಲಿ ಪ್ರವೇಶವಿರಲಿಲ್ಲ. ಕನಕರು ತಮ್ಮ ಜ್ಞಾನದ ಮೂಲಕ ಉಡುಪಿಯ ಶ್ರೀ ಮಠವನ್ನು ಪ್ರವೇಶಿಸಿ ಜ್ಞಾನ ಸಂಪಾದನೆ ಮಾಡಿದರು. ಜಗತ್ತಿನಲ್ಲಿ ದೇವರು ಇರದ ಸ್ಥಳವೇ ಇಲ್ಲ ಎಂಬ ಸಾರ್ವಕಾಲಿಕ ಸತ್ಯವನ್ನು ಜಗತ್ತಿಗೆ ತೋರಿಸಿದವರು.

ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ಕನಕರ ಭಾವಚಿತ್ರವನ್ನು ಅನಾವರಣ ಮಾಡಿದರು.

ಹುಣಸೂರಿನ ಸಾಹಿತಿ ಜೆ.ಮಹದೇವ್ ಕಲ್ಕುಣಿಕೆ ಅವರು ಕನಕರ ಚಿಂತನೆಗಳನ್ನು ಕುರಿತು ಪ್ರಧಾನ ಉಪನ್ಯಾಸ ನೀಡಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ. ಕುಮಾರ್, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ತಾ.ಪಂ. ಇಒ ಕೆ.ಸುಷ್ಮ, ಸಮಾಜಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್, ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಟಿಎಪಿಸಿಎಂಎಸ್ ನಿರ್ದೇಶಕ ನಾಗರಘಟ್ಟ ದಿಲೀಪ್ ಕುಮಾರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಕೆ.ಪುರುಷೋತ್ತಮ್ ಇದ್ದರು.

ಕಾರ್ಯಕ್ರಮಕ್ಕೂ ಮುನ್ನ ಕನಕದಾಸರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ತಾಲೂಕಿನ ಎಂ.ಹೊಸೂರು ಗ್ರಾಮಸ್ಥರು ವೀರಗಾಸೆ ಮಕ್ಕಳ ಕುಣಿತವನ್ನು ಹಾಕುವ ಮೂಲಕ ಮೆರವಣಿಗೆಗೆ ಕಳೆ ತಂದರು.

ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ, ನಿರ್ದೇಶಕರಿಗೆ ಸನ್ಮಾನ


ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಪತ್ರಕರ್ತ ಚಿನಕುರಳಿ ಲೋಕೇಶ್, ನಿರ್ದೇಶಕರಾಗಿ ಆಯ್ಕೆಯಾದ ಹರಳಹಳ್ಳಿ ಕುಮಾರಸ್ವಾಮಿ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಿನಕುರಳಿಯ ಪ್ರವಾಸಿ ಮಂದಿರದಲ್ಲಿ ಅಭಿನಂದಿಸಿದರು. ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹರವು ಚಂದ್ರಕೀರ್ತಿ, ಮಾಜಿ ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಜಯರಾಮು, ಉಪಾಧ್ಯಕ್ಷ ಎಸ್.ನಾಗಸುಂದರ್, ಜಿಲ್ಲಾ ಮಾಜಿ ನಿರ್ದೇಶಕ ಚನ್ನಮಾದೇಗೌಡ, ಪತ್ರಕರ್ತರಾದ ಅನೀಲ್, ರವಿಕುಮಾರ್, ಕೃಷ್ಣೇಗೌಡ ಇದ್ದರು.

ಕಾರ್ಮಿಕರು ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ

ಅಸಂಘಟಿತ ಕಾರ್ಮಿಕರಿಗೆ ಮಂಡ್ಯದಲ್ಲಿ ಸ್ಮಾರ್ಟ್ ಕಾರ್ಡ್ ವಿತರಣೆ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಮನವಿ

ಮಂಡ್ಯ: ಅಸಂಘಟಿತ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಕಾರ್ಮಿಕರಿಗೆ ಸೌಲಭ್ಯ, ಅನುಕೂಲತೆಗಳನ್ನು ತಿಳಿಸಲು ಪ್ರತಿ ಜಿಲ್ಲೆಗಳಲ್ಲಿ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದ್ದು ರಾಜ್ಯದಲ್ಲಿನ ಪ್ರತಿಯೊಬ್ಬ ಕಾರ್ಮಿಕರು ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾರ್ಮಿಕ ಸಂತೋಷ್ ಲಾಡ್ ತಿಳಿಸಿದರು.

ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು ಸಾರಿಗೆ ಇಲಾಖೆ ಹಾಗೂ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಮಂಡ್ಯ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

16 ರಿಂದ 18 ಗಂಟೆ ರಸ್ತೆಯಲ್ಲಿ ಸಂಚರಿಸಿ ಜೀವ ಪಣಕ್ಕಿಟ್ಟು ಸ್ವಿಗ್ಗಿ, ಜುಮೋಟೊ ಕೆಲಸ ಮಾಡುತ್ತಿರುವ ಯುವಕರಿಗೆ ಹಾಗೂ ಕಾರ್ಮಿಕರಿಗೆ ಅಪಘಾತ ವಿಮೆ ನೀಡಲು ನೂತನ ಯೋಜನೆ ಜಾರಿಗೆ ತರಲಾಗಿದೆ. ಅಪಘಾತದಲ್ಲಿ ಮರಣ ಹೊಂದಿದರೆ 5 ಲಕ್ಷ ಪರಿಹಾರ, ಅಂಗ ವೈಫಲ್ಯತೆ ಹೊಂದಿದರೆ 2 ಲಕ್ಷ ಪರಿಹಾರ ಹಾಗೂ ಗರಿಷ್ಟ 1 ಲಕ್ಷದಷ್ಟು ಆಸ್ಪತ್ರೆಗೆ ತಗಲುವ ವೆಚ್ಚವನ್ನು ಭರಿಸಲಾಗುವುದು ಎಂದರು.

ಕುಟುಂಬದ ಜವಾಬ್ದಾರಿ ನಿರ್ವಹಿಸುವ ಯುವಕರ ಜೀವ ಅಮೂಲ್ಯವಾದದ್ದು ಪ್ರತಿಯೊಬ್ಬರೂ ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸಲು ಮರೆಯದಿರಿ. ಹಾಗೆಯೇ ಪ್ರತಿ ತಿಂಗಳು ಜಿಲ್ಲೆಯಲ್ಲಿ ಹೆಲ್ಮೆಟ್ ಬಳಕೆಯಿಂದಾಗುವ ಸದುಪಯೋಗ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಎಂದು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.

ಪ್ರಮುಖವಾಗಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಯುವಕರಿಗೆ ಖಾಸಗಿ ವಲಯದಲ್ಲಿ ಉದ್ಯೋಗ ಅವಕಾಶ ಕಲ್ಪಿಸಲು ಆಶಾದೀಪ ಯೋಜನೆಯನ್ನು ಜಾರಿಗೆ ತಂದಿದ್ದು, ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಉದ್ಯೋಗ ನೀಡುವ ಕಂಪನಿಗಳಿಗೆ, ಮಾಲೀಕರಿಗೆ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಮಾಸಿಕ ವೇತನ ನೀಡಲು ಶೇಕಡಾ 50% ಧನ ಸಹಾಯವನ್ನು ಆಶಾದೀಪ ಯೋಜನೆಯಡಿ ಕಾರ್ಮಿಕ ಇಲಾಖೆ ನೀಡಲಿದೆ ಎಂದರು.

101 ಅಸಂಘಟಿತ ಕಸುಬು ಮಾಡುವ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಿ ಲಕ್ಷಾಂತರ ಜನರಿಗೆ ಕಾರ್ಮಿಕ ಕಾರ್ಡ್ ವಿತರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕೃಷಿ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಲಾಗುವುದು ಎಂದು ಹೇಳಿದರು.


ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಅರಿವು ಕಾರ್ಯಕ್ರಮದಲ್ಲಿ ಸಚಿವ ಸಂತೋಷ್ ಲಾಡ್ ಸ್ಮಾರ್ಟ್ ಕಾರ್ಡ್ ವಿತರಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ.ಉದಯ್ ಇತರರಿದ್ದರು.

ಒಂದು ಸಿನಿಮಾ ಯಶಸ್ವಿಯಾಗಲು ಸಿನಿಮಾರಂಗದಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಶ್ರಮವು ಪ್ರಮುಖವಾಗಿರುತ್ತದೆ. ಸಿನಿಮಾ ಕ್ಷೇತ್ರದ ಕಾರ್ಮಿಕರಿಗೆ ಅನುಕೂಲವಾಗಲು ನೂತನ ಸೌಲಭ್ಯ ಯೋಜನೆ ತರಲು ಕಾರ್ಮಿಕ ಇಲಾಖೆ ಮುಂದಾಗಿದೆ ಎಂದರು.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ, ಶಾಸಕ ಪಿ.ರವಿಕುಮಾರ್ ಮಾತನಾಡಿದರು.

ಜಿಲ್ಲೆಯಲ್ಲಿದ್ದ ಹಕ್ಕುಪತ್ರ ಸಮಸ್ಯೆ ಪರಿಹರಿಸಿದ್ದು ಮುಖ್ಯಮಂತ್ರಿಯವರ ಅನುಮತಿ ಮೇರೆಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಆಯೋಜಿಸಲಾಗುವುದು. ಮನೆಯಿಲ್ಲದವರಿಗಾಗಿ ನಿವೇಶನ ನೀಡಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಜನರಿಗೆ ಮನೆ ನೀಡಲು ನಿವೇಶನ ಗುರುತಿಸಲಾಗಿದೆ ಮತ್ತು ನಿವೇಶನ ನೀಡಲು ಕಾರ್ಯಕ್ರಮ ಆಯೋಜಿಸಲಾಗುವುದು. ಮುಂದೆ ಮಂಡ್ಯ ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶಾಸಕರಾದ ಕೆ.ಎಂ. ಉದಯ್, ದರ್ಶನ್ ಪುಟ್ಟಣ್ಣಯ್ಯ, ಕರ್ನಾಟಕ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೆ.ಆರ್.ಪೇಟೆಯಲ್ಲಿ ಮತಗಳ್ಳತನ ಕುರಿತು ಅಭಿಯಾನ


ದೇಶದಾದ್ಯಂತ ನಡೆಯುತ್ತಿರುವ ಮತಗಳ್ಳತನ ಅಭಿಯಾನದಡಿ ಕೆ.ಆರ್.ಪೇಟೆಯ ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್ ನೇತೃತ್ವದಲ್ಲಿ ಕೆ.ಆರ್.ಪೇಟೆ ಬೀದಿ ಬದಿ ವ್ಯಾಪಾರಿಗಳಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಂದ ಪ್ರತಿಭೆ ಅನಾವರಣ



ಮೇಲುಕೋಟೆ: ಮೇಲುಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಮಂಗಳವಾರ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿಯಲ್ಲಿ ಪ್ರಾಥಮಿಕ ಶಾಲಾ ವಿಭಾಗದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆ ಅನಾವರಣಗೊಳಿಸಿದರು.

ಮೇಲುಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯ ಮುಖ್ಯೋಪಾಧ್ಯಾಯ ಸಂತಾನರಾಮನ್ ಮತ್ತು ಸಹಶಿಕ್ಷಕಿ ಜಯಂತಿ ಸಹಕಾರದಲ್ಲಿ ಪ್ರತಿಭಾಕಾರಂಜಿ ಯಶಸ್ವಿಯಾಗಿ ನಡೆಯಿತು. ಮಕ್ಕಳು ಸೆಲ್ಪಿ ತೆಗೆದುಕೊಳ್ಳಲು ಅಳವಡಿಸಿದ್ದ ಆನೆ ಅಂಭಾರಿ ಮಾದರಿಯ ಸೆಲ್ಪಿಪಾಯಿಂಟ್ ಮಕ್ಕಳ ಆಕರ್ಷಣೀಯ ಕೇಂದ್ರವಾಗಿತ್ತು ಗೊಂಬೆ ತಯಾರಿಕೆಯಲ್ಲಿ ಮಕ್ಕಳು ಮಾಡಿದ ಮೊಸಳೆ, ಆಮೆ, ಗಣಪತಿ, ಡ್ಯಾಮ್, ಅಗ್ನಿಪರ್ವತ, ಮಾದರಿಗಳು ಗಮನಸೆಳೆದರೆ ಚಿತ್ರಕಲಾ ಸ್ಪರ್ಧೆಯಲ್ಲಿ ಮಕ್ಕಳು ಬಿಡಿಸಿದ ಪರಿಸರ ಪ್ರೇಮದ ಚಿತ್ರಗಳು ಮನಸೂರೆಗೊಂಡವು. ನ.13 ಗುರುವಾರ ಮೇಲುಕೋಟೆ ಸಮೀಪದ ಜಕ್ಕನಹಳ್ಳಿ ಕ್ಲಸ್ಟರ್ ಮಕ್ಕಳ ಪ್ರತಿಭಾ ಕಾರಂಜಿ ನಡೆಯಲಿದೆ ಎಂದು ಸಿಆರ್.ಪಿ ಬೆಟ್ಟಸ್ವಾಮಿಗೌಡ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಫ್ಲೈಓವರ್ ಬಗ್ಗೆ ತೀರ್ಮಾನಿಸಿಲ್ಲ

ಈ ಹಿನ್ನೆಲೆಯಲ್ಲಿ ಎರಡು ಕಟ್ಟಡ ನೆಲಸಮಗೊಳಿಸಿ ಹೊಸದಾಗಿ ಕಟ್ಟುವುದು ಬಿಟ್ಟು ಪರ್ಯಾಯ ಮಾರ್ಗವಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವಂತೆ ಸರ್ಕಾರದ ಲೀಗಲ್ ಟೀಂಗೆ ಸೂಚನೆ ನೀಡಿದ್ದೇನೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ 400 ಕೋಟಿ ವೆಚ್ಚದಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿ ಆರಂಭಿಸುವಂತೆ ಸೂಚನೆ ನೀಡಿದ್ದೇನೆ. ಆದರೆ ಯಾವುದೇ ಕಾರಣಕ್ಕೂ ಗುಣಮಟ್ಟದಲ್ಲಿ ರಾಜೀ ಮಾಡಿಕೊಳ್ಳುವುದಿಲ್ಲ. ವೈಟ್ ಟ್ಯಾಪಿಂಗ್ ಕಾಮಗಾರಿಯ ಗುಣಮಟ್ಟ ಪರಿಶೀಲನೆ ನಡೆಸಲು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ನೇಮಕ ಮಾಡಿದ್ದೇನೆ. ಇನ್ನೆರಡು ವರ್ಷದಲ್ಲಿ ಈ ಕಾಮಗಾರಿ ಪೂರ್ಣಗೊಳಿಸುವಂತೆ ತಾಕೀತು ಮಾಡಿದ್ದೇನೆ ಎಂದು ಹೇಳಿದರು.

ಆರು ತಿಂಗಳ ನಂತರ ನಿನ್ನೆ ಕೆಡಿಪಿ ಸಭೆ ನಡೆಸಿದ್ದೇನೆ. ಇದು ನನ್ನ ಜಿಲ್ಲೆ ಆಗಿದ್ದರಿಂದ ನಾನೇ ಕೆಡಿಪಿ ಸಭೆ ಮಾಡಬೇಕೆಂದು ನಿರ್ಧಾರ ಮಾಡಿದ್ದ ಕಾರಣ ವಿಳಂಬವಾಯಿತು. ಕಂದಾಯ ಸಂಬಂಧಿತ ಸಮಸ್ಯೆ ಹೊತ್ತು ಜನರು ನನ್ನ ಹುಡುಕಿಕೊಂಡು ಬೆಂಗಳೂರಿಗೆ ಬರುತ್ತಾರೆ.

> “ನವೆಂಬರ್ 15 ರಂದು ದೆಹಲಿಗೆ ಭೇಟಿ ನೀಡಲಿದ್ದು, ಹೈಕಮಾಂಡ್ ಭೇಟಿಗೆ ಸಮಯ ಕೇಳಿದ್ದೇನೆ. ನಮ್ಮ ಪಕ್ಷದ ಹಿರಿಯ ಮುಖಂಡರೂ ಆದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಕಾರ್ಯಕ್ರಮವೊಂದಕ್ಕೆ ನನ್ನನ್ನು ಆಹ್ವಾನಿಸಿದ್ದಾರೆ. ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ರಾಹುಲ್ ಗಾಂಧಿ ಭೇಟಿ ಮಾಡಬೇಕೆಂದು ನಿರ್ಧರಿಸಿದ್ದೇನೆ. ಅವರು ಸಮಯ ಕೊಟ್ಟರೆ ಭೇಟಿ ಮಾಡುತ್ತೇನೆ ಎಂದು ಹೇಳಿದರು. ಇದೇ ವೇಳೆ ಸಚಿವ ಸಂಪುಟ ಪುನಾರಚನೆ ಬಗ್ಗೆ ಚರ್ಚೆ ನಡೆಸುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಬೆಳಿಗ್ಗೆಯಿಂದ ರಾತ್ರಿ ತನಕ ನನಗಾಗಿ ಕಾಯುತ್ತಾರೆ. ಅಧಿಕಾರಿಗಳು ಕಚೇರಿಯಲ್ಲೆ ಇದ್ದು ಜನರ ಸಮಸ್ಯೆ ಪರಿಹಾರ ಮಾಡಿದ್ದರೆ ಅವರೇಕೆ ನನ್ನ ಬಳಿ ಬರುತ್ತಿದ್ದರು. ಈ ಹಿನ್ನೆಲೆಯಲ್ಲಿ ಜನರನ್ನು ಅನಗತ್ಯವಾಗಿ ಅಲೆಸದಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ ಎಂದು ಸಿದ್ದರಾಮಯ್ಯ ಮಾಹಿತಿ ನೀಡಿದರು.

ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಕೆಲಸ ಮಾಡಬೇಕು, ಇದನ್ನು ಯಾರು ಪಾಲಿಸುತ್ತಿಲ್ಲವೋ ಅಂತಹವರ ಬಗ್ಗೆ ವರದಿ ನೀಡಿ, ನಾನು ಕ್ರಮ ಕೈಗೊಳ್ಳುತ್ತೇನೆ ಎಂದು ಕಟ್ಟು ನಿಟ್ಟಿನ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ಡಿಸಿ, ಎಸಿ ಮತ್ತು ತಹಶೀಲ್ದಾರ್ ಅವರ ಕೋರ್ಟ್‌ನಲ್ಲಿ ನ್ಯಾಯ ವಿಳಂಬ ಆಗಬಾರದು. ಶೀಘ್ರ ವಿಚಾರಣೆ ನಡೆಸಿ, ನಿಗದಿತ ಅವಧಿಯಲ್ಲಿ ಪ್ರಕರಣದ ತೀರ್ಪು ನೀಡಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯಲ್ಲಿರುವ ಹಲವು ಕಚೇರಿಗಳಿಗೆ ಆಗಾಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸಿದ್ದರಾಮಯ್ಯ ಸೂಚನೆ ನೀಡಿದರು. ಪ್ರತಿಯೊಬ್ಬ ಅಧಿಕಾರಿ ದೈನಂದಿನ ಕೆಲಸ ಕಾರ್ಯ ನಿರ್ವಹಣೆ ಬಗ್ಗೆ ಡೈರಿ ಬರೆಯಬೇಕು ಎಂದು ಸೂಚಿಸಿರುವುದಾಗಿ ಹೇಳಿದರು.

ಕಮಿಷನರ್ ಹೊಣೆ!

ಈ ಹಿನ್ನೆಲೆಯಲ್ಲಿ ರೌಡಿ ಪರೇಡ್ ಮಾಡಿಸಿ ಅವರಿಗೆ ಎಚ್ಚರಿಕೆ ನೀಡಬೇಕು. ಐಜಿಪಿ, ಕಮಿಷನರ್ ಹಾಗೂ ಎಸ್ಪಿ ಅವರು ಡಿವೈಎಸ್ಪಿ, ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಅವರ ಕಾರ್ಯವನ್ನು ಚುರುಕುಗೊಳಿಸಬೇಕು ಎಂದು ಸೂಚಿಸಿದರು.

ಮಂಗಳೂರಿನಲ್ಲಿ ಅತೀ ಹೆಚ್ಚು ಕೋಮು ಗಲಭೆಗಳು ನಡೆಯುತ್ತಿದ್ದವು. ಪೊಲೀಸ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡುವ ನಿಟ್ಟಿನಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಬದಲಾವಣೆ ಮಾಡಿದೆ. ಇದರಿಂದ ಪೊಲೀಸರು ಎಚ್ಚೆತ್ತಿದ್ದು, ಈಗ ಮಂಗಳೂರಿನಲ್ಲಿ ಕೋಮು ಗಲಭೆಗಳು ಹತೋಟಿಗೆ ಬಂದಿವೆ. ಮಂಗಳೂರಿನಲ್ಲಿ ಆದ ಬದಲಾವಣೆ ಮೈಸೂರು ಸೇರಿದಂತೆ ಇತರೆ ಜಿಲ್ಲೆಯಲ್ಲಿ ಏಕೆ ಸಾಧ್ಯವಾಗುವುದಿಲ್ಲ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಪೊಲೀಸರು ಮನಸು ಮಾಡಿದರೆ ಎಂತಹ ಅಪರಾಧವನ್ನಾದರೂ ತಡೆಗಟ್ಟಬಹುದು. ಈ ಹಿನ್ನೆಲೆಯಲ್ಲಿ ಚುರುಕಿನಿಂದ ಕೆಲಸ ಮಾಡುವಂತೆ ಪೊಲೀಸ್ ಅಧಿಕಾರಿಗಳನ್ನು ಎಚ್ಚರಿಸಿದ್ದೇನೆ ಎಂದರು.

ಕೊಲೆ, ಸುಲಿಗೆ ಸೇರಿದಂತೆ ಯಾವುದೇ ಅಪರಾಧ ಕೃತ್ಯ ನಡೆಯದಂತೆ ಎಚ್ಚರಿಕೆ ವಹಿಸಬೇಕು. ರೌಡಿಗಳು ಹಾಗೂ ಇತರೆ ಅಪರಾಧಿಗಳನ್ನು ಹೊರತುಪಡಿಸಿ ನಾಗರಿಕರ ಜೊತೆ ಜನಸ್ನೇಹಿಯಾಗಿ ವರ್ತಿಸಬೇಕು ಎಂದು ಸಲಹೆ ನೀಡಿದರು.

ಐಜಿಪಿ, ಪೊಲೀಸ್ ಕಮಿಷನರ್ ಹಾಗೂ ಎಸ್ಪಿ ಅವರು ಇಲಾಖೆಯ ಬಗ್ಗೆ ಆಗಾಗ ಪರಿಶೀಲನೆ ಮಾಡಬೇಕು. ಈ ಮೂಲಕ ಅಪರಾಧಿಗಳ ಶಿಕ್ಷೆಯ ಪ್ರಮಾಣ ಹೆಚ್ಚು ಮಾಡಬೇಕು, 90 ದಿನದಲ್ಲಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಬೇಕು, ಅಪರಾಧ ಕೃತ್ಯ ನಡೆದಾಗ ಪೊಲೀಸ್ ಕಮಿಷನರ್ ಹಾಗೂ ಎಸ್ಪಿ ಅವರು ಕಡ್ಡಾಯವಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ 23 ಪೊಲೀಸ್ ಠಾಣೆಗಳಿದ್ದು, ಎಸ್ಪಿ ಅವರು ಆಗಾಗೆ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಅಪರಾಧ ಕೃತ್ಯ ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು.

ಸ್ಫೋಟಕ್ಕೂ ಮುನ್ನ 3 ಗಂಟೆ ಕಾರು ಪಾರ್ಕಿಂಗ್!

ಸುಮಾರಿನಲ್ಲಿ ಪಾರ್ಕಿಂಗ್ ಸ್ಥಳಕ್ಕೆ ಬಂದಿದ್ದು, ಸಂಜೆ 6.22ಕ್ಕೆ ಅಲ್ಲಿಂದ ನಿರ್ಗಮಿಸಿದ್ದಾನೆ. ಈ ಸಮಯ ದಲ್ಲಿ ಆತ ಯಾರೊಂದಿಗಾದರೂ ಮಾತುಕತೆ ನಡೆಸಿದ್ದಾನೆಂಯೇ ಅಥವಾ ಬೇರೆ ಮೂಲದಿಂದ ಸೂಚನೆ ಬಂದಿದೆಯೇ ಎಂಬು ದನ್ನು ಪೊಲೀಸರು ವಿಶ್ಲೇಷಿಸುತ್ತಿದ್ದಾರೆ. ಸುಮಾರು ಮೂರು ಗಂಟೆ ಗಳ ಕಾಲ ಹೆಚ್ಚಿನ ಭದ್ರತಾ ವಲಯದಲ್ಲಿ ಆತ ಯಾಕೆ ಉಳಿದುಕೊಂಡಿದ್ದ ಎಂಬುದರ ಕುರಿತು ತನಿಖಾಧಿಕಾರಿಗಳು ಪ್ರಶ್ನಿಸುತ್ತಿದ್ದಾರೆ. ಆತ ಲಾಜಿಸ್ಟಿಕಲ್ ಸಹಾಯಕ್ಕಾಗಿ ಅಥವಾ ಸೂಚನೆಗಾಗಿ ಕಾಯುತ್ತಿದ್ದನಾ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ತನಿಖೆಯ ಎರಡನೇ ಆಯಾಮ: ಫರಿದಾಬಾದ್‌ನ ವಿಶ್ವವಿದ್ಯಾಲಯದ ವೈದ್ಯರ ಸುತ್ತ ಕೇಂದ್ರೀಕರಿಸಿದೆ. ತನಿಖೆ ವೇಳೆ ಅವರ ಹೆಸರುಗಳು ಹೊರಬಂದಿವೆ. ಈ ಶಂಕಿತ ಜಾಲಕ್ಕೆ ಸಂಬಂಧಿಸಿದ ಸಕ್ರಿಯ ಮತ್ತು ನಿಷ್ಕ್ರಿಯ ಸದಸ್ಯರ ಸಂಖ್ಯೆಯ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮೂಲಗಳ ಪ್ರಕಾರ, ದೆಹಲಿ ಸ್ಫೋಟ ಮತ್ತು ಫರಿದಾಬಾದ್‌ನಲ್ಲಿ ವೈದ್ಯರ ನಂಟು ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸು ತ್ತಿರುವ ದೊಡ್ಡ ಭಯೋತ್ಪಾದಕ ಜಾಲದ ಭಾಗವಾಗಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಶಸ್ತ್ರಾಸ್ತ್ರಗಳು ಎಲ್ಲಿಂದ ಬಂದವು: ವಶಪಡಿಸಿಕೊಳ್ಳಲಾದ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳ ಮೂಲ, ಅವು ಪ್ರತ್ಯೇಕ ಸರಕುಗಳಲ್ಲಿ ಬಂದಿವೆಯೇ, ಅವುಗಳನ್ನು ವಿತರಿಸಿದವರು ಯಾರು ಎಂಬುದರ ಬಗ್ಗೆ ಏಜೆನ್ಸಿಗಳು ತನಿಖೆ ನಡೆಸು ತ್ತಿವೆ. ಸಂಪರ್ಕಕ್ಕಾಗಿ ಬಳಸಲಾಗುತ್ತಿದ್ದ ಟೆಲಿಗ್ರಾಮ್ ಗುಂಪಿನ ಇತರ ಸದಸ್ಯರನ್ನು ಅಧಿಕಾರಿಗಳು ಪತ್ತೆ ಹಚ್ಚುತ್ತಿದ್ದಾರೆ. ಉಮರ್, ಮುಜಮ್ಮಿಲ್ ಅಥವಾ ಆದಿಲ್ ದೆಹಲಿಯಲ್ಲಿ ವೈಯಕ್ತಿಕವಾಗಿ ಪರಿಶೀಲನೆ ನಡೆಸಿದ್ದಾರೆಯೇ ಅಥವಾ ಈ ಉದ್ದೇಶಕ್ಕಾಗಿ ಇನ್ನೊಬ್ಬ ಕಾರ್ಯಕರ್ತನನ್ನು ಅವಲಂಬಿಸಿದ್ದಾರೆಯೇ ಎಂಬುದನ್ನು ಪತ್ತೆ ಹಚ್ಚಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ.

ಸೋಮವಾರ ಮಹತ್ವದ ಪ್ರಗತಿಯೊಂದರಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು, ಹರಿಯಾಣ ಪೊಲೀಸರೊಂದಿಗೆ ಸೇರಿ, ಫರಿದಾಬಾದ್‌ನ ಅಪಾರ್ಟ್‌ಮೆಂಟ್‌ನಿಂದ 360 ಕೆಜಿ ಶಂಕಿತ ಅಮೋನಿಯಂ ನೈಟ್ರೇಟ್ ಮತ್ತು ರಾಸಾಯನಿಕಗಳು, ಡಿಟೋನೇಟರ್ ಗಳು ಮತ್ತು ವೈರ್‌ಗಳು ಸೇರಿದಂತೆ 2,900 ಕೆಜಿ ಐಇಡಿ ತಯಾರಿಸುವ ವಸ್ತು ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಡಾ. ಮುಜಮ್ಮಿಲ್ ಮತ್ತು ಆದಿಲ್ ರಾಥರ್ ಬಂಧಿಸಲಾಗಿದೆ.

ತನಿಖೆಯ ಮೂರನೇ ಆಯಾಮ: ಸ್ಫೋಟದ ಸ್ವರೂಪದ ಮೇಲೆ ಅಧಿಕಾರಿಗಳು ಗಮನ ಕೇಂದ್ರೀಕರಿಸುತ್ತದೆ. ರಾಜಧಾನಿಯಲ್ಲಿ ಈ ಹಿಂದೆ ನಡೆದ ಸ್ಫೋಟಗಳಲ್ಲಿ ಸಾಮಾನ್ಯವಾಗಿ ಉಗುರುಗಳು, ಬಾಲ್ ಬೇರಿಂಗ್‌ಗಳು ಅಥವಾ ಬ್ಲೇಡ್‌ಗಳಂತಹ ಮೊಂಡಾದ ವಸ್ತುಗಳು ಈ ಸ್ಫೋಟದಲ್ಲಿ ಕಂಡುಬಂದಿಲ್ಲ. ಪ್ರಬಲ ಸ್ಫೋಟದ ನಂತರ ಸಾಮಾನ್ಯವಾಗಿ ಕಂಡುಬರುವ ಕುಳಿ ಮತ್ತಿತರ ಯಾವುದೇ ಸೂಚನೆ ಉಂಟಾಗದೆ ಸ್ಫೋಟವು ಹೇಗೆ ಗಮನಾರ್ಹ ಹಾನಿಯನ್ನುಂಟು ಮಾಡಿತು.

ಕಾಡಂಚಲ್ಲಿ ಇನ್ನೊಂದು ವರ್ಷದಲ್ಲಿ ರೈಲ್ವೆ ಹಳಿ ಬ್ಯಾರಿಕೇಡ್ ನಿರ್ಮಾಣ

ಆನೆಗಳು ಅರಣ್ಯದಿಂದ ಹೊರಗೆ ಬಾರದಂತೆ ಇನ್ನೊಂದು ವರ್ಷದಲ್ಲಿ ಕಾಡಂಚಿನಲ್ಲಿ ರೈಲ್ವೆ ಹಳಿ ಕಂಬಿಗಳಿಂದ ಬ್ಯಾರಿಕೇಡ್‌ಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹುಲಿ ಹಾಗೂ ಮಾನವ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಅರಣ್ಯ ಸಚಿವರ ಜೊತೆ ಶೀಘ್ರವೇ ರಾಜ್ಯ ಮಟ್ಟದ ಸಭೆ ನಡೆಸುತ್ತೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ರೈಲ್ವೆ ಹಳಿ ಕಂಬಿಗಳ ಬ್ಯಾರಿಕೇಡ್ ಅಳವಡಿಸಲಾಗುವುದು. ಆನೆಗಳು ಕಾಡಿನಿಂದ ಹೊರಗೆ ಬಾರದಂತೆ ಅರಣ್ಯ ಇಲಾಖೆಯವರು ಕಾವಲು ಕಾಯಬೇಕು ಎಂದು ತಾಕೀತು ಮಾಡಿದರು.

ದೆಹಲಿ ಬಾಂಬ್ ಸ್ಫೋಟದಿಂದ ಅಮಾಯಕರು ಬಲಿಯಾಗಿದ್ದಾರೆ. ಇದರಲ್ಲಿ ಭದ್ರತಾ ವೈಫಲ್ಯವಿದೆಯೇ ಎಂಬ ಬಗ್ಗೆ ಮಾಹಿತಿ ಪಡೆದು ಪ್ರತಿಕ್ರಿಯೆ ನೀಡುತ್ತೇನೆ. ಆದರೆ ಬಾಂಬ್ ಸ್ಫೋಟ ಬಿಹಾರ ಚುನಾವಣೆ ಮೇಲೆ ಪರಿಣಾಮ ಬೀರಲಿದ್ದು, ಇದು ಬಿಜೆಪಿಗೆ ನಕಾರಾತ್ಮಕ ಪರಿಣಾಮವಾಗಲಿದೆ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಕ್ರಿಮಿನಲ್‌ಗಳು, ಉಗ್ರರಿಗೆ ರಾಜಾತಿಥ್ಯ ನೀಡುತ್ತಿರುವ ಬಗ್ಗೆ ಬಿಜೆಪಿ ನಿನ್ನೆ ಪ್ರತಿಭಟನೆ ನಡೆಸಿದ ಬಗ್ಗೆ ಕೂಡ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಈಗ ದೆಹಲಿಯಲ್ಲಿ ಬಾಂಬ್ ಸ್ಫೋಟವಾಗಿದೆ. ಬಿಜೆಪಿಯವರು ಅಲ್ಲಿ ಹೋಗಿ ಕೇಳಲಿ ಎಂದು ತಿರುಗೇಟು ನೀಡಿದರು.

ಹಿಂದೂ ರಾಷ್ಟ್ರವಾಗಬೇಕೆಂಬ ಆರ್ ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿ ಭಾರತವನ್ನು ಹಿಂದೂ ರಾಷ್ಟ್ರ ಮಾಡಬೇಕೆಂಬ ಜನ ಸಂಘದ ಪ್ರಯತ್ನ ಹಿಂದಿನಿಂದಲೂ ನಡೆಯುತ್ತಿದೆ. ಆದರೆ ಬಹು ಧರ್ಮದ ಜನರಿರುವ ಈ ದೇಶದಲ್ಲಿ ಇದು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ವಿಧಾನಸೌಧದಲ್ಲಿ ಭಯೋತ್ಪಾದಕರಿದ್ದಾರೆ ಎಂಬ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಸಿಡಿಮಿಡಿಗೊಂಡ ಸಿದ್ದರಾಮಯ್ಯ, ವಿಧಾನಸೌಧದಲ್ಲಿ ಯಾರು ಭಯೋತ್ಪಾದಕರಿದ್ದಾರೆಂದು ಬಿಡಿಸಿ ಹೇಳಲಿ, ಅದು ಬಿಟ್ಟು ಹಿಟ್ ಅಂಡ್ ರನ್ ಹೇಳಿಕೆ ನೀಡಬಾರದು ಎಂದು ಕಿಡಿಕಾರಿದರು.

ದೆಹಲಿ ಸ್ಫೋಟದ ಹಿನ್ನೆಲೆ: ರಾಜ್ಯಾದ್ಯಂತ ಕಟ್ಟೆಚ್ಚರ

• ಮುನ್ನೆಚ್ಚರಿಕೆಯಾಗಿ ವ್ಯಾಪಕ ಬಂದೋಬಸ್ತ್ • ಸೂಕ್ಷ್ಮ ಪ್ರದೇಶಗಳಲ್ಲಿ ತೀವ್ರ ತಪಾಸಣೆ

ಬೆಂಗಳೂರು, ನ 11(ಕೆಂಎಶಿ)– ದೆಹಲಿಯ ಕೆಂಪು ಕೋಟೆ ಬಳಿ ಕಾರ್ ನಲ್ಲಿ ಭಾರೀ ಸ್ಫೋಟ ಸಂಭವಿಸಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ತೀವ್ರ ಕಟ್ಟೆಚ್ಚರ ಘೋಷಿಸಲಾಗಿದೆ.

ಕೇಂದ್ರ ಗೃಹ ಇಲಾಖೆ ನೀಡಿದ ಸೂಚನೆ ಮೇರೆಗೆ ರಾಜ್ಯ ಪೊಲೀಸರು ಸೋಮವಾರ ತಡರಾತ್ರಿಯಿಂದಲೇ ಮುನ್ನಚ್ಚರಿಕೆಯಾಗಿ ರಾಜ್ಯದೆಲ್ಲೆಡೆ ಬಿಗಿ ಭದ್ರತಾ ಏರ್ಪಾಡು ಮಾಡಿದ್ದಾರೆ.


ಬೆಂಗಳೂರು ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಲಗೇಜುಗಳನ್ನು ತೀವ್ರ ತಪಾಸಣೆಗೊಳಪಡಿಸುತ್ತಿರುವ ಪೊಲೀಸರು.

ಕೇಂದ್ರದಿಂದ ಮಾಹಿತಿ ಬರುತ್ತಿದ್ದಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಸಲೀಂ, ಎಲ್ಲಾ ಮಹಾನಗರ ಪಾಲಿಕೆಗಳ ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಸಂಪರ್ಕಿಸಿ ಕಟ್ಟೆಚ್ಚರದ ಸೂಚನೆಗಳನ್ನು ನೀಡಿದರು.

ಹಗಲು–ರಾತ್ರಿ ಗಸ್ತು ಹೆಚ್ಚಿಸುವಂತೆ ಮತ್ತು ಸೂಕ್ಷ್ಮ ಪ್ರದೇಶ ಹಾಗೂ ಪ್ರಮುಖ ಕೇಂದ್ರಗಳಲ್ಲಿ ತೀವ್ರ ತಪಾಸಣೆ ನಡೆಸುವಂತೆ ಆದೇಶಿಸಿದರು. ಸಂಶಯಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವಂತೆ, ಕೇಂದ್ರ ಕರ್ತವ್ಯ ನಿರ್ವಹಣೆಯ ಕೇಂದ್ರ ಸ್ಥಾನದಿಂದ ಹೊರಹೋಗದಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜನನಿಬಿಡ ಪ್ರದೇಶಗಳಾದ ಬಸ್, ರೈಲು, ವಿಮಾನ ನಿಲ್ದಾಣಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಸಂಶಯಾಸ್ಪದ ವ್ಯಕ್ತಿ ಹಾಗೂ ವಸ್ತುಗಳಿಗಾಗಿ ತೀವ್ರ ತಪಾಸಣೆ ನಡೆಸಲಾಗುತ್ತಿದೆ. ರಾಜ್ಯದಲ್ಲಿನ ಅಣುಸ್ಥಾವರ, ಬಂದರುಗಳು, ಪ್ರವಾಸೋದ್ಯಮ ತಾಣಗಳು, ಜಲಾಶಯ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಪ್ರಮುಖ ಸರ್ಕಾರಿ ಕಟ್ಟಡಗಳಿಗೆ ಬಿಗಿ ಭದ್ರತೆ ಒದಗಿಸಲಾಗಿದೆ.


ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರು ಗಸ್ತು ತೀವ್ರಗೊಳಿಸಿದ್ದು, ಮತ್ತೊಂದೆಡೆ ರಾಜ್ಯದ ಎಲ್ಲಾ ವಸತಿ ಗೃಹಗಳ ತಪಾಸಣೆ ನಡೆಸಲಾಗುತ್ತಿದೆ. ಜನನಿಬಿಡ ಪ್ರದೇಶ ಗಳಲ್ಲಿ ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳ ಶ್ವಾನ ಪಡೆಯೊಂದಿಗೆ ಸಂಶಯಾಸ್ಪದ ವಸ್ತುಗಳ ಪರಿಶೀಲನೆ ನಡೆಸಲಾಗುತ್ತಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಚುನಾವಣಾ ವೇಳೆಯಲ್ಲೇ ಏಕೆ ಬಾಂಬ್ ಸ್ಫೋಟ ಘಟನೆಗಳು ಸಂಭವಿಸುತ್ತವೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣೆ ವೇಳೆ ದೆಹಲಿಯಲ್ಲಿ ಬಾಂಬ್ ಸ್ಫೋಟ ಸಂಭವಿಸಿರುವ ಕುರಿತು ಕೇಂದ್ರ ಸರ್ಕಾರವೇ ಉತ್ತರಿಸಬೇಕು. ಏನೇ ಆಗಲಿ ಇಂತಹ ಸ್ಫೋಟ ಘಟನೆಗಳು ನಡೆಯಬಾರದು. ಅಮಾಯಕ ಜನರ ಪ್ರಾಣ ಹೋಗಿರುವುದು ಬೇಸರದ ಸಂಗತಿ ಎಂದರು.

ಟೋಲ್ ಪ್ಲಾಜಾದಲ್ಲಿ 'ಸೂಸೈಡ್ ಬಾಂಬರ್'; ಸಿಸಿಟಿವಿ ದೃಶ್ಯಾವಳಿ ಪತ್ತೆ

ನವದೆಹಲಿ, ನ.11– ದೆಹಲಿ ಬಾಂಬ್ ಸ್ಫೋಟದಲ್ಲಿ ಬಳಸಲಾದ ಹುಂಡೈ ಐ20 ಕಾರು, ಫರಿದಾಬಾದ್‌ನಿಂದ ಕೆಂಪು ಕೋಟೆ ಪ್ರದೇಶಕ್ಕೆ ತೆರಳಿರುವ ಬಗ್ಗೆ ತನಿಖಾಧಿಕಾರಿಗಳಿಗೆ ಮಾಹಿತಿ ಸಿಗುತ್ತಿದ್ದಂತೆಯೇ ಬದರ್‌ಪುರ ಟೋಲ್ ಪ್ಲಾಜಾದಲ್ಲಿ ಕಾರು ಇರುವುದು ಹೊಸ ಸಿಸಿಟಿವಿ ದೃಶ್ಯಾವಳಿಗಳಲ್ಲಿ ಸೆರೆಯಾಗಿದೆ. ಕಾರನ್ನು ಆತ್ಮಹತ್ಯಾ ಬಾಂಬರ್ ಎಂದು ಹೇಳಲಾಗುವ ಡಾ. ಉಮರ್ ಮೊಹಮ್ಮದ್ ಚಲಾಯಿಸುತ್ತಿದ್ದ ಎನ್ನಲಾಗಿದೆ.


ಉಮರ್

ಸೋಮವಾರ ಬೆಳಿಗ್ಗೆ 8.13ರ ಸಿಸಿಟಿವಿ ದೃಶ್ಯಾವಳಿಗಳಲ್ಲಿ ಮೊಹಮ್ಮದ್ ಮಾಸ್ಕ್ ಧರಿಸಿ ಹರಿಯಾಣ ಮತ್ತು ದೆಹಲಿಯ ಗಡಿಯಲ್ಲಿರುವ ಟೋಲ್ ಪ್ಲಾಜಾದಲ್ಲಿ ರಶೀದಿ ಪಡೆಯುತ್ತಿರುವುದು ಕಂಡುಬಂದಿದೆ.

ಫರಿದಾಬಾದ್‌ನ ಏಷ್ಯನ್ ಆಸ್ಪತ್ರೆ ಬಳಿ ಬೆಳಗ್ಗೆ 7.30ರ ಸುಮಾರಿಗೆ ಕಾರು ಕಾಣಿಸಿಕೊಂಡಿದ್ದು, ಬೆಳಿಗ್ಗೆ 8.13ರ ಸುಮಾರಿಗೆ ಬದರ್‌ಪುರ ಟೋಲ್ ಪ್ಲಾಜಾ ದಾಟಿ 8.20ರ ಸುಮಾರಿಗೆ ಓಖ್ಲಾದಲ್ಲಿತ್ತು ಎಂದು ಮೂಲಗಳು ತಿಳಿಸಿವೆ.

ಕೆಂಪು ಕೋಟೆಯ ಬಳಿಯ ಪಾರ್ಕಿಂಗ್ ಸ್ಥಳದಲ್ಲಿ ಮಧ್ಯಾಹ್ನ 3.19 ರ ಸುಮಾರಿಗೆ ನಿಂತಿದ್ದ ಕಾರು, 6.30ರ ಸುಮಾರಿಗೆ ನಿರ್ಗಮಿಸಿತ್ತು. ಈ ಸಮಯದಲ್ಲಿ ಬಹುಶಃ ಒಳಗೆ ಸ್ಫೋಟಕಗಳು ಪತ್ತೆಯಾಗುತ್ತವೆ ಎಂಬ ಭಯದಿಂದ ಮೊಹಮ್ಮದ್ ಒಂದು ನಿಮಿಷವೂ ಕಾರನ್ನು ಬಿಟ್ಟಿಲ್ಲ. ಇದಾದ ಕೇವಲ 22 ನಿಮಿಷಗಳ ನಂತರ ಒಂದು ಬದಿಯಲ್ಲಿ ಕೆಂಪು ಕೋಟೆ, ಇನ್ನೊಂದು ಬದಿಯಲ್ಲಿ ಜನದಟ್ಟಣೆಯ ಚಾಂದನಿ ಚೌಕ್ ಮಾರುಕಟ್ಟೆ ಇರುವ ಕೆಂಪು ಕೋಟೆ ಮೆಟ್ರೋ ನಿಲ್ದಾಣದ ಬಳಿಯ ನೇತಾಜಿ ಸುಭಾಷ್ ಮಾರ್ಗದಲ್ಲಿ ಐ20 ಕಾರು ನಿಧಾನವಾಗಿ ಚಲಿಸುತ್ತಿದ್ದಾಗ ಸ್ಫೋಟಿಸಿದೆ. ಸ್ಫೋಟದ ರಭಸಕ್ಕೆ ಐ20 ಕಾರಿನ ಭಾಗಗಳು ಛಿದ್ರಗೊಂಡು ರಸ್ತೆಯಲ್ಲೆಲ್ಲಾ ಹರಡಿತ್ತು. ಸ್ಫೋಟ ಸಂಭವಿಸಿದ ಸ್ಥಳದ ಬಳಿ ಆರು ಕಾರುಗಳು ಮತ್ತು ಎರಡು ಇ–ರಿಕ್ಷಾಗಳು ಸೇರಿದಂತೆ ಒಂಬತ್ತು ವಾಹನಗಳು ಬೆಂಕಿಗೆ ಆಹುತಿಯಾಗಿವೆ.

ಮೈಸೂರಲ್ಲಿ ವೀರ ವನಿತೆ ಒನಕೆ ಓಬವ್ವರ ಶೌರ್ಯ, ಸಮಯ ಪ್ರಜ್ಞೆ ಸ್ಮರಣೆ

ಮೈಸೂರು, ನ.11(ಎಂಕೆ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ಮಂಗಳವಾರ 'ವೀರ ವನಿತೆ ಒನಕೆ ಓಬವ್ವ' ಜಯಂತಿ ಆಚರಿಸಲಾಯಿತು.



ಮೈಸೂರಿನ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ಮಂಗಳವಾರ 'ವೀರ ವನಿತೆ ಒನಕೆ ಓಬವ್ವ' ಜಯಂತಿ ಆಚರಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮತ್ತಿತರರು ಉಪಸ್ಥಿತರಿದ್ದರು.

ದೀಪ ಬೆಳಗಿಸಿ, ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ವೀರ ವನಿತೆ ಒನಕೆ ಓಬವ್ವ ಅವರ ಶೌರ್ಯ, ಸಮಯ ಪ್ರಜ್ಞೆ ಹಾಗೂ ದೇಶ ಪ್ರೇಮ ಎಂದೆಂದಿಗೂ ಮಹಿಳೆಯರಿಗೆ ಪ್ರೇರಣೆಯಾಗಿದೆ ಎಂದರು.

ಒನಕೆ ಓಬವ್ವ ಅವರಲ್ಲಿನ ಆತ್ಮಸ್ಥೈರ್ಯ, ದೇಶಭಕ್ತಿಯ ಬೆಳಕು ನಮ್ಮಲ್ಲಿಯೂ ಸದಾ ಬೆಳಗಬೇಕು. ವೀರ ವನಿತೆಯು ಸಾಮಾನ್ಯ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಸಮಾಜವನ್ನು ತಿದ್ದುವಂತಹ ಶಕ್ತಿಯುಳ್ಳ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಭಾಗವಹಿಸುವ ಮೂಲಕ ಮಾದರಿಯಾಗಬೇಕು ಎಂದು ತಿಳಿಸಿದರು.

ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ ಸೇರಿದಂತೆ ಹಲವಾರು ದಾರ್ಶನಿಕರ ಸಾಧನೆ ಬಗ್ಗೆ ತಿಳಿದುಕೊಳ್ಳುವುದರ ಮೂಲಕ ಅವರಲ್ಲಿನ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ಇಂದಿಗೂ ಒನಕೆ ಓಬವ್ವ ಅವರ ಹೆಸರು ಇತಿಹಾಸದ ಪುಟದಲ್ಲಿ ಅಚ್ಚಾಗಿ ಉಳಿದಿದೆ. ಅವರ ಸಾಧನೆ ಮಹಿಳೆಯರಿಗೆ ಸ್ಫೂರ್ತಿ. ಒನಕೆ ಓಬವ್ವ ಅವರ ರೀತಿಯಲ್ಲಿಯೇ ಪ್ರತಿಯೊಬ್ಬರು ಸಮಾಜದಲ್ಲಿ ಒಳ್ಳೆಯ ಗುರುತುಗಳನ್ನು ಬಿಟ್ಟು ಹೋಗಬೇಕು ಎಂದು ತಿಳಿಸಿದರು.

ಪ್ರೇರಣೆ: ಶ್ರೀ ಧರ್ಮಸ್ಥಳ ಮಂಜುನಾಥ ಮಹಿಳಾ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ.ವಿನೋದ ಮಾತನಾಡಿ, ಚಿತ್ರದುರ್ಗ ಕೋಟೆಯನ್ನು ಜಗತ್ತಿಗೆ ಪರಿಚಯಿಸಿದ್ದು ಒನಕೆ ಓಬವ್ವ ಅವರ ಹೋರಾಟ. ಓಬವ್ವರಲ್ಲಿನ ಸಮಯ ಪ್ರಜ್ಞೆ ನಮಗೆಲ್ಲರಿಗೂ ಪ್ರೇರಣೆಯಾಗಿದೆ. ಮೌಢ್ಯಗಳೊಂದಿಗೆ ರಾಜಿಯಾಗದೆ ಒಳ್ಳೆಯ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗಲು ಒನಕೆ ಓಬವ್ವರಂತಹ ಮಹನೀಯರ ಆದರ್ಶ ಪಾಲನೆ ಅವಶ್ಯವಾಗಿದೆ ಎಂದರು.

ಸಮಯ ಪ್ರಜ್ಞೆಯಿಂದ ಹಾಗೂ ಕೆಚ್ಚೆದೆಯಿಂದ ಶತ್ರುಗಳ ವಿರುದ್ಧ ಹೋರಾಡಿದ ಒನಕೆ ಓಬವ್ವ ಕನ್ನಡ ನಾಡಿನ ಮಹಿಳೆಗಳಲ್ಲಿ ದಂತಕತೆಯಾಗಿದ್ದಾರೆ. ಧೈರ್ಯ–ಸಾಹಸದ ಪ್ರತೀಕವಾಗಿ ರಾಜಭಕ್ತಿಯ ಪ್ರತಿಬಿಂಬವಾಗಿ ಬೆಳಗುತ್ತಿದ್ದಾರೆ. ವೀರ ವನಿತೆ ಒನಕೆ ಓಬವ್ವ ಎಲ್ಲರಿಗೂ ಸ್ಫೂರ್ತಿಯಾಗಿ ಜನ ಮಾನಸದಲ್ಲಿ ನೆಲೆಸಿದ್ದಾರೆ. ಪ್ರತಿ ನಾರಿಯರಿಗೆ ಎದುರಾಗುವ ಸವಾಲುಗಳನ್ನು ಎದುರಿಸಲು ಒನಕೆ ಓಬವ್ವ ಪ್ರೇರಣಾ ಶಕ್ತಿಯಾಗಿದ್ದು, ಜ್ಯೋತಿಯಾಗಿ ಇಂದಿಗೂ ಉಜ್ವಲಿಸುತ್ತಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡ ಪರ ಹೋರಾಟಗಾರ ಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಗಿಡ ನೆಟ್ಟು ಒನಕೆ ಓಬವ್ವ ಜಯಂತಿ ಆಚರಣೆ

ಮೈಸೂರು, 11(ಎಂಕೆ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಮಂಗಳವಾರ ಗಿಡ ನೆಡುವ ಮೂಲಕ 'ವೀರ ವನಿತೆ ಒನಕೆ ಓಬವ್ವ' ಜಯಂತಿ ಆಚರಿಸಲಾಯಿತು.



ಗಿಡ ನೆಡುವ ಮೂಲಕ 'ವೀರ ವನಿತೆ ಒನಕೆ ಓಬವ್ವ' ಜಯಂತಿ ಆಚರಿಸಲಾಯಿತು.

ಈ ವೇಳೆ ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್ ಮಾತನಾಡಿ, ವೀರ ವನಿತೆ ಒನಕೆ ಓಬವ್ವರ ಸಮಯ ಪ್ರಜ್ಞೆ, ಧೈರ್ಯ ಮತ್ತು ಸಾಹಸ ನಮ್ಮ ನಾಡಿನ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯಾಗಿದೆ. ಶತ್ರು ಸೈನಿಕರು ಕೋಟೆಯನ್ನು ಮುತ್ತಿದಾಗ ತನ್ನ ಮನೆಯಲ್ಲಿದ್ದ ಒನಕೆಯನ್ನೇ ಆಯುಧವಾಗಿ ಬಳಸಿ ನೂರಾರು ಸೈನಿಕರ ಸದೆ ಬಡಿದು ಕೋಟೆಯನ್ನು ರಕ್ಷಿಸಿದ ಮಹಾಮಾತೆ ಓಬವ್ವ ಅವರ ಸಾಹಸ ಚರಿತ್ರೆಯನ್ನು ನಾಡಿನಾದ್ಯಂತ ಪಸರಿಸುವಂತಹ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ ಎಂದರು.

ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್ ಮಾತನಾಡಿ, ವೀರ ವನಿತೆ ಒನಕೆ ಓಬವ್ವನ ಆದರ್ಶಗಳನ್ನು ಪಾಲಿಸುವ ಮೂಲಕ ನಾಡಿನ ಐಕ್ಯತೆಗೆ ಪಣ ತೊಡಬೇಕು. ಕೋಟೆ ಕಾವಲುಗಾರನ ಮಡದಿಯಾಗಿ, ಕೋಟೆಗೆ ಆಪತ್ತು ಎದುರಾದಾಗ, ಸಮಯ ಪ್ರಜ್ಞೆಯಿಂದ ವೈರಿಗಳ ರುಂಡ ಚೆಂಡಾಡಿದ ವೀರ ವನಿತೆ ಒನಕೆ ಓಬವ್ವ ಎಲ್ಲರಿಗೂ ಮಾದರಿ ಎಂದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಶ್ರುತಿ, ಅಪೂರ್ವ ಸುರೇಶ್, ಎಸ್.ಎನ್. ರಾಜೇಶ್, ಚರಣ್, ದಿನೇಶ್, ಸದಾಶಿವ, ಸುಚೇಂದ್ರ ಮತ್ತಿತರರಿದ್ದರು.

ಕಬ್ಬು ಬೆಳೆಗೆ ಸರ್ಕಾರ ಹೊರಡಿಸಿರುವ ಆದೇಶ ಸಕ್ಕರೆ ಕಾರ್ಖಾನೆಗೆ ಅನುಕೂಲ, ರೈತರಿಗಲ್ಲ

ಮೈಸೂರು,ನ.11(ಜಿಎ)–ಕಬ್ಬು ಬೆಳೆಗಾರರ ಹೋರಾಟದ ಬಳಿಕ ರಾಜ್ಯ ಸರ್ಕಾರ ಹೊರಡಿಸಿದ ಆದೇಶದಿಂದ ಈ ಭಾಗದ ಬಣ್ಣಾರಿ ಸಕ್ಕರೆ ಕಾರ್ಖಾನೆಗೆ ಅನುಕೂಲವಾಯಿತೇ ಹೊರತು ರೈತರಿಗಲ್ಲ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಣ್ಣಾರಿ ಸಕ್ಕರೆ ಕಾರ್ಖಾನೆ ಇಳುವರಿ ಕಡಿಮೆ ತೋರಿಸುತ್ತ ರೈತರನ್ನು ವಂಚಿಸುತ್ತಿದೆ. ಹೀಗಾಗಿ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತ ತಜ್ಞರ ಸಮಿತಿ ನೇಮಕ ಮಾಡಿ ಇಳುವರಿ ಸರಿಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಕಾರ್ಖಾನೆ ತನಗೆ ಕಬ್ಬು ಬೇಕಾದಾಗ ರೈತರಿಗೆ ಅನುಕೂಲ ಕಲ್ಪಿಸುವುದಾಗಿ ಪ್ರಚಾರ ಮಾಡಿದರೂ, ನಂತರ ವಂಚಿಸುತ್ತಿದೆ. ಇಳುವರಿ ಆಧಾರದ ಮೇಲೆ ರಾಜ್ಯ

ಕಾರ್ಖಾನೆಯಲ್ಲಿ ಇಳುವರಿ ಕಡಿಮೆ ತೋರಿಸಿ ವಂಚಿಸುತ್ತಾರೆ

ಸರ್ಕಾರ ದರ ನಿಗದಿಗೆ ಮುಂದಾಗಿರುವುದರಿಂದ ಚಾಮರಾಜನಗರ ಭಾಗದ ರೈತರಿಗೆ ಅನ್ಯಾಯವಾಗುತ್ತದೆ. ಇದನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು.

ಸಕ್ಕರೆ ಕಾರ್ಖಾನೆಗಳು ಕಾರ್ಖಾನೆ ಮುಂದೆ ತೂಕದ ಯಂತ್ರ ಹಾಕುವುದಾಗಿ ಹೇಳಿದರೂ ಮಾಡುತ್ತಿಲ್ಲ. ಕಳೆದ 2 ವರ್ಷದ ಹಿಂದೆ ಘೋಷಣೆ ಮಾಡಿರುವ ಪ್ರತಿ ಟನ್ ಕಬ್ಬಿಗೆ 150ರಂತೆ ಒಟ್ಟು 950 ರೂ. ಬಾಕಿ ಇದ್ದು, ಕೂಡಲೇ ಪಾವತಿಸಬೇಕಿದೆ. ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಕಬ್ಬು ಬೆಳೆಗಾರರಂತೆ ತಮ್ಮ ತವರು ಕ್ಷೇತ್ರದ ರೈತರ ಕಡೆಯೂ ಗಮನಹರಿಸಬೇಕಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್.ಎಸ್. ರಾಜು, ನಾಗರಾಜ್, ಚಿದಂಬರ್, ಹನುಮಯ್ಯ ಮತ್ತಿತರರು ಉಪಸ್ಥಿತರಿದ್ದರು.

ಜಾಗತಿಕ ಮಟ್ಟದಲ್ಲಿ ರಾಜ್ಯದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ
- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್‌ನಲ್ಲಿ ಕಲಾಲೋಕ ಮಳಿಗೆ ಉದ್ಘಾಟನೆ

ಬೆಂಗಳೂರು,ನ.11(ಕೆಎಂಶಿ)– ಕರ್ನಾಟಕದ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಸಾಧಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಯಾಣಿಕರ ಸಾಂದ್ರತೆಯಲ್ಲಿ ದೇಶದಲ್ಲೇ 3ನೇ ಸ್ಥಾನದಲ್ಲಿದ್ದು, ಪ್ರತೀದಿನ ಹತ್ತಾರು ಸಾವಿರ ಮಂದಿ ದೇಶ–ವಿದೇಶಗಳಿಂದ ಆಗಮಿಸುತ್ತಾರೆ.

ವಿಮಾನ ನಿಲ್ದಾಣಕ್ಕೆ ಆಗಮಿಸುವ ಪ್ರಯಾಣಿಕರಿಗೆ ಕರ್ನಾಟಕದ ವೈಭವ, ಪರಂಪರೆ ಮತ್ತು ಕೈಗಾರಿಕಾ ಉತ್ಪನ್ನಗಳ ಪರಿಚಯ ಮಾಡಿಕೊಡಲು ಕಲಾಲೋಕ ಮಳಿಗೆ ನಿರ್ಮಿಸಲಾಗಿದೆ ಎಂದರು.

ವಿಮಾನ ನಿಲ್ದಾಣದ 2ನೇ ಟರ್ಮಿನಲ್‌ನಲ್ಲಿ ಸ್ಥಾಪಿಸಿರುವ ಕಲಾಲೋಕ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಅಭಿಮಾನದ ಪಯಣ ಅರ್ಥವಾಗಬೇಕು ಎಂಬ ಕಾರಣಕ್ಕೆ ಕಲಾಲೋಕ ಮಳಿಗೆ ಆರಂಭಿಸಲಾಗಿದೆ. ಕರ್ನಾಟಕದ ಕೈಗಾರಿಕಾ ಭೂಪಟದಲ್ಲಿ ಇದು ಸಂತಸದ ಕ್ಷಣವಾಗಿದೆ ಎಂದರು.



ಬೆಂಗಳೂರು ವಿಮಾನ ನಿಲ್ದಾಣದ 2ನೇ ಟರ್ಮಿನಲ್‌ನಲ್ಲಿ ಸ್ಥಾಪಿಸಿರುವ ಕಲಾಲೋಕ ಮಳಿಗೆಯನ್ನು ಸಿದ್ದರಾಮಯ್ಯ ಉದ್ಘಾಟಿಸಿದರು.

ದೇಶ–ವಿದೇಶಗಳ ಗ್ರಾಹಕರಿಗೆ ಕರ್ನಾಟಕದ ಹೆಮ್ಮೆಯ ಪಾರಂಪರಿಕ ಮತ್ತು ಜಿಐ ಮಾನ್ಯತೆಯ ವಿಶಿಷ್ಟ ಉತ್ಪನ್ನಗಳನ್ನು ತಲುಪಿಸುವ ಉದ್ದೇಶದಿಂದ ಕೈಗಾರಿಕಾ ಇಲಾಖೆ ಆಕರ್ಷಕ ಮತ್ತು ಸುಸಜ್ಜಿತ ಕಲಾಲೋಕ ಮಳಿಗೆ ಆರಂಭಿಸಿದೆ ಎಂದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮಾತನಾಡಿ, ಟರ್ಮಿನಲ್–2ರ ಸಮೀಪ ನಿರ್ಮಿಸಿರುವ ಕಲಾಲೋಕ ಮಳಿಗೆಯಲ್ಲಿ ಪಾರಂಪರಿಕ ಉತ್ಪನ್ನಗಳಾದ ಮೈಸೂರು ಸ್ಯಾಂಡಲ್ ಸೋಪ್, ಗಂಧದ ಎಣ್ಣೆ, ಅಗರಬತ್ತಿ, ಮೈಸೂರು ಸಿಲ್ಕ್, ಚನ್ನಪಟ್ಟಣದ ಬೊಂಬೆ, ಬಿಡ್ಕರ್ ಉತ್ಪನ್ನಗಳು, ಪರಿಮಳಯುಕ್ತ ಕಾಫಿ ಪುಡಿ ಮತ್ತು ಪಾನೀಯ, ಕೈಮಗ್ಗ ಉತ್ಪನ್ನಗಳು, ಇಳಕಲ್ ಸೀರೆ, ಲಂಬಾಣಿ ಉಡುಪು, ಗಂಧದ ಕಲಾಕೃತಿ, ಬಿದಿರು ಕಲಾಕೃತಿ, ಮೈಸೂರು ಶೈಲಿ ಕಲಾಕೃತಿ ಸೇರಿದಂತೆ ಜಿ.ಐ. ಮಾನ್ಯತೆಯ 45 ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ ಎಂದು ಹೇಳಿದರು.

ಪಾರಂಪರಿಕ ಮತ್ತು ಭೌಗೋಳಿಕ ವಿಶಿಷ್ಟತೆಯ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸುವ ಆಶಯದೊಂದಿಗೆ ಮಳಿಗೆ ಆರಂಭಿಸಲಾಗಿದೆ. ವಿಮಾನ ನಿಲ್ದಾಣಕ್ಕೆ ಆಗಮಿಸುವ ಹಾಗೂ ನಿರ್ಗಮಿಸುವ ಪ್ರಯಾಣಿಕರಿಗೆ ಒಂದೇ ತಾಣದಲ್ಲಿ ಕರ್ನಾಟಕದ ಅಸ್ಮಿತೆಯ ಅನುಭವ ಆಗಲಿದೆ. ವಿಮಾನ ನಿಲ್ದಾಣದ ಅಂತಾರಾಷ್ಟ್ರೀಯ ಪ್ರಯಾಣಿಕರ ನಿರ್ಗಮನ ವಲಯದಲ್ಲಿ 140 ಚದರ ಮೀಟರ್‌ನಲ್ಲಿ ಇಂತಹುದೇ ಮತ್ತೊಂದು ಮಳಿಗೆ ಆರಂಭಿಸಲಾಗುವುದು ಎಂದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಸಾಧಕರಿಗೆ ಡಿ.ವಿ.ಗುಂಡಪ್ಪ ಪ್ರಶಸ್ತಿ



ಮೈಸೂರು ಕನ್ನಡ ವೇದಿಕೆ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಡಿ.ವಿ.ಗುಂಡಪ್ಪ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಯಿತು.

ಮೈಸೂರು,ನ.11(ಜಿಎ)–ಮೈಸೂರು ಕನ್ನಡ ವೇದಿಕೆ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಡಿ.ವಿ.ಗುಂಡಪ್ಪ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಕನ್ನಡ ಭಾಷೆ ಕೇವಲ ಸಾಹಿತಿಗಳು ಹಾಗೂ ಸಾಹಿತ್ಯದಿಂದ ಮಾತ್ರವೇ ಉಳಿದಿಲ್ಲ. ಕನ್ನಡ ಹೋರಾಟಗಾರರೂ ಸಹ ಪ್ರಮುಖ ಪಾತ್ರ ವಹಿಸುತ್ತಾರೆ. ಈಗ ಅಂತಹವರನ್ನು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸುತ್ತಿರುವುದು ಶ್ಲಾಘನೀಯ. ಅಂದಿನ ಮೈಸೂರು ರಾಜ ಮಹಾರಾಜರ ಕನ್ನಡ ಪ್ರೇಮದಿಂದಲೇ ಮೈಸೂರಿನಲ್ಲಿ ಇನ್ನೂ ಉಳಿದಿರುವುದು ಸಂತಸದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಮೈಸೂರು ಕನ್ನಡ ವೇದಿಕೆಯಂತಹ ಸಂಘಟನೆಗಳು ಪ್ರಮುಖ ಪಾತ್ರ ವಹಿಸಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಎಂ.ಟಿ.ಯೋಗೇಶ್‌ಕುಮಾರ್, ಹೆಚ್.ಎಸ್. ದಿನೇಶ್‌ಕುಮಾರ್, ಪತ್ರಿಕಾ ಛಾಯಾಗ್ರಾಹಕ ಹಂಪ ನಾಗರಾಜು, ಸಮಾಜ ಸೇವಕರಾದ ರೇಣುಕಾಂಬ, ಹೆಚ್.ಆರ್.ದೀಪಾ, ಪೌರಕಾರ್ಮಿಕರಾದ ಸವಿತಾ, ಹೋರಾಟಗಾರರಾದ ಕೆ.ಮಾದಪ್ಪ, ಡೈರಿ ವೆಂಕಟೇಶ್, ರೈತ ಹೋರಾಟಗಾರರಾದ ಪಿ. ಮರಂಕಯ್ಯ, ಸಾಯಿ ಚಾಮರಾಜು ಮಂಡಕಳ್ಳಿ ಅವರುಗಳಿಗೆ ಡಿ.ವಿ.ಗುಂಡಪ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಯುವ ಕಾಂಗ್ರೆಸ್ ಮುಖಂಡ ಹೊಯ್ಸಳ, ಮನೋಹರ್, ನಾಲಾಬೀದಿ ರವಿ ಮತ್ತಿತರರು ಉಪಸ್ಥಿತರಿದ್ದರು.

ನ.15, ಜನಜಾತೀಯ ಗೌರವ ದಿವಸ್ ಕಾರ್ಯಕ್ರಮ

ಮೈಸೂರು,ನ.11– ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ವತಿಯಿಂದ ಜನಜಾತೀಯ ಗೌರವ ದಿವಸ್ ಕಾರ್ಯಕ್ರಮವನ್ನು ನ.15ರಂದು ಬೆಳಗ್ಗೆ 9.30 ಗಂಟೆಗೆ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಕೇರ್ಗಳ್ಳಿ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರಧಾನಮಂತ್ರಿಗಳು 150ನೇ ಶ್ರೀ ಬಿರ್ಸಾಮುಂಡಾ ಜಯಂತಿ ಜನಜಾತೀಯ ಗೌರವ ದಿವಸ್ ಕಾರ್ಯಕ್ರಮದಲ್ಲಿ ನ.15ರಂದು ನರ್ಮದಾ, ಗುಜರಾತ್‌ನಲ್ಲಿ ಭಾಗವಹಿಸಲಿದ್ದು, ಅಂದು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಕೇರ್ಗಳ್ಳಿಯಲ್ಲಿ ದ್ವಿಮುಖ ಸಂಪರ್ಕ ಮೂಲಕ ಸದರಿ ಕಾರ್ಯಕ್ರಮದ ವೀಕ್ಷಣೆ, ಪ್ರಧಾನಿಗಳೊಂದಿಗೆ ಫಲಾನುಭವಿಗಳ ಜೊತೆ ಸಂವಾದ ವೀಕ್ಷಿಸಲು ಸಿದ್ಧತೆ ಕೈಗೊಳ್ಳಲಾಗಿದೆ.



ಬಾಂಗ್ಲಾದೇಶದಿಂದ ಬಂದು ಮೈಸೂರು ವಿವಿಯಿಂದ ಭರತನಾಟ್ಯದಲ್ಲಿ ಪದವಿ ಪಡೆದ ಅಂಟೋರಾ ಅಕ್ತರ್ ಅವರ ಸಾಧನೆ ಗುರುತಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯೋತ್ಸವ ಪ್ರಶಸ್ತಿ ನೀಡಿತು.

ಎಟಿಐ ಸಿಬ್ಬಂದಿ ನೇಮಕಾತಿ ವಿಚಾರದಲ್ಲಿ ಕನ್ನಡಿಗರು ಅವಕಾಶ ವಂಚಿತರಾಗುತ್ತಿರುವ ಆರೋಪ

ಮೈಸೂರು, ನ.11(ಎಸ್‌ಪಿಎನ್)– ಆಡಳಿತ ತರಬೇತಿ ಸಂಸ್ಥೆ(ಎಟಿಐ)ಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡುವ ಬೋಧಕರು, ಸಮಾಲೋಚಕರ ಹುದ್ದೆಗಳಿಗೆ ನೇಮಕಾತಿ ಮಾಡುವ ವೇಳೆ ಕನ್ನಡಿಗರಿಗೆ ಪ್ರಾಮುಖ್ಯತೆ ನೀಡುತ್ತಿಲ್ಲ ಎಂಬ ಆರೋಪ ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿದೆ.

> “ಎಟಿಐಗೆ ಸಂಬಂಧಿತ ದೂರುಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿದ್ದವು. ಈ ದೂರುಗಳ ಕುರಿತು ಸಂಬಂಧಪಟ್ಟ ಸಂಸ್ಥೆಯೊಂದಿಗೆ ಪತ್ರ ವ್ಯವಹಾರ ನಡೆಸಿದಾಗ ಉದ್ಯೋಗ ಸಂದರ್ಭದಲ್ಲಿ ಎಟಿಐ ಸಂಸ್ಥೆಗೆ ಬೋಧಕರು, ಸಮಾಲೋಚಕರು ಮತ್ತು ಇತರೆ ಹುದ್ದೆಗಳಿಗೆ ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಹೊರಡಿಸಲ್ಪಟ್ಟ ಅಧಿಸೂಚನೆ ಅನುಷ್ಠಾನಗೊಳಿಸಲು ಸಂಸ್ಥೆಯಿಂದ ಯಾವುದೇ ಮಾನದಂಡಗಳನ್ನು ನಿಗದಿಪಡಿಸಿಲ್ಲ ಎಂದು ವರದಿ ನೀಡಿದ್ದಾರೆ. ಹಾಗಾಗಿ ಈ ಸಮಸ್ಯೆ ಪ್ರಾಧಿಕಾರ ವ್ಯಾಪ್ತಿಗೆ ಬರದ ಕಾರಣ ಇವೆರಡು ಪತ್ರಗಳನ್ನು ಸರ್ಕಾರದ ಕನ್ನಡ ಅನುಷ್ಠಾನದ ವಿಭಾಗದ ಹಿರಿಯ ಅಧಿಕಾರಿ ಪ್ರಸನ್ನಕುಮಾರ್ ಅವರಿಗೆ ಪತ್ರ ಬರೆದು ಈ ಸಮಸ್ಯೆ ಬಗೆಹರಿಸುವಂತೆ ಕೋರಲಾಗಿದೆ.
> – ಡಾ.ಪುರುಷೋತ್ತಮ್ ಬಿಳಿಮಲೆ
> ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ



ಈ ಸಂಬಂಧ ಹಿರಿಯ ಹಾಸನದ ವಕೀಲ ಜೆ.ಆರ್.ದೊರೆಸ್ವಾಮಿ ಎಂಬುವವರು ರಾಜ್ಯ ಸರ್ಕಾರ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ದೂರು ನೀಡಿದ್ದು, ಎಟಿಐನಲ್ಲಿ ಕನ್ನಡಿಗರು ಉದ್ಯೋಗ ಆಯ್ಕೆ ಆಗುವ ವೇಳೆ ಕನ್ನಡ, ಕನ್ನಡಿಗರನ್ನು ಕಡೆಗಣಿಸುತ್ತಿದೆ. ಸಂಸ್ಥೆಯ ವಿವಿಧ ವಿಭಾಗಕ್ಕೆ ಸಮಾಲೋಚಕರು, ಬೋಧಕರ ಹುದ್ದೆಗಳಿಗೆ ಕನ್ನಡೇತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ ಎಂದು ಆರೋಪಿಸಿ 2025ರ ಜುಲೈ ತಿಂಗಳಲ್ಲಿ ಪತ್ರ ಬರೆದಿದ್ದರು.

ಈ ಪತ್ರಕ್ಕೆ ಉತ್ತರವಾಗಿ ಬೋಧಕರು, ಸಮಾಲೋಚಕರು ಮತ್ತು ಇತರೆ ಹುದ್ದೆಗಳಿಗೆ ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಹೊರಡಿಸಲ್ಪಟ್ಟ (ಅಧಿಸೂಚನೆ ಸಂಖ್ಯೆ: ಎಟಿಐ/155/ಇಎಸ್‌ಟಿ1/2022–ಆಡ್ಮಿನ್–ಎಟಿಐ ದಿನಾಂಕ: 04.08.2022 ಪುಟ ಸಂಖ್ಯೆ 3 ರಿಂದ 23ರಲ್ಲಿ ಉಲ್ಲೇಖವಾದ್ದಂತೆ) ಅಧಿಸೂಚನೆಯಂತೆ ಕನ್ನಡ ಭಾಷಾ ಪ್ರಾವೀಣ್ಯತೆ ಕುರಿತಂತೆ ಎಟಿಐನಿಂದ ಯಾವುದೇ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲ ಎಂದು ಉತ್ತರಿಸಲಾಗಿದೆ. ಅಂತೆಯೇ ಸಂದರ್ಶನಗಳನ್ನು ನೆಪ ಮಾತ್ರಕ್ಕೆ ಕನ್ನಡೇತರ ಸಂಸ್ಥೆಯಾದ ಸಾರ್ವಜನಿಕ ವ್ಯವಹಾರ ಕೇಂದ್ರ (ಪ್ಯಾಕ್)ದ ವತಿಯಿಂದ ಆಯೋಜಿಸಿ, ನೇಮಕಾತಿ ಮಾಡುವ ಪರಿಪಾಠ ಹೊಂದಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.


ಏಳು ಕೋಟಿ ಕನ್ನಡಿಗರ ತೆರಿಗೆ ಹಣದಲ್ಲಿ ನಿರ್ವಹಣೆಯಾಗುತ್ತಿರುವ ಆಡಳಿತ ತರಬೇತಿ ಸಂಸ್ಥೆ, ಇಂದು ಕನ್ನಡಿಗರ ಶೈಕ್ಷಣಿಕ ಅರ್ಹತೆಯನ್ನು ಪರಿಗಣಿಸಿ ಉದ್ಯೋಗ ನೀಡುವಲ್ಲಿ ಮೊದಲ ಪ್ರಾಶಸ್ತ್ಯ ನೀಡುತ್ತಿಲ್ಲ ಎನ್ನುತ್ತಾರೆ ತ್ಯಾಜ್ಯ ನಿರ್ವಹಣಾ ವಿಭಾಗದ ಮಾಜಿ ಉದ್ಯೋಗಿ ಪರಮೇಶ್.

ಈ ಸಂಸ್ಥೆಯು ಸಂಪೂರ್ಣ ಕರ್ನಾಟಕ ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿನ ಉದ್ಯೋಗಕ್ಕೆ ಆಯ್ಕೆ ಮಾಡುವ ಸಂದರ್ಭದಲ್ಲಿ ಕನ್ನಡೇತರ ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಟ್ಟು ಕನ್ನಡ, ಕನ್ನಡಿಗರಿಗೆ ರಾಜ್ಯ ಸರ್ಕಾರವೇ ಪರೋಕ್ಷವಾಗಿ ಅವಮಾನ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ದೇಶ – ವಿದೇಶ


ಹೆದ್ದಾರಿಯಲ್ಲಿ ಟ್ರಕ್ ಪಲ್ಟಿ: 80 ಎಲ್ಪಿಜಿ ಸಿಲಿಂಡರ್‌ಗಳು ಸ್ಫೋಟ!

ಅರಿಯಲೂರ್: ನೂರಾರು ಎಲ್ಪಿಜಿ ಸಿಲಿಂಡರ್‌ಗಳನ್ನು ಹೊತ್ತೊಯ್ಯುತ್ತಿದ್ದ ಟ್ರಕ್ ಪಲ್ಟಿ ಹೊಡೆದ ಪರಿಣಾಮ, ಎಲ್ಪಿಜಿ ಸಿಲಿಂಡರ್‌ಗಳು ಸ್ಫೋಟಗೊಂಡಿರುವ ಘಟನೆ ಮಂಗಳವಾರ ಬೆಳಗ್ಗೆ ಅಟ್ಟೂರು–ತಂಜಾವೂರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 136ರಲ್ಲಿ ನಡೆದಿದೆ. ಸರಣಿ ಸ್ಫೋಟಗಳು ಸಂಭವಿಸಿ, ಬೆಂಕಿ ಯುಂಡೆಗಳು ಗಗನಕ್ಕೆ ಚಿಮ್ಮಿದ್ದರಿಂದ, ಸುತ್ತಮುತ್ತಲಿನ ಪ್ರದೇಶದ ಜನರು ಆಘಾತಕ್ಕೊಳಗಾಗಿದ್ದಾರೆ. ಸುಮಾರು 80 ಸಿಲಿಂಡರ್‌ಗಳು ಸ್ಫೋಟಗೊಂಡಿವೆ ಎಂದು ಹೇಳಲಾಗಿದೆ. ಈ ಘಟನೆಯಲ್ಲಿ ತಿರುಚ್ಚಿ ಜಿಲ್ಲೆಯ ಇನಾಂ ಕುಲತ್ತೂರ್ ಗ್ರಾಮದ ನಿವಾಸಿಯಾದ ಟ್ರಕ್ ಚಾಲಕ ಪಿ.ಕನಗರಾಜ್(34)ರ ಮುಖ ಹಾಗೂ ತಲೆಗೆ ಗಾಯವಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಅರಿಯಲೂರ್ ಸರಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರ ಪ್ರಕಾರ, ಮಂಗಳವಾರ ರಸ್ತೆ ಬದಿಯ ಹಳ್ಳಕ್ಕೆ ಟ್ರಕ್‌ನ ಚಕ್ರಗಳು ಜಾರಿದ್ದು, ಟ್ರಕ್ ಸಂಪೂರ್ಣವಾಗಿ ಕೆಳಕ್ಕೆ ಮಗುಚಿ ಬಿದ್ದಿದೆ.




ಪಾಕ್‌ನ ಕೋರ್ಟ್ ಎದುರೇ ಆತ್ಮಾಹುತಿ ಬಾಂಬ್ ದಾಳಿ: 12 ಸಾವು

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಪ್ರಬಲ ಸ್ಫೋಟವೊಂದು ಸಂಭವಿಸಿದ್ದು, ಇಸ್ಲಾಮಾಬಾದ್ ನ್ಯಾಯಾಂಗ ಕಟ್ಟಡದ ಬಳಿ ಈ ಘಟನೆ ನಡೆದಿದೆ. ಸ್ಫೋಟದಲ್ಲಿ ಕಾರೊಂದು ಜಖಂ ಗೊಂಡಿದ್ದು, ಕನಿಷ್ಠ 12 ಜನರು ಸಾವನ್ನಪ್ಪಿದ್ದಾರೆ, 20ಕ್ಕೂ ಹೆಚ್ಚು ಜನರು ಗಾಯಗೊಂಡಿ ದ್ದಾರೆ. ಅವರಲ್ಲಿ ಹೆಚ್ಚಿನವರು ವಕೀಲರು ಎಂದು ಪಾಕಿಸ್ತಾನಿ ಮಾಧ್ಯಮ ವರದಿಗಳು ತಿಳಿಸಿವೆ. ನಿಲ್ಲಿಸಿದ್ದ ವಾಹನದೊಳಗೆ ಅಳವಡಿಸಲಾಗಿದ್ದ ಗ್ಯಾಸ್ ಸಿಲಿಂಡರ್‌ನಿಂದ ಸ್ಫೋಟ ಸಂಭವಿಸಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ಶಂಕಿಸಲಾಗಿದೆ. ಇಸ್ಲಾಮಾಬಾದ್ ಜಿಲ್ಲಾ ನ್ಯಾಯಾಲಯದ ಪ್ರವೇಶ ದ್ವಾರದ ಬಳಿ ಕೆಲಸದ ವೇಳೆಯಲ್ಲಿ ಮಧ್ಯಾಹ್ನ 12.30ರ ಸುಮಾರಿಗೆ ಸ್ಫೋಟ ಸಂಭವಿಸಿದೆ. ಸ್ಫೋಟದ ಶಬ್ದ ಎಷ್ಟು ತೀವ್ರವಾಗಿತ್ತು ಎಂದರೆ 6 ಕಿಲೋಮೀಟರ್ ದೂರಕ್ಕೂ ಕೇಳಿಸುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಸ್ಫೋಟದಲ್ಲಿ ಹತ್ತಿರದಲ್ಲಿ ನಿಲ್ಲಿಸಿದ್ದ ಹಲವಾರು ವಾಹನಗಳು ಹಾನಿಗೊಳಗಾದವು. ಗಾಯಗೊಂಡವರಲ್ಲಿ ಹೆಚ್ಚಿನವರು ವಕೀಲರು ಮತ್ತು ನ್ಯಾಯಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿ. ಪೊಲೀಸರು ಇದು ಆತ್ಮಹತ್ಯಾ ದಾಳಿ ಎಂದು ಶಂಕಿಸಿದ್ದಾರೆ.



ನಿಥಾರಿ ಸರಣಿ ಹತ್ಯೆ: ಸುರೇಂದ್ರ ಕೋಲಿಯನ್ನು ಖುಲಾಸೆಗೊಳಿಸಿದ ಸುಪ್ರೀಂ


ನವದೆಹಲಿ: ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದ್ದ ನೋಯ್ಡಾದಲ್ಲಿ 2005–2006ರಲ್ಲಿ ನಡೆದ ನಿಥಾರಿ ಸರಣಿ ಹತ್ಯೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿದಿದ್ದ ಕೊನೆಯ ಕೊಲೆ ಮತ್ತು ಅತ್ಯಾಚಾರ ಪ್ರಕರಣದಲ್ಲೂ ಆರೋಪಿ ಸುರೇಂದ್ರ ಕೋಲಿಯನ್ನು ಖುಲಾಸೆಗೊಳಿಸಿ ಮಂಗಳವಾರ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.



ಸರಣಿ ಹತ್ಯೆಯ ಪ್ರಮುಖ ಆರೋಪಿ ಸುರೇಂದ್ರ ಕೋಲಿ ಇತರೆ ಯಾವುದೇ ಪ್ರಕರಣದಲ್ಲಿ ಆರೋಪಿಯಾಗಿರದಿದ್ದರೆ ಅವರನ್ನು ತಕ್ಷಣ ಜೈಲಿನಿಂದ ಬಿಡುಗಡೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಉನ್ನತ ನ್ಯಾಯಾಲಯದ ಈ ತೀರ್ಪು ಕೇಂದ್ರ ತನಿಖಾ ಸಂಸ್ಥೆ ಮತ್ತು ಪ್ರಾಸಿಕ್ಯೂಷನ್‌ಗೆ ದೊಡ್ಡ ಹಿನ್ನಡೆಯಾಗಿದೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿಕ್ರಮ್‌ನಾಥ್ ನೇತೃತ್ವದ ಮೂವರು ನ್ಯಾಯಾಧೀಶರ ಪೀಠ ಇಂದು ಮಹತ್ವದ ತೀರ್ಪು ಪ್ರಕಟಿಸಿದೆ. ಇದರೊಂದಿಗೆ ಸುಪ್ರೀಂಕೋರ್ಟ್ ಭಾರತದ ಇತಿಹಾಸದಲ್ಲಿ ಅತ್ಯಂತ ಭಯಾನಕ ಕ್ರಿಮಿನಲ್ ಪ್ರಕರಣಗಳಲ್ಲಿ ಒಂದನ್ನು ಮುಕ್ತಾಯಗೊಳಿಸಿದೆ.

ಬಿಬಿಸಿ ಮುಖ್ಯಸ್ಥ ಟಿಮ್ ಡೇವಿ ರಾಜೀನಾಮೆ

ಲಂಡನ್: ಬಿಬಿಸಿ ಸುದ್ದಿ ಸಂಸ್ಥೆಯ ಇಬ್ಬರು ಉನ್ನತಾಧಿಕಾರಿಗಳ ರಾಜೀನಾಮೆ ಇದೀಗ ಮಾಧ್ಯಮ ವಲಯದಲ್ಲಿ ಮಾತ್ರವಲ್ಲದೇ ವಿಶ್ವಾದ್ಯಂತ ಚರ್ಚೆಗೆ ಗ್ರಾಸವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾಷಣವನ್ನು ತಿರುಚಿ ಪ್ರಸಾರ ಮಾಡಲಾಗಿದೆ ಎಂಬ ಆರೋಪ ವ್ಯಕ್ತವಾದ ಹಿನ್ನಲೆಯಲ್ಲಿ ಬಿಬಿಸಿ ಸಂಸ್ಥೆಯ ಮಹಾ ನಿರ್ದೇಶಕ ಟಿಮ್ ಡೇವಿ ಮತ್ತು ಚೀಫ್ ಎಕ್ಸಿಕ್ಯೂಟಿವ್ ಡೆಬೊರಾ ಟರ್ನೆಸ್ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಜ.6ರಂದು ಕ್ಯಾಪಿಟಲ್ ಹಿಲ್ ದಂಗೆಗೆ ಸಂಬಂಧಿಸಿದಂತೆ ಬಿಬಿಸಿ ಪ್ರಸಾರ ಮಾಡಿದ್ದ ಡಾಕ್ಯುಮೆಂಟರಿ ಒಂದರಲ್ಲಿ ಟ್ರಂಪ್ ಅವರ ಭಾಷಣವನ್ನು ತಿರುಚಿದ ಆರೋಪಕ್ಕೆ ಸಂಬಂಧಿಸಿದಂತೆ ವಿವಾದ ಭುಗಿಲೆದ್ದಿತ್ತು.




ಸಂಸ್ಥೆಯ ಆಂತರಿಕ ಮೆಮೋ ಬಹಿರಂಗಗೊಂಡ ಬಗ್ಗೆ ಡೈಲಿ ಟೆಲಿಗ್ರಾಫ್ ವರದಿ ಮಾಡಿದ ಒಂದು ದಿನದ ಬಳಿಕ ಈ ಇಬ್ಬರು ಉನ್ನತ ಹುದ್ದೆಯಲ್ಲಿದ್ದವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

2021ರ ಜನವರಿ 6ರಂದು ನಡೆದಿದ್ದ ಕ್ಯಾಪಿಟಲ್ ಹಿಲ್ಸ್ ದಂಗೆಕೋರರಿಗೆ ಡೊನಾಲ್ಡ್ ಟ್ರಂಪ್ ಉತ್ತೇಜನ ನೀಡುವಂತೆ ಭಾಷಣ ಮಾಡಿದ್ದರು ಎಂಬ ರೀತಿಯಲ್ಲಿ ಮಾಡಿದ್ದ ವರದಿಗೆ ತೀವ್ರ ಟೀಕೆ ಎದುರಾಗಿತ್ತು.

ಬಾಂಗ್ಲಾ ಮೂಲಕ ಭಾರತದ ಮೇಲೆ ದಾಳಿ ಮಾಡುತ್ತೇವೆ: ಪಾಕ್ ಉಗ್ರ

ಇಸ್ಲಾಮಾಬಾದ್: ದೆಹಲಿಯ ಕೆಂಪುಕೋಟೆ ಬಳಿ ಕಾರು ಸ್ಫೋಟಗೊಂಡ ಪ್ರಕರಣದ ಬೆನ್ನಲ್ಲೇ ವಿಡಿಯೋವೊಂದು ಬಹಿರಂಗವಾಗಿದೆ. ಆಪರೇಷನ್ ಸಿಂಧೂರದ ಪ್ರತೀಕಾರ ತೀರಿಸಿಕೊಳ್ಳಲು ಬಾಂಗ್ಲಾದೇಶದ ಮೂಲಕ ಭಾರತದ ಮೇಲೆ ದಾಳಿ ನಡೆಸುತ್ತೇವೆ ಎಂದು ಲಷ್ಕರ್–ಎ–ತೈಬಾ ಉಗ್ರ ಸೈಫುಲ್ಲಾ ಸೈಫ್ ಬೆದರಿಕೆ ಹಾಕಿದ್ದ ವಿಡಿಯೋವೊಂದು ಹರಿದಾಡುತ್ತಿದೆ. ಅ.30ರಂದು ಪಾಕಿಸ್ತಾನದ ಖೈರ್‌ಪುರ್ ತಮೇವಾಲಿಯಲ್ಲಿ ನಡೆದ ರ್‍ಯಾಲಿಯ ಸಂದರ್ಭದಲ್ಲಿ ತೆಗೆದಿದ್ದ ವಿಡಿಯೋವೊಂದು ಸದ್ಯ ಚರ್ಚೆಗೆ ಗ್ರಾಸವಾಗಿದೆ. ವಿಡಿಯೋದಲ್ಲಿ ಎಲ್‌ಇಟಿ ಉಗ್ರ ಸೈಫುಲ್ಲಾ ಸೈಫ್, ಹಫೀಜ್ ಸಯೀದ್ ಸುಮ್ಮನೆ ಕುಳಿತಿಲ್ಲ, ಬಾಂಗ್ಲಾದೇಶದ ಮೂಲಕ ಭಾರತದ ಮೇಲೆ ದಾಳಿ ಮಾಡಲು ತಯಾರಿ ನಡೆಸುತ್ತಿದ್ದಾನೆ. ಆಪರೇಷನ್ ಸಿಂಧೂರದ ಪ್ರತೀಕಾರ ತೀರಿಸಿಕೊಳ್ಳಲು ಬಾಂಗ್ಲಾದೇಶದಲ್ಲಿ ಎಲ್‌ಇಟಿ ಸಂಘಟನೆ ಸಕ್ರಿಯವಾಗಿದೆ. ಈಗ ಅಮೆರಿಕ ನಮ್ಮೊಂದಿಗಿದೆ. ಬಾಂಗ್ಲಾದೇಶ ಪಾಕಿಸ್ತಾನಕ್ಕೆ ಹತ್ತಿರವಾಗುತ್ತಿದೆ ಎಂದು ಹೇಳಿದ್ದಾನೆ. ದೆಹಲಿಯ ಕೆಂಪು ಕೋಟೆ ಮೆಟ್ರೋ ನಿಲ್ದಾಣದ ಗೇಟ್ 1ರ ಬಳಿ ಸೋಮವಾರ ಸಂಜೆ 6:45ರ ಸುಮಾರಿಗೆ ಸಂಭವಿಸಿದ ಭಾರೀ ಸ್ಫೋಟದಲ್ಲಿ 12 ಜನರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ.



ಗಲಾಟೆ ಬಿಡಿಸಲು ಬಂದ ಸಹ ಸಿಬ್ಬಂದಿಯನ್ನೇ ಹತ್ಯೆಗೈದಿದ್ದ ಆರೋಪಿ ಬಂಧನ

ಮಡಿಕೇರಿ, ನ.11– ಹಣದ ವಿಚಾರಕ್ಕೆ ನಡೆದ ಗಲಾಟೆಯನ್ನು ಬಿಡಿಸಲು ಬಂದಿದ್ದ ಸಹ ಸಿಬ್ಬಂದಿಯನ್ನು ಚಾಕುವಿನಿಂದ ಇರಿದು ಕೊಲೆಗೈದ ಘಟನೆ 1ನೇ ಮೊಣ್ಣಂಗೇರಿ ಗ್ರಾಮದ ಪ್ರತಿಷ್ಠಿತ ರೆಸಾರ್ಟ್‌ನಲ್ಲಿ ನಡೆದಿದ್ದು, ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಪರಾರಿಯಾಗಿದ್ದ ಆರೋಪಿಯನ್ನು ಮಡಿಕೇರಿ ಗ್ರಾಮಾಂತರ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ರೆಸಾರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ ಅಸ್ಸಾಂ ಮೂಲದ ದಿಲೀಪ್ ಶರ್ಮ ಕೊಲೆಯಾದ ವ್ಯಕ್ತಿಯಾಗಿದ್ದು, ಆರೋಪಿ ದಯಾನಂದ್ ಪ್ರಸಾದ್ ಎಂಬಾತನನ್ನು ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಘಟನೆ ಹಿನ್ನೆಲೆ: ರೆಸಾರ್ಟ್‌ನಲ್ಲಿ ಕೆಲಸ ಮಾಡುವ ದಿಲೀಪ್ ಶರ್ಮ, ದಯಾನಂದ ಪ್ರಸಾದ್ ಹಾಗೂ ಸಂತೋಷ್ ಎಂಬವರು 1ನೇ ಮೊಣ್ಣಂಗೇರಿಯಲ್ಲಿ ರೆಸಾರ್ಟ್ ಒಡೆತನದ ಮನೆಯೊಂದರಲ್ಲಿ ವಾಸವಿದ್ದರು. ನ.7ರಂದು ರಾತ್ರಿ 8.30ಕ್ಕೆ ಸಂತೋಷ್ ಕುಮಾರ್ ರೂಮ್‌ಗೆ ಹೋದ ದಯಾನಂದ್ ಹಣದ ವಿಚಾರದಲ್ಲಿ ಗಲಾಟೆ ಮಾಡಿದ್ದಾನೆ. ಈ ವೇಳೆ ದಿಲೀಪ್ ಶರ್ಮ ಮಧ್ಯೆ ಪ್ರವೇಶಿಸಿ ಜಗಳ ಬಿಡಿಸಲು ಯತ್ನಿಸಿದಾಗ ಸಂತೋಷ್ ಕುಮಾರ್ ರೂಮ್‌ನಿಂದ ಗಾಜಿನ ಬಾಟಲಿ ತಂದು ದಯಾನಂದ್ ಪ್ರಸಾದ್ ಮೆಟ್ಟಿಲಿನಲ್ಲಿ ಒಡೆದು ಹಾಕಿದ್ದಾನೆ. ಗಲಾಟೆ ಅತಿರೇಕಕ್ಕೆ ಹೋದ ಸಂದರ್ಭ ದಿಲೀಪ್ ಶರ್ಮ ಘಟನೆಯನ್ನು ಮೊಬೈಲ್‌ನಲ್ಲಿ ವೀಡಿಯೋ ಸೆರೆ ಹಿಡಿದು ವ್ಯವಸ್ಥಾಪಕರಿಗೆ ಕಳಿಸುವು ದಾಗಿ ಎಚ್ಚರಿಕೆ ನೀಡಿದ ಬಳಿಕ ಗಲಾಟೆ ನಿಂತಿದೆ.

ಸಂತೋಷ್ ಕುಮಾರ್ ಶೌಚಾಲಯಕ್ಕೆ ತೆರಳಿದ್ದಾಗ ದಿಲೀಪ್ ಶರ್ಮ ಕಿರುಚುತ್ತಿರುವುದು ಕೇಳಿ ಹೋಗಿ ನೋಡಿದಾಗ ಗಡ್ಡದ ಭಾಗದಲ್ಲಿ ಗಾಯವಾಗಿರುವುದು ಕಂಡು ಬಂದಿದೆ. ಪಕ್ಕದಲ್ಲಿದ್ದ ದಯಾನಂದ್‌ನನ್ನು ವಿಚಾರಿಸಿದ ಸಂದರ್ಭ ಮೆಟ್ಟಿಲಿನಲ್ಲಿ ಬಿದ್ದು ಗಾಯವಾಗಿದೆ ಎಂದು ಹೇಳಿದ್ದಾನೆ. ಕೂಡಲೇ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ ಸಂದರ್ಭ ಹೊಟ್ಟೆ ಹಾಗೂ ಎದೆಯ ಭಾಗದಲ್ಲಿ ಚಾಕುವಿನಿಂದ ಇರಿದಿರುವುದು ಪತ್ತೆಯಾಗಿದೆ. ಗಾಯಾಳುವನ್ನು ವಿಚಾರಿಸಿದಾಗ ದಯಾನಂದ್ ಪ್ರಸಾದ್ ಹಲ್ಲೆಗೈದಿರುವುದಾಗಿ ವಿಚಾರ ತಿಳಿಸಿದ್ದಾನೆ. ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೆ ನ.8ರಂದು ಮೃತಪಟ್ಟಿದ್ದನು. ಘಟನೆ ಬಳಿಕ ಆರೋಪಿ ದಯಾನಂದ್ ಪ್ರಸಾದ್ ತಲೆಮರೆಸಿಕೊಂಡಿದ್ದು, ಆತನನ್ನು ತನಿಖಾ ತಂಡ ಬೆಂಗಳೂರಿನಲ್ಲಿ ಪತ್ತೆಹಚ್ಚಿ ಬಂಧಿಸಿದೆ

ಸಿಎನ್‌ಡಿ ಲ್ಯಾಂಡ್ ಸಮಸ್ಯೆ ಪರಿಹಾರಕ್ಕೆ ತಜ್ಞರ ಸಮಿತಿ

ಸಚಿವ ಕೃಷ್ಣಬೈರೇಗೌಡ



ಮಾದಾಪಟ್ಟಣದಲ್ಲಿ ತಾಲೂಕು ಆಡಳಿತ ಭವನ ಪ್ರಜಾಸೌಧಕ್ಕೆ ಮಂಗಳವಾರ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು. ಶಾಸಕ ಡಾ.ಮಂಥರ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕುಶಾಲನಗರ, ನ.11– ಸಿ.ಎನ್.ಡಿ. ಲ್ಯಾಂಡ್ ಸಮಸ್ಯೆ ಪರಿಹಾರಕ್ಕೆ ತಜ್ಞರ ಸಮಿತಿಯನ್ನು ರಚನೆ ಮಾಡಿ ಮುಖ್ಯಮಂತ್ರಿಗಳಿಗೆ ಕಳುಹಿಸಿರುವುದಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ.

ಮಾದಾಪಟ್ಟಣದಲ್ಲಿ 8.60 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಾಲೂಕು ಆಡಳಿತ ಭವನ ಪ್ರಜಾಸೌಧಕ್ಕೆ ಮಂಗಳವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಸಿ.ಎನ್.ಡಿ.ಲ್ಯಾಂಡ್ 12 ಸಾವಿರ ಎಕರೆ ಪ್ರದೇಶವನ್ನು ಅರಣ್ಯ ಬಿಟ್ಟು ಕೊಡಬೇಕು ಎಂದು 2021ರಲ್ಲಿ ಹೈಕೋರ್ಟ್ ಆದೇಶ ನೀಡಿತ್ತು. ಆಗಿನ ಸರ್ಕಾರ ಸರಿಯಾಗಿ ವಾದ ಮಂಡಿಸದೆ ಕೈಚೆಲ್ಲಿದ ಪರಿಣಾಮ ಈ ಪರಿಸ್ಥಿತಿ ಬಂದಿದೆ. ನಮ್ಮ ಸರ್ಕಾರ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದಾಗ ಕೋರ್ಟ್ ಮೊದಲು ಆದೇಶ ಇಂಪ್ಲಿಮೆಂಟ್ ಮಾಡಿ ಎಂದು ಹೇಳಿದೆ. ಈ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ದಾಖಲೆಗಳ ಡಿಜಿಟಲೀಕರಣ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮೂಲ ದಾಖಲೆಗಳ ಡಿಜಿಟಲೀಕರಣ ಮಾಡಲಾಗುತ್ತಿದ್ದು, ಈಗಾಗಲೇ ಸುಮಾರು 50 ಕೋಟಿ ಪುಟಗಳಷ್ಟು ಸ್ಕ್ಯಾನಿಂಗ್ ಮಾಡಲಾಗಿದ್ದು, ಇನ್ನು 50 ಕೋಟಿಗಳಷ್ಟು ಬಾಕಿ ಇದೆ. ಕೊಡಗಿನ ನಾಲ್ಕು ತಾಲೂಕುಗಳ ದಾಖಲೆ ಡಿಜಿಟಲೀಕರಣ ಆಗಿದ್ದು, ಮಡಿಕೇರಿ ತಾಲೂಕಿನದು ಸ್ವಲ್ಪ ಬಾಕಿ ಉಳಿದುಕೊಂಡಿದೆ ಎಂದರು.

ಜಿಲ್ಲೆಯಲ್ಲಿ ಭೂಕುಸಿತ ತಡೆಗಟ್ಟಲು ಅನುದಾನ ನೀಡುವಂತೆ ಶಾಸಕರ ಮನವಿ ಮೇರೆಗೆ ಭೂ ಕುಸಿತ ತಡೆಗಟ್ಟುವ ಕಾಮಗಾರಿಗೆ ರೂ.50 ಕೋಟಿ ಮಂಜೂರು ಮಾಡಿದ್ದು, ಇನ್ನೂ 10 ಕೋಟಿ ರೂ. ಅನುದಾನ ನೀಡಲು ಹಣಕಾಸು ಇಲಾಖೆಗೆ ಸೂಚಿಸಲಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಡಾ. ಮಂತರ್ ಗೌಡ ಮಾತನಾಡಿ, ಪ್ರಜಾಸೌಧ ಅನುಷ್ಠಾನಕ್ಕೆ ಉನ್ನತ ಶಿಕ್ಷಣ ಸಚಿವರ ಸಹಕಾರದೊಂದಿಗೆ ಕಂದಾಯ ಸಚಿವರು ಸೂಕ್ತವಾಗಿ ಸ್ಪಂದಿಸಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಜನರ ಸೇವೆಗೆ ಸರ್ಕಾರದ ಅಭಿಲಾಷೆಯೊಂದಿಗೆ ಅಧಿಕಾರಿ ವರ್ಗದವರು ಕೂಡ ಪ್ರಾಮಾಣಿಕ ಸೇವೆ ಸಕಾಲದಲ್ಲಿ ಒದಗಿಸಬೇಕು ಎಂದು ಸಲಹೆ ನೀಡಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ವಕೀಲರ ಸಂಘದ ಅಧ್ಯಕ್ಷ ಆರ್.ಕೆ. ನಾಗೇಂದ್ರ ಬಾಬು ಮಾತನಾಡಿದರು.

ಜಿಲ್ಲಾಧಿಕಾರಿ ವೆಂಕಟರಾಜ್, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆನಂದ ಪ್ರಕಾಶ್ ಮೀನಾ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಜ ಉತ್ತಪ್ಪ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಚಂದ್ರಕಲಾ, ತಹಶೀಲ್ದಾರ್ ಕಿರಣ್ ಜಿ ಗೌರಯ್ಯ, ತಾಲೂಕು ಪಂಚಾಯತಿ ಅಧಿಕಾರಿ ಪರಮೇಶ್ವರಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ರೈತರ ಅಸಮಾಧಾನ: ಸೋಮವಾರಪೇಟೆ ತಾಲೂಕಿನ ಸಿಎನ್‌ಡಿ ಲ್ಯಾಂಡ್ ರೈತ ಹೋರಾಟಗಾರರು ಮಂಗಳವಾರ ಸಚಿವರಿಗೆ ಮನವಿ ಸಲ್ಲಿಸಲು ಸಭಿಕರ ಮಧ್ಯೆ ಕುಳಿತಿದ್ದರು. ಸಚಿವರು ಹೊರಡುತ್ತಿದ್ದಾಗ ಬಂದು ಮನವಿ ನೀಡುವಂತೆ ಕಾಂಗ್ರೆಸ್ ಮುಖಂಡರು ಹೇಳಿದರು. ಸಚಿವರು ಇಲ್ಲಿಗೆ ಬಂದು ನಮ್ಮ ಸಮಸ್ಯೆ ಆಲಿಸಬೇಕು ಎಂದು ರೈತರು ಪಟ್ಟು ಹಿಡಿದರು. ವಿಷಯ ತಿಳಿದ ಸಚಿವರು ರೈತರ ಬಳಿಗೇ ಬಂದು ಮನವಿ ಪತ್ರ ಸ್ವೀಕರಿಸಿ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿ ಅಲ್ಲಿಂದ ತೆರಳಿದರು. ಆದರೆ ರೈತರು ಮಾತ್ರ ಸಚಿವರು ರೈತರ ಸಮಸ್ಯೆಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ನಮ್ಮ ಅಹವಾಲನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನ.16, ಜಿಲ್ಲಾಮಟ್ಟದ ಹಗ್ಗ ಜಗ್ಗಾಟ ಸ್ಪರ್ಧೆ

ನಾಪೋಕ್ಲು, ನ.11– ಇಲ್ಲಿಗೆ ಸಮೀಪದ ಬಲಂಬೇರಿ (ಬಲಮುರಿ) ಗ್ರಾಮದ ಮಹಾದೇವ ಕ್ರೀಡಾ ಮಂಡಳಿ ವತಿಯಿಂದ ನ. 16ರಂದು ಹಿಂದೂ ಕಪ್ ಹಗ್ಗ ಜಗ್ಗಾಟದ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಬಲಂಬೇರಿಯ ಕಾವೇರಿ ನದಿ ದಡದ ಬಲಂಗಮುಡಿ ಮೈದಾನದಲ್ಲಿ ನಡೆಯಲಿರುವ ಸ್ಪರ್ಧೆಯನ್ನು ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಆಯೋಜಿಸಲಾಗಿದೆ. ಪ್ರತಿ ವಿಭಾಗದಲ್ಲಿ ವಿಜೇತ ತಂಡಗಳಿಗೆ ಪ್ರಥಮ 20,000 ನಗದು ಮತ್ತು ಟ್ರೋಫಿ, ದ್ವಿತೀಯ 15,000 ರೂ. ನಗದು ಮತ್ತು ಟ್ರೋಫಿ, ಹಾಗೂ ತೃತೀಯ ಬಹುಮಾನ 10,000 ಮತ್ತು ಟ್ರೋಫಿಯನ್ನು ವಿತರಿಸಲಾಗುವುದು.

ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ತೊತ್ತಿಯಂಡ ಬನ್ನಿ ಚಿನ್ನಪ್ಪ ಅಧ್ಯಕ್ಷರು 9845895129, ಗುಡ್ಡೆರ ಲಕ್ಷ್ಮ, ಉಪಾಧ್ಯಕ್ಷರು, 8762061156, ಬೋಳ್ಳಚೆಟ್ಟಿರ ಜಯಂತಿ ಕಾರ್ಯದರ್ಶಿ 9482982297ರವರನ್ನು ದೂರವಾಣಿ ಮುಖೇನ ಸಂಪರ್ಕಿಸಬಹುದಾಗಿದೆ ಎಂದು ಮಹಾದೇವ ಕ್ರೀಡಾ ಮಂಡಳಿ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದ ನಿಯೋಗ ಸಚಿವರಿಗೆ ಮನವಿ



ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿನ ಹೊರಗುತ್ತಿಗೆ ನೌಕರರ ಸಂಘದ ಸದಸ್ಯರ ನಿಯೋಗ ಅರಣ್ಯ ಸಚಿವ ಈಶ್ವರ್ ಖಂಡ್ರೆ ಭೇಟಿ ಮಾಡಿ ಮನವಿ ಸಲ್ಲಿಸಿತು.

ನಾಪೋಕ್ಲು, ನ.11– ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದ ಸದಸ್ಯರ ನಿಯೋಗ ಅರಣ್ಯ ಸಚಿವ ಈಶ್ವರ್ ಖಂಡ್ರೆ ನಿವಾಸದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿತು. ಹತ್ತು ವರ್ಷಗಳಿಂದ ಸೇವೆ ಸಲ್ಲಿಸಿದ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು, ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದ ನೌಕರರನ್ನು ಹೊರಗುತ್ತಿಗೆಯಾಗಿ ಮಾರ್ಪಡಿಸಿರುವುದು. ಆರ್ಥಿಕ ಇಲಾಖೆಯ ಹೊರಡಿಸಿರುವ ಸುತ್ತೋಲೆಯನ್ನು ಮಾರ್ಪಡಿಸುವುದು. ದಿನಗೂಲಿ ಸೇವಾ ಅವಧಿ, ಸೇವಾ ಹಿರಿತನ ವನ್ಯಜೀವಿ ಘಟಕಗಳಲ್ಲಿ ಇಪಿಎಫ್, ಇಎಸ್‌ಐ ಸಮರ್ಪಕ ನಿರ್ವಹಣೆ, ವಿಮಾಸೌಲಭ್ಯ ಸೇರಿದಂತೆ ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಘವು ಶಾಸಕ ಪೊನ್ನಣ್ಣ ನೇತೃತ್ವದಲ್ಲಿ ಮನವಿ ಸಲ್ಲಿಸಿತು.

ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದರು. ಅರಣ್ಯ ಇಲಾಖೆ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘ ಹಾಗೂ ಪ್ರಾದೇಶಿಕ ಸಂಶೋಧನೆ, ಗೌರವ ಅಧ್ಯಕ್ಷ ಎ ಎಂ ನಾಗರಾಜ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಿಹೆಚ್‌ಪಿಯಿಂದ ಹುತಾತ್ಮ ದಿನ ಆಚರಣೆ



ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿದ್ದ ದೇವಪಂಡ ಕುಟ್ಟಪ್ಪ ಅವರನ್ನು ಸ್ಮರಿಸಿ ಹುತಾತ್ಮ ದಿನ ಆಚರಣೆ ಮಾಡಲಾಯಿತು.

ವಿರಾಜಪೇಟೆ, ನ.11– ಟಿಪ್ಪು ಜಯಂತಿ ಆಚರಣೆಯ ವೇಳೆಯಲ್ಲಿ ಕಿಡಿಗೇಡಿಗಳಿಂದ ಗಾಯಗೊಂಡು ಹುತಾತ್ಮರಾದ ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿದ್ದ ದೇವಪಂಡ ಕುಟ್ಟಪ್ಪ ಅವರನ್ನು ಸ್ಮರಿಸಿ ಹುತಾತ್ಮ ದಿನ ಆಚರಣೆ ಮಾಡಲಾಯಿತು.

ಹಿಂದೂ ಹಿತರಕ್ಷಣಾ ವೇದಿಕೆ ವತಿಯಿಂದ ಪಟ್ಟಣದ ಅಪ್ಪಯ್ಯ ಸ್ವಾಮಿ ರಸ್ತೆಯ ಶ್ರೀ ಬಾಲಾಂಜನೇಯ ಸ್ವಾಮಿ ದೇಗುಲದಲ್ಲಿ ದೇವಪಂಡ ಕುಟ್ಟಪ್ಪ ಹೆಸರಿನಲ್ಲಿ ಶಾಂತಿ ಪೂಜೆ ಸಲ್ಲಿಸಲಾಯಿತು.

ನಗರ ಭಾ.ಜ.ಪ ಅಧ್ಯಕ್ಷ ಅಂಜಪರುಪಂಡ ಅನೀಲ್ ಮಂದಣ್ಣ ಮಾತನಾಡಿ, ಹಿಂದೂಗಳ ಭಾವನೆಗಳಿಗೆ ವಿರುದ್ಧವಾಗಿ 2015 ರಲ್ಲಿ ಸರ್ಕಾರ ಟಿಪ್ಪು ಸುಲ್ತಾನ ಜಯಂತಿ ಆಚರಣೆಗೆ ಮುಂದಾಗಿದ್ದ ಪರಿಣಾಮ ಮಡಿಕೇರಿಯಲ್ಲಿ ಕೋಮುಗಲಭೆ ಸಂಭವಿಸಿತ್ತು. ಘಟನೆಯಲ್ಲಿ ಹಿಂದೂ ಧರ್ಮದ ಕಟ್ಟಾಳು ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿದ್ದ ದೇವಪಂಡ ಕುಟ್ಟಪ್ಪ ಕಿಡಿಗೇಡಿಗಳ ಷಡ್ಯಂತ್ರಕ್ಕೆ ಸಿಲುಕಿ ಹುತಾತ್ಮರಾದರು. ಅವರ ಸ್ಮರಣೆಯನ್ನು ಮಾಡುವುದು ನಮ್ಮ ಕರ್ತವ್ಯ ಎಂದು ಇಂದು ಹುತಾತ್ಮ ದಿನವನ್ನಾಗಿ ಆಚರಿಸುತ್ತಿದ್ದೇವೆ. ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಹೇಳಿದರು.

ಹಿಂದೂ ಬಾಂಧವರಿಂದ ಕುಟ್ಟಪ್ಪ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ದೇಗುಲದ ಅರ್ಚಕ ಬಾಬಾ ಶಂಕರ್, ಹಿಂದೂ ಹಿತರಕ್ಷಣಾ ವೇದಿಕೆಯ ಪ್ರಮುಖ ವಿವೇಕ್ ರೈ, ಎಲ್.ಜಿ ಭಾಸ್ಕರ್, ಬಲ್ಲಚಂಡ ರಂಜನ್ ಬಿದ್ದಪ್ಪ, ಮನೋಜ್, ಪಾಂಡಂಡ ರಚನ್ ಮೇದಪ್ಪ, ಹಿಂದೂ ಅಗ್ನಿ ದಳದ ಪ್ರಮುಖ ಬಿಪಿನ್ ಮುತ್ತಪ್ಪ, ಪ್ರದೀಪ್ ರೈ, ಮೊದಲಾದವರು ಹಾಜರಿದ್ದರು.

ದೆಹಲಿ ಬಾಂಬ್ ಸ್ಫೋಟ: ಜಿಲ್ಲೆಯಾದ್ಯಂತ ಕಟ್ಟೆಚ್ಚರ



ದೆಹಲಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಬಾಂಬ್ ನಿಷ್ಕ್ರಿಯ ದಳ ಜನ ಜಂಗುಳಿ ಸೇರುವ ಸ್ಥಳಗಳಲ್ಲಿ ತಪಾಸಣೆ ನಡೆಸಿತು.

ಮಡಿಕೇರಿ, ನ.11–ದೆಹಲಿ ಬಾಂಬ್ ಸ್ಫೋಟ ಘಟನೆ ಬಳಿಕ ಜಿಲ್ಲೆಯಲ್ಲಿಯೂ ನಿನ್ನೆ ರಾತ್ರಿಯಿಂದಲೇ ಕಟ್ಟೆಚ್ಚರ ವಹಿಸಲಾಗಿದೆ.

ಜಿಲ್ಲೆಯ ಜನನಿಬಿಡ ಮತ್ತು ಆಯಕಟ್ಟಿನ ಪ್ರದೇಶಗಳಲ್ಲಿ ಪೊಲೀಸ್ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಮತ್ತು ಎಫ್‌ಎಸ್‌ಎಲ್ ಸಿಬ್ಬಂದಿಗಳು ಜಂಟಿಯಾಗಿ ತಪಾಸಣಾ ಕಾರ್ಯಾಚರಣೆ ನಡೆಸಿದರು. ಕೆಎಸ್‌ಆರ್‌ಟಿಸಿ, ಖಾಸಗಿ ಬಸ್ ನಿಲ್ದಾಣಗಳು, ಪ್ರಸಿದ್ಧ ಪ್ರವಾಸಿ ತಾಣಗಳು, ಪ್ರಯಾಣಿಕರ ಬಸ್ ತಂಗುದಾಣ ಸಹಿತ ಜನ ಜಂಗುಳಿ ಸೇರುವ ಸ್ಥಳಗಳಲ್ಲಿ ತಪಾಸಣೆ ನಡೆಸಲಾಯಿತು. ವಿಶೇಷವಾಗಿ ಹೊರ ರಾಜ್ಯದ ವಲಸೆ ಕಾರ್ಮಿಕರ ಲಗೇಜ್‌ಗಳು, ಬಸ್‌ಗಳ ಕ್ಯಾರಿಯರ್‌ಗಳಲ್ಲೂ ಸಂಶಯಾಸ್ಪದ ವಸ್ತುಗಳ ಬಗ್ಗೆ ತಪಾಸಣೆ ನಡೆಸಲಾಯಿತು.

ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ್ಯದಿಂದ

ಸಂವಿಧಾನ @ 75 ಸಂದೇಶ ಯಾತ್ರೆಗೆ ಚಾಲನೆ



ಚಾಮರಾಜನಗರದಲ್ಲಿ ಎಬಿವಿಪಿ ಕರ್ನಾಟಕ ದಕ್ಷಿಣಪ್ರಾಂತ್ಯದಿಂದ ಆಯೋಜಿಸಿದ್ದ ಸಂವಿಧಾನ 75 ಸಂದೇಶ ಯಾತ್ರೆಗೆ ಚಾಲನೆ ನೀಡಲಾಯಿತು.

ಚಾಮರಾಜನಗರ, ನ.11– ಅಂಬೇಡ್ಕರ್ ಸಾಮಾಜಿಕ ನ್ಯಾಯ, ಸ್ವಾತಂತ್ರ್ಯದಡಿ ಮಾತೃ ಹೃದಯದ ಸಂವಿಧಾನ ರಚನೆ ಮಾಡಿದ್ದು, ಅದು ಯಾವುದೇ, ಧರ್ಮ, ಜಾತಿಗೆ ಸೀಮಿತವಾಗಿಲ್ಲ ಎಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕೇಂದ್ರಿಯ ಸಮಿತಿ ಸದಸ್ಯ ಮಣಿಕಂಠಕಳಸ್ ಹೇಳಿದ್ದಾರೆ.

ನಗರದ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಮಂಗಳವಾರ ಎಬಿವಿಪಿ ಕರ್ನಾಟಕ ದಕ್ಷಿಣಪ್ರಾಂತ್ಯದಿಂದ ಆಯೋಜಿಸಿದ್ದ ಸಂವಿಧಾನ 75 ಸಂದೇಶ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಸಂವಿಧಾನವನ್ನು ದೇಶಕ್ಕೆ ಅರ್ಪಿಸಿದ ಇಂದಿನವರೆಗೆ ಸಂವಿಧಾನ 100 ಬಾರಿ ತಿದ್ದುಪಡಿಯಾಗಿದ್ದು, ಜನಸಂಖ್ಯೆಗನುಗುಣವಾಗಿ ಸವಲತ್ತು ಒದಗಿಸುವ ಕ್ರಮವಹಿಸಲಾಗಿದೆ. ಇತರೇ ದೇಶಗಳ ಸಂವಿಧಾನದಲ್ಲಿ ಕೇವಲ 5ರಿಂದ 6ವಿಧಿಗಳಿದ್ದರೆ ಭಾರತದ ಸಂವಿಧಾನದಲ್ಲಿ 395 ವಿಧಿಗಳಿವೆ ಎಂಬುದೇ ವಿಶೇಷ ಎಂದರು.

ಜಾನಪದ ಕಲೆಗಳ ತವರೂರಾಗಿರುವ ಚಾಮರಾಜನಗರದಿಂದಲೇ ಸಂವಿಧಾನ ಸಂದೇಶ ಯಾತ್ರೆ ಆರಂಭಿಸಿದ್ದೇವೆ, ಪಾದಯಾತ್ರೆಯಲ್ಲಿ ಭಾಗವಹಿಸುವವರು ಸಂವಿಧಾನ ಸಂದೇಶ ಯಾತ್ರೆಯನ್ನು ಯಶಸ್ವಿಗೊಳಿಸಿಕೊಡಬೇಕು ಎಂದರು.

ಎಬಿವಿಪಿ ರಾಜ್ಯಕಾರ್ಯದರ್ಶಿ ಎಚ್.ಕೆ. ಪ್ರವೀಣ್ ಮಾತನಾಡಿದರು. ಮಾಜಿ ಕೇಂದ್ರ ಸಚಿವ ಹಿರಿಯರಾಜಕಾರಣಿ ದಿ.ವಿ.ಶ್ರೀನಿವಾಸ್ ಪ್ರಸಾದ್ ಪತ್ನಿ ಭಾಗ್ಯಲಕ್ಷ್ಮಿ ಕಾರ್ಯಕ್ರಮ ಉದ್ಘಾಟಿಸಿದರು.

ವೇದಿಕೆ ಕಾರ್ಯಕ್ರಮದ ನಂತರ ಚಾಮರಾಜನಗರದಿಂದ 75 ಕಿ.ಮೀ ದೂರದ ಮೈಸೂರಿಗೆ 75ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿರುವ ಸಂವಿಧಾನ 75 ಸಂದೇಶ ಯಾತ್ರೆ ಪಾದಯಾತ್ರೆ ಸಂಬಂಧ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು. ನಂತರ ಶೋಭಯಾತ್ರೆ ನಗರದ ಪ್ರಮುಖಬೀದಿಗಳಲ್ಲಿ ಡೊಳ್ಳುಕುಣಿತದೊಂದಿಗೆ ಸಾಗಿತು. ಎಬಿವಿಪಿ ರಾಜ್ಯ ಸಹಕಾರ್ಯದರ್ಶಿ ಪ್ರಜ್ವಲ್, ಸೇವಾ ಭಾರತಿ ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲೆ ನಿರ್ಮಲ ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು, ಜಿಲ್ಲಾ ಬಿಜೆಪಿ ಮುಖಂಡರು ಹಾಜರಿದ್ದರು.

ಬೇಗೂರು ವ್ಯಕ್ತಿಯ ಸಂಶಯಾಸ್ಪದ ಸಾವು



ತಾಲೂಕಿನ ಕಮರಹಳ್ಳಿ ಬಳಿ ಪತ್ತೆಯಾದ ಮೃತದೇಹದ ಮಹಜರ್ ಕಾರ್ಯವನ್ನು ಪೊಲೀಸರು ನಡೆಸಿದರು.

ಗುಂಡ್ಲುಪೇಟೆ, ನ.11 –ತಾಲೂಕಿನ ಬೇಗೂರು ಸಮೀಪ ವ್ಯಕ್ತಿಯೊಬ್ಬರ ಮೃತದೇಹ ಸಂಶಯಾಸ್ಪದವಾಗಿ ಪತ್ತೆಯಾಗಿದೆ. ತಾಲೂಕಿನ ಹಾಲಹಳ್ಳಿ ಗ್ರಾಮದ ಹೆಚ್.ಎಂ. ಸ್ವಾಮಿ (73) ಎಂಬವರ ಮೃತ ದೇಹ ಕಮರಹಳ್ಳಿಗೆ ಹೋಗುವ ರಸ್ತೆ ಬದಿ ಯಲ್ಲಿ ಕಂಡುಬಂದಿದೆ. ಹಣಕಾಸು ವ್ಯವಹಾರ ನಿರ್ವಹಿಸುತ್ತಿದ್ದ ಸ್ವಾಮಿ ಬೇಗೂರಿನಲ್ಲಿ ನೆಲೆಸಿದ್ದರು. ಸೋಮವಾರ ಸಂಜೆ ಮನೆಯಿಂದ ಹೋದವರು ಮನೆಗೆ ಹಿಂದಿರುಗಿರಲಿಲ್ಲ ಅವರ ಮೊಬೈಲ್ ಸ್ವಿಚಾಫ್ ಆಗಿತ್ತು ಎಂದು ಮೃತರ ಪತ್ನಿ ಅಮ್ಮಾಬಾಯಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಬೇಗೂರು ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಮೋಹಿತ್ ಸಹದೇವ್ ಹಾಗೂ ಸಿಬ್ಬಂದಿ ಪರಿಶೀಲಿಸಿದಾಗ ಕುತ್ತಿಗೆಗೆ ಟವೆಲ್ ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸ್ಥಳಕ್ಕೆ ಆಗಮಿಸಿದ ಅಮ್ಮಾಬಾಯಿ ತನ್ನ ಪತಿ ಸದಾ ಧರಿಸುತ್ತಿದ್ದ ಕುತ್ತಿಗೆಯಲ್ಲಿದ್ದ ಹುಲಿಯುಗುರಿನ ಚಿನ್ನದ ಸರ ಹಾಗೂ ಕೈಬೆರಳಿನಲ್ಲಿದ್ದ ಚಿನ್ನದ ಉಂಗುರಗಳು ಕಾಣೆಯಾಗಿದ್ದು, ಈ ಸಾವು ಸಂಶಯಾಸ್ಪದವಾಗಿದೆ ಎಂದು ಆರೋಪಿಸಿದ್ದಾರೆ. ದೂರು ಸ್ವೀಕರಿಸಿದ ಪೊಲೀಸರು ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ ನಂತರ ವಾರಸುದಾರರ ವಶಕ್ಕೆ ನೀಡಿದರು. ಸ್ಥಳಕ್ಕೆ ಅಡಿಷನಲ್ ಎಸ್‌ಪಿ ಶಶಿಧರ್, ಡಿವೈಎಸ್‌ಪಿ ಸ್ನೇಹರಾಜ್ ಭೇಟಿ ನೀಡಿ ಪರಿಶೀಲಿಸಿದರು.

ಸುವರ್ಣಾವತಿ ನದಿಯಲ್ಲಿ ಮೀನು ಹಿಡಿಯಲು ಹೋಗಿ ಯುವಕನ ಸಾವು



ಚಾಮರಾಜನಗರ, ನ. 11–ತೆಪ್ಪವೊಂದು ಮುಳುಗಿ ಮೀನು ಹಿಡಿಯಲು ತೆರಳಿದ್ದ ಇಬ್ಬರಲ್ಲಿ ಒಬ್ಬ ಮೃತಪಟ್ಟಿರುವ ಘಟನೆ ಸೋಮವಾರ ಸಂಜೆ ತಾಲೂಕಿನ ಸುವರ್ಣಾವತಿ ನದಿಯಲ್ಲಿ ನಡೆದಿದೆ.

ಅಟ್ಟುಗೂಳಿಪುರದ ಬುಡಕಟ್ಟು ಜನಾಂಗಕ್ಕೆ ಸೇರಿದ ಶಿವಸ್ವಾಮಿ (25) ಮತ್ತು ದಿಲೀಪ್ (17) ಸಂಜೆ ತೆಪ್ಪದ ಮೂಲಕ ಸುವರ್ಣಾವತಿ ನದಿಯಲ್ಲಿ ಮೀನು ಹಿಡಿಯಲು ತೆರಳಿದ್ದರು, ಆಕಸ್ಮಿಕವಾಗಿ ತೆಪ್ಪ ಮುಳುಗಿದ ಪರಿಣಾಮ ಇಬ್ಬರೂ ನದಿಯಲ್ಲಿ ಬಿದ್ದರೂ ದಿಲೀಪ್ ಈಜು ಮೂಲಕ ದಡ ಸೇರಿದರೆ ಶಿವಸ್ವಾಮಿಗೆ ಈಜಲಾಗದೆ ಮುಳುಗಿ ಅಸು ನೀಗಿದ್ದಾನೆ.

ವಿವಾಹಿತನಾಗಿರುವ ಶಿವಸ್ವಾಮಿಗೆ ಒಂದು ಮಗು ಇದೆ, ಸುದ್ದಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಸಿಬ್ಬಂದಿಯವರು ಶವಕ್ಕಾಗಿ ಶೋಧ ನಡೆಸಿದ್ದಾರೆ, ಆದರೆ ಇಂದೂ ಸಹ ಶವ ದೊರೆಯದ ಕಾರಣ ಕಾರ್ಯಾಚರಣೆಯನ್ನು ನಾಳೆಗೆ ಮುಂದೂಡಿದ್ದಾರೆ, ಸ್ಥಳದಲ್ಲಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ, ಪೂರ್ವ ಠಾಣೆ ಪೊಲೀಸರು ಪರಿಶೀಲಿಸಿದರು.

ಹೆಳವರಹುಂಡಿ ಗ್ರಾಮಸ್ಥರಿಂದ ಕೊಂಗಳ್ಳಿ ಮಲ್ಲಿಕಾರ್ಜುನ ಸ್ವಾಮಿ ಉತ್ಸವ



ಮಲ್ಲಿಕಾರ್ಜುನಸ್ವಾಮಿಯವರ ಉತ್ಸವವನ್ನು ಗ್ರಾಮಸ್ಥರು ಅದ್ಧೂರಿಯಾಗಿ ನೆರವೇರಿಸಿದರು.

ತಿ.ನರಸೀಪುರ, ನ.11– ಚಾಮರಾಜನಗರ ಜಿಲ್ಲೆಯ ಕೊಂಗಳ್ಳಿ ಮಲ್ಲಪ್ಪನ ಬೆಟ್ಟದಲ್ಲಿ ಮಲ್ಲಿಕಾರ್ಜುನ ಸ್ವಾಮಿಯವರ ಉತ್ಸವವನ್ನು ಹೆಳವರ ಹುಂಡಿ ಗ್ರಾಮಸ್ಥರು ಅದ್ಧೂರಿಯಾಗಿ ನೆರವೇರಿಸಿದರು.

ಪ್ರತಿ ವರ್ಷದಂತೆ ಹೆಳವರ ಹುಂಡಿ ಗ್ರಾಮಸ್ಥರು ಶನಿವಾರ ಕೊಂಗಳ್ಳಿ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಹೊರಟು, ಕಾರ್ತಿಕ ಮಾಸದ 3ನೇ ಸೋಮವಾರ ಕೊಂಗಳ್ಳಿ ಬೆಟ್ಟ ತಲುಪಿದರು. ಸಾವಿರಾರು ಮಂದಿ ಸಮ್ಮುಖದಲ್ಲಿ ಮೆರವಣಿಗೆ ಮೂಲಕ ಬಸವ ಮೂರ್ತಿಯೊಂದಿಗೆ ಶ್ರೀ ಮಲ್ಲಿಕಾರ್ಜುನನ ಹುಲಿ ವಾಹನೋತ್ಸವ ನೆರವೇರಿಸಿ, ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿ ದೇವರ ಕೃಪೆಗೆ ಪಾತ್ರರಾದರು.

ಗ್ರಾಮದ ಮುಖಂಡರು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಗ್ರಾಮದಿಂದ ಕಾಲ್ನಡಿಗೆಯಲ್ಲಿ ಬಂದು ಮಲ್ಲಿಕಾರ್ಜುನ ಸ್ವಾಮಿ ಅವರ ಸೇವೆ ನಡೆಸಲಾಗಿದೆ. ಕಳೆದ ವರ್ಷ 10 ಸಾವಿರ ಮಂದಿಗೆ ಪ್ರಸಾದದ ವ್ಯವಸ್ಥೆ ಮಾಡಿದ್ದೆವು. ಈ ಬಾರಿ ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿದ್ದರಿಂದ ಎಲ್ಲಾ ಭಕ್ತಾದಿಗಳಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದರು.

ಇಂದು ಕೆ.ಡಿ.ಪಿ ಸಭೆ

ಚಾಮರಾಜನಗರ, ನ.11–ಜಿಲ್ಲಾಮಟ್ಟದ ಎರಡನೇ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧ್ಯಕ್ಷತೆಯಲ್ಲಿ ನ. 12ರ ಬೆಳಿಗ್ಗೆ 10.30 ಗಂಟೆಗೆ ನಗರದ ಜಿಪಂ ನೂತನ ಕೆಡಿಪಿ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಪಂ ಪ್ರಕಟಣೆ ತಿಳಿಸಿದೆ

ದೆಹಲಿ ಸ್ಫೋಟ; ಜಿಲ್ಲೆಯ ಗಡಿಯಲ್ಲಿ ಕಟ್ಟೆಚ್ಚರ



ಚಾಮರಾಜನಗರ, ನ.11–ದೆಹಲಿ ಕೆಂಪುಕೋಟೆ ಘಟನೆ ಹಿನ್ನೆಲೆಯಲ್ಲಿ ಜಿಲ್ಲೆಯ ಗಡಿ ಭಾಗಗಳಲ್ಲಿ ಪೊಲೀಸರು ನಿನ್ನೆಯಿಂದಲೇ ಕಟ್ಟೆಚ್ಚರ ವಹಿಸಿದ್ದಾರೆ

ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಕೇರಳ ಹಾಗೂ ತಮಿಳುನಾಡು ರಾಜ್ಯದ ಗಡಿಯಲ್ಲಿ ಪೊಲೀಸರು ಹೈ ಅಲರ್ಟ್ ಆಗಿದ್ದು, ಗಡಿಯಲ್ಲಿ ಖಾಕಿ ಹದ್ದಿನ ಕಣ್ಣಿಟ್ಟಿದೆ. ತಾಲೂಕಿನ ಮದ್ದೂರು ಹಾಗೂ ಮೂಲೆಹೊಳೆ ಚೆಕ್‌ಪೋಸ್ಟ್ ಬಳಿ ತೀವ್ರ ತಪಾಸಣೆ ಕೈಗೊಳ್ಳಲಾಗಿದ್ದು, ಬಂಡೀಪುರ ಮೂಲಕ ರಾಜ್ಯವನ್ನು ಪ್ರವೇಶಿಸುವ ಹಾಗೂ ಹಿಂತಿರುಗುವ ಪ್ರತಿ ವಾಹನಗಳನ್ನು ಬ್ಯಾರಿಕೇಡ್ ಹಾಕಿ ತಪಾಸಣೆ ಮಾಡಿ ನಿಗಾ ವಹಿಸಲಾಗುತ್ತಿದೆ.

ಕೇರಳ ಹಾಗೂ ತಮಿಳುನಾಡು ಗಡಿಯನ್ನು ಗುಂಡ್ಲುಪೇಟೆ ತಾಲೂಕು ಹಂಚಿಕೊಂಡಿದ್ದು, ಈ ಹಿನ್ನೆಲೆ ರಾಜ್ಯಕ್ಕೆ ಬರುವ ಹಾಗೂ ಹೋಗುವ ಪ್ರತಿಯೊಂದು ವಾಹನಗಳ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ ಇದಲ್ಲದೇ ಪ್ರವಾಸಿ ತಾಣಗಳು, ಧಾರ್ಮಿಕ ಕ್ಷೇತ್ರಗಳು ಸೇರಿದಂತೆ ಜನಸಂದಣಿ ಪ್ರದೇಶಗಳಲ್ಲೂ ಪೊಲೀಸರು ನಿಗಾ ವಹಿಸಿದ್ದಾರೆ.

ಹಸಗೂಲಿ ಗ್ರಾಮದಲ್ಲಿ ವಿಜೃಂಭಣೆಯಿಂದ ನಡೆದ ಅಲ್ಲಹಳ್ಳಿ ಪಾರ್ವತಾಂಬೆ ಜಾತ್ರೆ



ತಾಲೂಕಿನ ಹಸಗೂಲಿ ಗ್ರಾಮದ ಅಲ್ಲಹಳ್ಳಿ ಮಾರಮ್ಮನವರ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಗುಂಡ್ಲುಪೇಟೆ, ನ.11 (ಸೋಮ್.ಜಿ) ತಾಲೂಕಿನ ಹಸಗೂಲಿ ಗ್ರಾಮದಲ್ಲಿ ಶ್ರೀ ಅಲ್ಲಹಳ್ಳಿ ಪಾರ್ವತಾಂಬೆ ಜಾತ್ರೆ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು.

ಪ್ರತಿ ವರ್ಷವೂ ಕಾರ್ತೀಕ ಮಾಸದ ಮೂರನೇ ಸೋಮವಾರ ನಡೆಯುತ್ತಾ ಬಂದಿರುವ ಶ್ರೀ ಅಲ್ಲಹಳ್ಳಿ ಪಾರ್ವತಾಂಬೆ ಜಾತ್ರೆ ಮೂರು ದಿನಗಳ ವರೆಗೆ ಅದ್ದೂರಿಯಾಗಿ ನಡೆಯುತ್ತಿದ್ದು, ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸೇವಂತಿಗೆ ಹೂವಿನಿಂದ ಅಲಂಕರಿಸಿದ ರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆಯ ಅಂಗವಾಗಿ ಕಳೆದ ವರ್ಷ ಜೀರ್ಣೋದ್ದಾರಗೊಂಡಿದ್ದ ಪಾರ್ವತಿ ಮಾತೆಯ ದೇವಾಲಯವನ್ನು ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿ ಗ್ರಾಮಸ್ಥರು ಬೇರೆ ಬೇರೆ ಊರುಗಳಲ್ಲಿರುವ ತಮ್ಮ ಬಂಧು ಬಾಂಧವರನ್ನು ಜಾತ್ರೆಗೆ ಆಹ್ವಾನಿಸಿ ಗ್ರಾಮದೇವತೆಯ ಹಬ್ಬವನ್ನು ಸಡಗರ ಸಂಭ್ರಮಗಳಿಂದ ಆಚರಿಸಿದರು.

ತಾಲೂಕು ಅಲ್ಲದೆ ನಾಡಿನ ವಿವಿಧ ಭಾಗದ ಮತ್ತು ನೆರೆಯ ನಂಜನಗೂಡು, ಹೆಗ್ಗಡದೇವನಕೋಟೆ, ಚಾಮರಾಜನಗರ ಮುಂತಾದ ತಾಲೂಕುಗಳ ಸಾವಿರಾರು ಭಕ್ತರು ತಮ್ಮ ಎತ್ತಿನ ಗಾಡಿಗಳು ಹಾಗೂ ರಾಸುಗಳೊಂದಿಗೆ ಜಾತ್ರೆಗೆ ಆಗಮಿಸಿದ್ದರಿಂದ ಗ್ರಾಮದಲ್ಲಿ ಎಲ್ಲಿಯೂ ಕಾಲಿಡಲು ಸಾಧ್ಯವಾಗದಂತಾಗಿತ್ತು. ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಜಿಲ್ಲೆಯ ನಾನಾ ಠಾಣೆಗಳ 100 ಸಿಬ್ಬಂದಿ ನಿಯೋಜಿಸಿ ಬೇಗೂರು ಪೊಲೀಸರು ಮುನ್ನೆಚ್ಚರಿಕೆ ಕೈಗೊಂಡಿದ್ದರು.

ಮೈಸೂರು ಮಿತ್ರ ಬುಧವಾರ 12 ನವೆಂಬರ್ 2025

ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ, ಫಲಿತಾಂಶ ಸುಧಾರಣೆಗೆ ವಿದ್ಯಾರ್ಥಿಗಳು, ಪೋಷಕರ ಸಭೆ

ಮೈಸೂರು, ನ.11(ಎಸ್‌ಪಿಎನ್)– ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವುದು, ಸರ್ಕಾರಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ನ.14ರಂದು ಎಸ್‌ಡಿಎಂಸಿ ಸದಸ್ಯರ ನೇತೃತ್ವದಲ್ಲಿ ವಿದ್ಯಾರ್ಥಿಗಳು, ಪೋಷಕರ ಸಭೆ ನಡೆಸುವಂತೆ ಶಾಲಾ ಶಿಕ್ಷಣ ಇಲಾಖೆ, ರಾಜ್ಯದ ಜಿಲ್ಲಾ ಹಂತದ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ.

> 2025–26ನೇ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಂದ ಒಟ್ಟು 38 ಸಾವಿರ ವಿದ್ಯಾರ್ಥಿಗಳು(ರಾಜ್ಯ ಪಠ್ಯಕ್ರಮ) ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿದ್ದು, ಪರೀಕ್ಷೆಗೆ ಕೇವಲ 12 ವಾರವಷ್ಟೇ ಬಾಕಿ ಇರುವುದರಿಂದ ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಶೇಕಡವಾರು ಫಲಿತಾಂಶ ಹೆಚ್ಚಿಸುವ ನಿಟ್ಟಿನಲ್ಲಿ ಪೋಷಕರ ಪಾತ್ರದ ಕುರಿತು ಅರಿವು ಮೂಡಿಸಲಾಗುವುದು.
> – ಡಿ.ಉದಯ್‌ಕುಮಾರ್
> ಡಿಡಿಪಿಐ(ಆಡಳಿತ), ಮೈಸೂರು


ಈ ಸಂಬಂಧ ರಾಜ್ಯದ 41,506 ಪ್ರಾಥಮಿಕ ಶಾಲೆ ಹಾಗೂ 5,360 ಪ್ರೌಢಶಾಲೆ ಸೇರಿದಂತೆ ಒಟ್ಟು 46,866 ಶಾಲೆಗಳಲ್ಲಿ ನ.14ರಂದು ಪೋಷಕರ ಸಭೆ ಸಂಯೋಜಿಸಲು ಹಾಗೂ ದಾಖಲೀಕರಣಕ್ಕಾಗಿ ಪ್ರತಿ ಶಾಲೆಗೆ ರೂ.1,500 ರಂತೆ ಒಟ್ಟು 702.99 ಲಕ್ಷ ಅನುದಾನ ಬಿಡುಗಡೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರ ಶಾಲೆಗಳಿಗೆ ಹಲವಾರು ಸವಲತ್ತುಗಳನ್ನು ನೀಡಿದರೂ ಮಕ್ಕಳು ಪ್ರವೇಶಾತಿ ಪಡೆಯುವುದು ಕಡಿಮೆಯಾಗಿರುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ನ.14ರಂದು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರ ಸಹಭಾಗಿತ್ವದಲ್ಲಿ ಈ ಮೆಗಾ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಡಿಡಿಪಿಐ ಡಿ.ಉದಯ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ 233 ಪ್ರೌಢಶಾಲೆ, 1891 ಪ್ರಾಥಮಿಕ ಶಾಲೆಗಳಿದ್ದು, 1–10ನೇ ತರಗತಿಯವರೆಗೆ ಒಟ್ಟು 1,86,000ಕ್ಕೂ ಅಧಿಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಪೋಷಕರ ಸಭೆಯಲ್ಲಿ ಸರ್ಕಾರ ನೀಡುತ್ತಿರುವ ಎಲ್ಲಾ ಸವಲತ್ತುಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ವಿಚಾರದಲ್ಲಿ ಪೋಷಕರ ಪಾತ್ರ, ಹೆಣ್ಣು ಮಕ್ಕಳ ಸುರಕ್ಷತೆ ವಿಚಾರದಲ್ಲಿ ಪೋಷಕರ ಪಾತ್ರ ಕುರಿತು ಅರಿವು ಮೂಡಿಸಲಾಗುವುದು. ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ ಈ ಕ್ರಮವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು,

ಈಗಾಗಲೇ ತಾಲೂಕು ಬಿಇಓಗಳಿಗೆ ನ.14ರ ಪೋಷಕರ ಮೆಗಾ ಸಭೆಯಲ್ಲಿ ಯಾವ ಯಾವ ವಿಷಯದ ಬಗ್ಗೆ ಪೋಷಕರಿಗೆ ಅರಿವು ಮೂಡಿಸಬೇಕು ಎಂಬುದರ ಕುರಿತು ವೇಳಾಪಟ್ಟಿ ನೀಡಿದ್ದು, ಅದರಂತೆ ಸಭೆಗಳನ್ನು ಆಯೋಜಿಸುವಂತೆ ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕ್ರೀಡಾ ಸ್ಪರ್ಧೆ ಉದ್ಘಾಟನೆ



ಮೈಸೂರಿನ ಲಲಿತಾದ್ರಿಪುರದಲ್ಲಿರುವ ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ನಡೆದ ಸಿಲಿಕಾತನ್–2025 ಜೂನಿಯರ್ ಅಥ್ಲೆಟ್ಸ್ ಮೀಟ್ ಕ್ರೀಡಾ ಸ್ಪರ್ಧೆಗಳನ್ನು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ. ಈ.ಸಿ.ನಿಂಗರಾಜ್‌ಗೌಡ ಉದ್ಘಾಟಿಸಿದರು. ಸಂಸ್ಥೆಯ ಕಾರ್ಯದರ್ಶಿ ಎಲ್.ರವಿ, ಪ್ರಾಂಶುಪಾಲರಾದ ಡಾ. ದೀಪ್ತಿ ಚತುರ್ವೇದಿ, ಬಿ.ಜಯಶ್ರೀ, ಶ್ರುತಿ ಇತರರು ಉಪಸ್ಥಿತರಿದ್ದರು.

ಮಾಲೂರು ವಿಧಾನಸಭಾ ಕ್ಷೇತ್ರದ ಮರು ಮತ ಎಣಿಕೆ ಬಳಿಕ ನಗುತ್ತಾ ಹೊರಬಂದ ನಂಜೇಗೌಡ

ಕೋಲಾರ: ರಾಜಕೀಯ ವಲಯದಲ್ಲಿ ಭಾರಿ ಕುತೂಹಲ ಮೂಡಿಸಿದ್ದ ಮಾಲೂರು ವಿಧಾನಸಭಾ ಕ್ಷೇತ್ರದ ಮರು ಮತ ಎಣಿಕೆ ಪ್ರಕ್ರಿಯೆ ಭಾರೀ ಬಿಗಿ ಬಂದೋಬಸ್ತ್‌ನಲ್ಲಿ ಮಂಗಳವಾರ ಯಶಸ್ವಿಯಾಗಿ ನಡೆದಿದ್ದು, ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎಂಬುದು ಗೊತ್ತಾಗಿದೆ.

ರಾತ್ರಿ 8 ಗಂಟೆ ಸುಮಾರಿಗೆ ಎಣಿಕೆ ಕೇಂದ್ರದಿಂದ ಹೊರಬಂದ ಶಾಸಕ ಕೆ.ವೈ.ನಂಜೇಗೌಡ, 'ಮರು ಮತ ಎಣಿಕೆಯಲ್ಲಿ ಯಾವುದೇ ವ್ಯತ್ಯಾಸ ಕಂಡಿಲ್ಲ. ನಾವು ಅಂಬೇಡ್ಕರ್ ಸಂವಿಧಾನದಲ್ಲಿ ವಿಶ್ವಾಸವಿಟ್ಟಿದ್ದು, ನ್ಯಾಯ ದೊರಕಿದೆ' ಎಂದು ಖುಷಿ ವ್ಯಕ್ತಪಡಿಸಿದರು.

ಫಲಿತಾಂಶದ ಬಗ್ಗೆ ತಕರಾರರು ಅರ್ಜಿ ಸಲ್ಲಿಸಿದ್ದ ಪರಾಜಿತ ಅಭ್ಯರ್ಥಿ ಹಾಗೂ ಬಿಜೆಪಿ ಮುಖಂಡ ಕೆ.ಎಸ್.ಮಂಜುನಾಥಗೌಡ ಮರು ಮತ ಎಣಿಕೆ ಬಗ್ಗೆ ಆಕ್ಷೇಪ ಹಾಗೂ ಅಸಮಾಧಾನ ವ್ಯಕ್ತಪಡಿಸಿದ್ದರು. ಎಲ್ಲಾ ವಿಚಾರವನ್ನು ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿಕೊಡುವುದಾಗಿ ಹೇಳಿದರು. ಅಲ್ಲದೇ, ಗೆದ್ದಿರುವ ಶಾಸಕರಿಗೆ ಅಭಿನಂದನೆ ಸಲ್ಲಿಸೋಣ ಎಂದರು.

ಈ ಮೂಲಕ ಅವರ ಶಾಸಕ ಸ್ಥಾನ ಅಬಾಧಿತವಾಗಿದೆ ಎಂಬುದು ತಿಳಿದು ಬಂದಿದೆ. 'ಮರು ಮತ ಎಣಿಕೆಯಲ್ಲೂ ನಂಜೇಗೌಡರು ಗೆದ್ದಿದ್ದಾರೆ' ಎಂದು ಕಾಂಗ್ರೆಸ್ ಪಕ್ಷದ ಕೆಲ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡು ಸಂಭ್ರಮಿಸಿದರು.

ಮರು ಮತ ಎಣಿಕೆ ನಡೆಸಿ ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಈಗಾಗಲೇ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ. ಹೀಗಾಗಿ, ಫಲಿತಾಂಶವನ್ನು ಅಧಿಕೃತವಾಗಿ ಪ್ರಕಟಿಸುವಂತಿಲ್ಲ.

ಸಾಧಕ ರೈತರಿಗೆ ಸನ್ಮಾನ



ಕಬ್ಬು ಬೆಳೆ ಹೋರಾಟಗಾರರ ಹಿತರಕ್ಷಣಾ ಸಮಿತಿ ವತಿಯಿಂದ ರೈತರನ್ನು ಸನ್ಮಾನಿಸಲಾಯಿತು.

ಮೈಸೂರು, ನ.11(ಎಂಕೆ)– ಮೈಸೂರಿನ ಜೆ.ಪಿ.ನಗರದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಉದ್ಯಾನವನದಲ್ಲಿ ಕಬ್ಬು ಬೆಳೆ ಹೋರಾಟಗಾರರ ಹಿತರಕ್ಷಣಾ ಸಮಿತಿ ವತಿಯಿಂದ ಅತ್ಯುತ್ತಮ ರೈತರಾದ ಪ್ರೇಮಮ್ಮ, ಪಾರ್ವತಪ್ಪ, ಯೋಗೇಶ್, ನಂಜಪ್ಪ, ಶೈಲಜಾ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ದೇಶದ ಬೆನ್ನೆಲುಬಾದ ರೈತರ ಋಣ ತೀರಿಸುವುದು ದೇಶದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ರೈತರ ಹೃದಯ ವೈಶಾಲ್ಯತೆ, ಅವರ ಪರಿಶ್ರಮ ಸದಾ ಶ್ಲಾಘನೀಯ. ಆಗಾಗಿ ರೈತರನ್ನು ಗೌರವದಿಂದ ಕಾಣಬೇಕು. ರೈತನ ಮುಖದಲ್ಲಿ ಸಂತೋಷ ನೆಮ್ಮದಿ ಕಂಡರೆ ಮಾತ್ರ ದೇಶ ಸಮೃದ್ಧವಾಗಲು ಸಾಧ್ಯ ಎಂದರು.

ಕಾಲಕಾಲಕ್ಕೆ ಮಳೆಯಾಗದಿರುವುದು, ರಾಸಾಯನಿಕ ಗೊಬ್ಬರ ಪೂರೈಕೆ ಸಮಸ್ಯೆ, ಕಾಡು ಪ್ರಾಣಿ ಮತ್ತು ಪಕ್ಷಿಗಳ ಹಾವಳಿ, ವಿದ್ಯುತ್ ಸಮಸ್ಯೆ ಸೇರಿದಂತೆ ಹತ್ತಾರು ಸಮಸ್ಯೆಗಳ ನಡುವೆಯೂ ರೈತರು ಬೆಳೆ ಬೆಳೆದು ನೀಡುತ್ತಿದ್ದಾರೆ. ಒಂದರ್ಥದಲ್ಲಿ ರೈತರ ಬದುಕು ಹೋರಾಟದ ಬದುಕಾಗಿದೆ. ನೋವುಗಳನ್ನು ನುಂಗಿ ದೇಶದ ಹಸಿವನ್ನು ನೀಗಿಸುವ ಪುಣ್ಯದ ಕೆಲಸವನ್ನು ರೈತರು ಮಾಡುತ್ತಿದ್ದಾರೆ. ಇಂತಹ ರೈತ ಮಹನೀಯರನ್ನು ಸನ್ಮಾನಿಸುವುದು ವಿಶೇಷವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಬ್ಬು ಬೆಳೆ ಹೋರಾಟಗಾರರ ಹಿತರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಬ್ಯಾತಹಳ್ಳಿ ಮಾದಪ್ಪ, ರೈತ ಮುಖಂಡರಾದ ನಗರ್ಲೆ ವಸಂತಮ್ಮ, ಚಿಕ್ಕಕಾನ್ಯ ಅನ್ನಪೂರ್ಣಮ್ಮ, ವಾಟಾಳ್‌ಪುರ ಮೂರ್ತಿ, ಜಿ.ಮರಳ್ಳಿ ಶಿವಕುಮಾರ್, ಬದನಕುಪ್ಪೆ ಸಿದ್ದಲಿಂಗಸ್ವಾಮಿ ಮತ್ತಿತರರಿದ್ದರು.

ದಕ್ಷಿಣ ವಲಯದ 7ನೇ ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟ–2025ರ ಸಮಾರೋಪ ; ಅಪರಾಧ ಪ್ರಕರಣಗಳಲ್ಲಿ

ಶಿಕ್ಷೆ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಪೊಲೀಸರ ಕರ್ತವ್ಯ ದಕ್ಷತೆ ಸುಧಾರಿಸಬೇಕು

● ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅಭಿಮತ ● ಮೈಸೂರು ನಗರ ಪೊಲೀಸ್‌ಗೆ ಸಮಗ್ರ ಪ್ರಶಸ್ತಿ ● 'ಕೃಷ್ಣ' ಕರ್ತವ್ಯಕೂಟದ ಅತ್ಯುತ್ತಮ ಶ್ವಾನ

ಮೈಸೂರು,ನ.11(ಪಿಎಂ)– ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಇನ್ನಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕಿದ್ದು, ಹೀಗಾಗಿ ಇಲಾಖೆ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ ಎಂದು ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕ ಡಾ.ಎಂ.ಬಿ.ಬೋರಲಿಂಗಯ್ಯ ತಿಳಿಸಿದರು.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯ (ಕೆಪಿಎ) ಹೊಸ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪೊಲೀಸ್ ಇಲಾಖೆಯ ದಕ್ಷಿಣ ವಲಯದ 7ನೇ ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟ–2025ರ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನ್ಯಾಯ ವಿತರಣಾ ವ್ಯವಸ್ಥೆ ಸಂಬಂಧ ಅಪರಾಧ ಪ್ರಕರಣಗಳು ತಾರ್ಕಿಕ ಅಂತ್ಯಕ್ಕೆ ತಲುಪಬೇಕಾದರೆ ಅವುಗಳಲ್ಲಿ ಶಿಕ್ಷೆಯ ಪ್ರಮಾಣ ಹೆಚ್ಚಳವಾಗಬೇಕು. ಆದರೆ ಇದರಲ್ಲಿ ನಿರೀಕ್ಷಿತ ಸಾಧನೆ ಸಾಧ್ಯವಾಗುತ್ತಿಲ್ಲ. ನಿನ್ನೆ ಮುಖ್ಯಮಂತ್ರಿಗಳು ಮೈಸೂರು ಜಿಲ್ಲೆಯ ಕೆಡಿಪಿ ಸಭೆ ನಡೆಸಿ ವಿಶೇಷವಾಗಿ ನಮ್ಮ ಇಲಾಖೆ ಪ್ರಗತಿ ಪರಿಶೀಲನೆ ವೇಳೆ ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಕಡಿಮೆ ಆಗಿರುವುದನ್ನು ಗಮನಿಸಿದ್ದಾರೆ ಎಂದು ತಿಳಿಸಿದರು.

ಪ್ರತಿವರ್ಷ ಈ ಕರ್ತವ್ಯಕೂಟ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಇದರಲ್ಲಿ ಸಾಕಷ್ಟು ಅಧಿಕಾರಿ, ಸಿಬ್ಬಂದಿ ಉತ್ತಮ ಪ್ರದರ್ಶನ ಸಹ ನೀಡುತ್ತಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟಕ್ಕೂ ಆಯ್ಕೆಯಾಗುತ್ತಿದ್ದಾರೆ. ಇಷ್ಟೆಲ್ಲಾ ವೃತ್ತಿ ಕೌಶಲ್ಯ ಇದಾಗ್ಯೂ ವಾಸ್ತವ ನೆಲೆಯಲ್ಲಿ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವಲ್ಲಿ ನಿರೀಕ್ಷಿತ ಫಲ ದೊರೆಯುತ್ತಿಲ್ಲ. ಈಗಾಗಲೇ ನಮ್ಮಲ್ಲಿ ಶಿಕ್ಷೆಯ ಪ್ರಮಾಣ ತೀರಾ ಕಡಿಮೆ ಇದೆ. ಹಾಗಾಗಿ ಈ ಕರ್ತವ್ಯಕೂಟ ಕೇವಲ ನೆಪಮಾತ್ರಕ್ಕೆ ಆಗದೇ ಅಪರಾಧ ಪ್ರಕರಣಗಳನ್ನು ಭೇದಿಸುವಲ್ಲಿ ಇದು ಪರಿಣಾಮಕಾರಿಯಾಗಬೇಕು. ತನಿಖಾ ಹಂತದಲ್ಲಿ ಹೆಚ್ಚಿನ ಕಾಳಜಿ ವಹಿಸಿ ದಕ್ಷವಾಗಿ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.



ಮೈಸೂರು ನಗರ ಪೊಲೀಸ್ ತಂಡ ಗಣ್ಯರಿಂದ ಸಮಗ್ರ ಪ್ರಶಸ್ತಿಯ ಟ್ರೋಫಿ ಸ್ವೀಕರಿಸಿತು. ಕರ್ತವ್ಯಕೂಟದ ಅತ್ಯುತ್ತಮ ಶ್ವಾನವಾಗಿ ಹೊರಹೊಮ್ಮಿದ ಕೃಷ್ಣ ಶ್ವಾನ ಸಹ ಚಿತ್ರದಲ್ಲಿದೆ.

ಇದಕ್ಕೂ ಮುನ್ನ ಕರ್ತವ್ಯಕೂಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು.

ಮೈಸೂರು ನಗರ ಪೊಲೀಸ್‌ಗೆ ಸಮಗ್ರ ಪ್ರಶಸ್ತಿ: ಎರಡು ದಿನಗಳ ಕಾಲ ಕೆಪಿಎನಲ್ಲಿ ನಡೆದ ಈ ಕರ್ತವ್ಯ ಕೂಟದಲ್ಲಿ (ನ.10 ಮತ್ತು 11) 5 ಚಿನ್ನ, 5 ಬೆಳ್ಳಿ ಹಾಗೂ 2 ಕಂಚು ಸೇರಿದಂತೆ ಒಟ್ಟು 12 ಪದಕಗಳನ್ನು ಗಳಿಸಿದ ಮೈಸೂರು ನಗರ ಪೊಲೀಸ್ ಘಟಕ ಅತ್ಯುತ್ತಮ ತಂಡವಾಗಿ ಹೊರಹೊಮ್ಮುವ ಮೂಲಕ ಸಮಗ್ರ ಪ್ರಶಸ್ತಿಗೆ ಭಾಜನವಾಗಿ ಟ್ರೋಫಿಯನ್ನು ಸ್ವೀಕರಿಸಿತು. ಚಾಮರಾಜನಗರ ಪೊಲೀಸ್ ತಂಡ ದ್ವಿತೀಯ ಸ್ಥಾನ ಪಡೆದರೆ, ಕೊಡಗು ಜಿಲ್ಲಾ ಪೊಲೀಸ್ ತಂಡ ತೃತೀಯ ಸ್ಥಾನ ಪಡೆಯಿತು.

'ಕೃಷ್ಣ' ಕರ್ತವ್ಯಕೂಟದ ಅತ್ಯುತ್ತಮ ಶ್ವಾನ: ಅಂತೆಯೇ ಕರ್ತವ್ಯಕೂಟದ ಅತ್ಯುತ್ತಮ ಶ್ವಾನವಾಗಿ ಮೈಸೂರು ನಗರ ಸಿಎಆರ್ ಘಟಕದ ಕೃಷ್ಣ (ಸ್ಫೋಟಕ ಪತ್ತೆ) ಹೊರಹೊಮ್ಮಿತು. ಕೃಷ್ಣ ಶ್ವಾನದ ಡಾಗ್ ಹ್ಯಾಂಡ್ಲರ್ ನಾಗೇಂದ್ರಚಾರಿ ಅವರು ಕೃಷ್ಣ ಶ್ವಾನದೊಂದಿಗೆ ವೇದಿಕೆಗೆ ಆಗಮಿಸಿ ಅತಿಥಿಗಳಿಂದ ಬಹುಮಾನ ಸ್ವೀಕರಿಸಿದರು.

ಮೈಸೂರು ನಗರ ಪೊಲೀಸರ ವೈಯಕ್ತಿಕ ಬಹುಮಾನಗಳ ವಿವರ: ಮೈಸೂರು ನಗರ ವಿವಿ ಸಂಚಾರ ಠಾಣೆಯ ಪಿಎಸ್‌ಐ ಎಂ.ಎಲ್.ಸಿದ್ದೇಶ್ ಅವರು 3 ಚಿನ್ನ, 1 ಬೆಳ್ಳಿ ಹಾಗೂ 1 ಕಂಚು ಪದಕಗಳನ್ನು ಗಳಿಸಿದರು. ಅದೇ ರೀತಿ ಮೈಸೂರು ನಗರ ಸಿಎಆರ್ ಘಟಕದ ಆರ್‌ಎಸ್‌ಐ ಡಾ.ಸಂತೋಷ್‌ಕುಮಾರ್ ಕುಂಬಾರ್ ಅವರು 1 ಬೆಳ್ಳಿ, ಲಕ್ಷ್ಮೀಪುರಂ ಠಾಣೆಯ ಸಿಪಿಸಿ ಹೇಮಂತ್ ಕುಮಾರ್ ಅವರು 1 ಕಂಚು, 1 ಬೆಳ್ಳಿ, ಹನುಮೇಶ್ ಅವರು 1 ಚಿನ್ನದ ಪದಕಗಳನ್ನು ಗಳಿಸಿದರು.

ಎಕ್ಸ್‌ಪ್ಲೋಸಿವ್ ಡಾಗ್ಸ್ ಟ್ರೇಡ್ ಟೆಸ್ಟ್‌ನಲ್ಲಿ ಸಿಎಆರ್‌ನ ಕೃಷ್ಣ ಶ್ವಾನ ಹಾಗೂ ಅದರ ಹ್ಯಾಂಡ್ಲರ್ ನಾಗೇಂದ್ರಚಾರಿ ಅವರು 1 ಚಿನ್ನ, ಸಿಎಆರ್‌ನ ಕುಷಾ ಶ್ವಾನ ಹಾಗೂ ಅದರ ಹ್ಯಾಂಡ್ಲರ್ ಬಸಂತ್ ಕುಮಾರ್ ಅವರು 1 ಬೆಳ್ಳಿ, ಸಿಎಆರ್‌ನ ಅರ್ಜುನ ಶ್ವಾನ ಹಾಗೂ ಅದರ ಹ್ಯಾಂಡ್ಲರ್ ಪುರುಷೋತ್ತಮ್ ಅವರು 1 ಬೆಳ್ಳಿ ಪದಕಗಳನ್ನು ಪಡೆದರು. ಪ್ರಶಸ್ತಿ ಪಡೆದ ಎಲ್ಲಾ ಸಿಬ್ಬಂದಿ, ಶ್ವಾನ ದಳದ ಸಿಬ್ಬಂದಿ ಹಾಗೂ ತರಬೇತಿ ನೀಡಿದ ತರಬೇತಿದಾರರಿಗೂ ಮೈಸೂರು ನಗರದ ಎಲ್ಲಾ ಪೊಲೀಸ್ ಸಿಬ್ಬಂದಿ ಪರವಾಗಿ ನಗರ ಪೊಲೀಸ್ ಆಯುಕ್ತಾರ ಸೀಮಾ ಲಾಟ್ಕರ್ ಅಭಿನಂದನೆ ಸಲ್ಲಿಸಿದರು.

ಅಂತೆಯೇ ದಕ್ಷಿಣ ವಲಯದ ವಿವಿಧ ಜಿಲ್ಲಾ ಪೊಲೀಸ್ ಹಾಗೂ ವಿವಿಧ ವಿಭಾಗಗಳ ಅಧಿಕಾರಿ ಮತ್ತು ಸಿಬ್ಬಂದಿ ಸಹ ವಿವಿಧ ಸ್ಪರ್ಧೆಗಳಲ್ಲಿ ಪದಕಗಳನ್ನು ಗಳಿಸಿದರು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ, ಕೆಪಿಎ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ, ಮೈಸೂರು ಆರ್‌ಎಫ್‌ಎಸ್‌ಎಲ್‌ನ ಉಪನಿರ್ದೇಶಕ ಚಂದ್ರಶೇಖರ್, ಕರ್ತವ್ಯಕೂಟದ ನೋಡಲ್ ಅಧಿಕಾರಿ ಹಾಗೂ ಡಿವೈಎಸ್‌ಪಿ ಸತ್ಯನಾರಾಯಣಸಿಂಗ್, ಪಿಎಸ್‌ಐ ಸುನಿಲ್ ಮಿರ್ಲೆ ಮತ್ತಿತರರು ಹಾಜರಿದ್ದರು.

ಇಂದು 'ಬರೆಯುವೆ ನಿನಗಾಗಿ' ಗೀತ ಗಾಯನ, ಅಭಿನಂದನಾ ಸಮಾರಂಭ

ಮೈಸೂರು,ನ.11(ಜಿಎ)–ಮೈಸೂರಿನ ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ನ.12ರಂದು ಸಂಜೆ 5 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಟ್ರಸ್ಟ್‌ನ 11ನೇ ವಾರ್ಷಿಕೋತ್ಸವ ಮತ್ತು 'ಬರೆಯುವೆ ನಿನಗಾಗಿ' ಶೀರ್ಷಿಕೆಯ ಗೀತ ಗಾಯನ ಹಾಗೂ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಮುಖ್ಯಸ್ಥ ರೇವಣ್ಣ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಉದ್ಘಾಟಿಸಲಿದ್ದಾರೆ. ಈ ವೇಳೆ ವಿಧಾನಪರಿಷತ್ ಸದಸ್ಯ ಕೆ.ಶಿವ ಕುಮಾರ್, ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷ ಹೆಚ್.ಡಿ. ಗಣೇಶ್ ಮತ್ತು ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ.ಭೈರಿ ಅವರನ್ನು ಅಭಿನಂದಿಸಲಾಗುವುದು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಸಮಾಜ ಸೇವಕ ರಘುರಾವ್ ವಾಜಪೇಯಿ, ಲೇಖಕ ಸಿ.ಹರ ಕುಮಾರ್, ವಕೀಲ ಎನ್.ಜೆ. ಮಧ್ವರಾಜ್, ಅಂಕಣಕಾರ ರಮೇಶ್ ಗುಬ್ಬಿಗೂಡು, ರಾಜ್ಯ ಹಿಂದುಳಿದ ವರ್ಗಗಳ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸಿ.ಮಹ ದೇವು ಕೋಟೆಹುಂಡಿ, ಡಾ.ಜಿ.ರವಿ ಆಗ ಮಿಸಲಿದ್ದಾರೆ.

ಬಸ್‌ಗಳ ಮೇಲೆ 'ಶಕ್ತಿ' ಭಿತ್ತಿಪತ್ರ; ಜಿಲ್ಲಾ, ತಾಲೂಕು ಗ್ಯಾರಂಟಿ ಪದಾಧಿಕಾರಿಗಳ ಭತ್ಯೆ ಹೆಚ್ಚಳ ಭರವಸೆ

ಮೈಸೂರು, ನ.11(ಎಂಕೆ)– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಜನಜಾಗೃತಿ ಕುರಿತು ಸರ್ಕಾರಿ ಬಸ್‌ಗಳ ಮೇಲೆ ಶಕ್ತಿ ಯೋಜನೆಯ ಭಿತ್ತಿಪತ್ರ ಅಳವಡಿಕೆ ಹಾಗೂ ಜಿಲ್ಲಾ ಮತ್ತು ತಾಲೂಕು ಗ್ಯಾರಂಟಿ ಸಮಿತಿಯ ಪದಾಧಿಕಾರಿಗಳಿಗೆ ನೀಡುವ ಗೌರವ ಧನ ಹಾಗೂ ಭತ್ಯೆ ಹೆಚ್ಚಳ ಕುರಿತು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ನೀಡಿದ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ.



ಶಕ್ತಿ ಯೋಜನೆಯಡಿ ಮಹಿಳೆಯರು 595 ಕೋಟಿ ಉಚಿತ ಬಸ್ ಪ್ರಯಾಣ ಪಡೆದುಕೊಂಡಿದ್ದು, ಇದರ ಮೊತ್ತ 15,265 ಕೋಟಿ ರೂ.ಆಗಿದೆ. ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಆಗಿರುವ ಈ ಸಾಧನೆ ಕುರಿತು ವ್ಯಾಪಕ ಪ್ರಚಾರ ಮಾಡುವಂತೆ ಸಾರಿಗೆ ಬಸ್‌ಗಳ ಮೇಲೆ ಭಿತ್ತಿಪತ್ರ ಅಳವಡಿಸಬೇಕು. ಹಾಗೆಯೇ ಜಿಲ್ಲಾ ಮತ್ತು ತಾಲೂಕು ಗ್ಯಾರಂಟಿ ಸಮಿತಿಯ ಪದಾಧಿಕಾರಿಗಳಿಗೆ ನೀಡುವ ಗೌರವಧನ ಹಾಗೂ ಭತ್ಯೆ ಹೆಚ್ಚಳ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಮಾಡಿದ್ದರು.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಿಎಂ ಮತ್ತು ಡಿಸಿಎಂ, ಸಾರಿಗೆ ಸಂಸ್ಥೆ ಬಸ್‌ಗಳ ಮೇಲೆ ಗ್ಯಾರಂಟಿ ಯೋಜನೆಗಳ ಭಿತ್ತಿ ಪತ್ರ ಅಳವಡಿಸುವುದು. ಭತ್ಯೆ ಹೆಚ್ಚಳ ಹಾಗೂ ಜಿಲ್ಲಾ ತಾಲೂಕು ಸಮಿತಿಯ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರು ವಿಧಾನಸೌಧ, ವಿಕಾಸಸೌಧ ಪ್ರವೇಶಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ ಎಂದು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕಲಿ ಕಂಪನಿಗೆ ಹೂಡಿಕೆ ಮಾಡಿ 21 ಲಕ್ಷ ಕಳೆದುಕೊಂಡ ಸಾಫ್ಟ್‌ವೇರ್ ಇಂಜಿನಿಯರ್

ಮೈಸೂರು, ನ.11– ವಂಚಕರು ವಾಟ್ಸಾಪ್ ಗ್ರೂಪ್‌ನಲ್ಲಿ ಸ್ಟಾಕ್ ಮಾರ್ಕೆಟ್ ಟ್ರೇಡಿಂಗ್ ಬಗ್ಗೆ ಹಂಚಿಕೊಳ್ಳುತ್ತಿದ್ದ ಸುಳ್ಳು ಮಾಹಿತಿಯನ್ನು ನಂಬಿ, ಮೈಸೂರಿನ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರು ಲಕ್ಷಾಂತರ ರೂ. ಕಳೆದುಕೊಂಡಿದ್ದಾರೆ.

ಮೈಸೂರಿನ ಹೆಬ್ಬಾಳ್‌ನಲ್ಲಿ ನೆಲೆಸಿರುವ 44 ವರ್ಷದ ಸಾಫ್ಟ್‌ವೇರ್ ಇಂಜಿನಿಯರ್, ಹಂತ ಹಂತವಾಗಿ ಸುಮಾರು 21 ಲಕ್ಷ ಹಣವನ್ನು ನಕಲಿ ಕಂಪನಿಗೆ ಹೂಡಿಕೆ ಮಾಡಿ, ಮೋಸ ಹೋಗಿದ್ದಾರೆ.

ಇವರ ಮೊಬೈಲ್ ಸಂಖ್ಯೆಯನ್ನು ಕಳೆದ ಸೆಪ್ಟೆಂಬರ್ 25ರಂದು ಅಪರಿಚಿತರು ಯಾವುದೋ ವಾಟ್ಸಾಪ್ ಗ್ರೂಪ್‌ಗೆ ಸೇರ್ಪಡೆ ಮಾಡಿದ್ದಾರೆ. ಆ ಗ್ರೂಪ್‌ನಲ್ಲಿ ಸ್ಟಾಕ್ ಮಾರ್ಕೆಟ್ ಟ್ರೇಡಿಂಗ್ ಬಗ್ಗೆ ಮಾಹಿತಿ ಹಂಚಿಕೆಯಾಗುತ್ತಿತ್ತು. ಗ್ರೂಪ್‌ನಲ್ಲಿದ್ದ ಹಲವು ಸದಸ್ಯರು, ನನಗೆ ಇಷ್ಟು ಲಾಭ ಬಂದಿದೆ ಎಂದು ವಂಚನೆ ಗೆಂದೇ ಸೃಷ್ಟಿಸಿದ ಸ್ಕ್ರೀನ್‌ಶಾಟ್ ಹಂಚಿಕೊಂಡಿದ್ದಾರೆ. ಇದರಿಂದ ಸಾಫ್ಟ್‌ವೇರ್ ಇಂಜಿನಿಯರ್‌ಗೂ ಹೂಡಿಕೆ ಮಾಡುವ ಆಸೆ ಬಂದಿದೆ. ಇದೇ ವೇಳೆ ವಾಟ್ಸಾಪ್ ಗ್ರೂಪ್ ಸದಸ್ಯನೊಬ್ಬ ಕರಣ್ ಸಿಂಗ್ ಹೆಸರಿನಲ್ಲಿ ಕರೆ ಮಾಡಿ, ಸ್ಟಾಕ್ ಮಾರ್ಕೆಟ್ ಟ್ರೇಡಿಂಗ್‌ನಲ್ಲಿ ಸಾಕಷ್ಟು ಲಾಭಗಳಿಸಬಹುದು ಎಂದು ಮತ್ತಷ್ಟು ಆಸೆ ಹುಟ್ಟಿಸಿ, ಕಸ್ಟಮರ್ ಕೇರ್ ಸಂಖ್ಯೆಯನ್ನೂ ನೀಡಿದ್ದಾನೆ.

ಸಾಫ್ಟ್‌ವೇರ್ ಇಂಜಿನಿಯರ್ ಆ ಸಂಖ್ಯೆಗೆ ಕರೆ ಮಾಡಿದಾಗ ಟ್ರೇಡಿಂಗ್ ಆರಂಭಿಸಲು ಆಪ್ ಡೌನ್ಲೋಡ್ ಮಾಡಿಕೊಳ್ಳಬೇಕು ಎಂದು ಒಂದು ಲಿಂಕ್ ಕಳುಹಿಸಿದ್ದಾರೆ. ಆ ಲಿಂಕ್ ಮೂಲಕ ಆಪ್ ಡೌನ್ಲೋಡ್ ಮಾಡಿಕೊಂಡು, ಸೂಚನೆಯಂತೆ 50 ಸಾವಿರ ಆರಂಭಿಕ ಹೂಡಿಕೆ ಮಾಡಿದ್ದಾರೆ. ನಂತರ ತಮ್ಮ ಹಾಗೂ ತಮ್ಮ ಪತ್ನಿಯ ಖಾತೆಯಿಂದ ಹಂತ ಹಂತವಾಗಿ 21 ಲಕ್ಷ ಹೂಡಿಕೆ ಮಾಡಿದ್ದಾರೆ. ಬಳಿಕ ಲಾಭದ ಹಣ ವಿತ್‌ಡ್ರಾ ಮಾಡಲು ಮುಂದಾದಾಗ ನೀವು ಖಾತೆ ಸಂಖ್ಯೆ ತಪ್ಪಾಗಿ ನೀಡಿರುತ್ತೀರಿ, ಮತ್ತೆ 2 ಲಕ್ಷ ಹಣ ಡೆಪಾಸಿಟ್ ಮಾಡಬೇಕೆಂಬ ಸೂಚನೆ ಬಂದಿದೆ. ಖಾತೆ ಸಂಖ್ಯೆ ಸರಿಯಾಗಿದ್ದರೂ ತಪ್ಪು ಎಂಬ ಸೂಚನೆ ಬರುತ್ತಿದ್ದರಿಂದ ತಾವು ಮೋಸ ಹೋಗಿರುವುದು ಗೊತ್ತಾಗಿ, ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಅಥ್ಲೆಟಿಕ್ಸ್‌ನಲ್ಲಿ ವಾಸವಿ ಕಾನ್ವೆಂಟ್ ವಿದ್ಯಾರ್ಥಿಗಳ ಸಾಧನೆ





ಮೈಸೂರಿನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ವತಿಯಿಂದ ಆಯೋಜಿಸಲಾಗಿದ್ದ ತಾಲೂಕು ಮಟ್ಟದ (17 ಮತ್ತು 14ರ ವಯೋಮಾನ ವಿಭಾಗದಲ್ಲಿ) ಅಂತರ ಶಾಲಾ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ವಾಸವಿ ಕಾನ್ವೆಂಟ್ ವಿದ್ಯಾರ್ಥಿಗಳು ಬಹುಮಾನ ಪಡೆದುಕೊಂಡಿದ್ದಾರೆ. ದಿಶಿಕಾ (ಡಿಸ್ಕಸ್ ಥ್ರೋ)–ಪ್ರಥಮ ಬಹುಮಾನ, ಪ್ರಜ್ವಲ್ (ಲಾಂಗ್ ಜಂಪ್)–ದ್ವಿತೀಯ ಬಹುಮಾನ, ಭಾನು ಪ್ರಿಯಾ (100ಮೀ. ರನ್ನಿಂಗ್)–ದ್ವಿತೀಯ ಬಹುಮಾನ, ಲೀಸ್ಮಾ (14ರ ವಿಭಾಗ) (ಶಾಟ್‌ಪುಟ್)–ದ್ವಿತೀಯ ಬಹುಮಾನ. ವಿಜೇತರನ್ನು ಸ್ಕೂಲ್ ಕಾರ್ಯದರ್ಶಿ ಲಯನ್ ವಿ.ಅನಂತರಾಮು, ಸಂಯೋಜಕರಾದ ಧನಲಕ್ಷ್ಮಿ ಅನಂತರಾಜು, ಮುಖ್ಯೋಪಾಧ್ಯಾಯ ಜಯರಾಮೇಗೌಡ ಮತ್ತಿತರರು ಅಭಿನಂದಿಸಿದರು.

ಐಪಿಎಲ್ ಮಿನಿ ಹರಾಜಿಗೆ ಅಬುಧಾಬಿ ಆತಿಥ್ಯ

ನವದೆಹಲಿ: 2026ನೇ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್ ಮಿನಿ ಹರಾಜು ಡಿಸೆಂಬರ್ ಮಧ್ಯದಲ್ಲಿ ಅಬುಧಾಬಿಯಲ್ಲಿ ನಡೆಯಲಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಮಂಗಳವಾರ ಪಿಟಿಐಗೆ ತಿಳಿಸಿದ್ದಾರೆ. ಇದಕ್ಕೂ ಮೊದಲು 2023 ಹಾಗೂ 2024ರ ಹರಾಜು ಕ್ರಮವಾಗಿ ದುಬೈ ಮತ್ತು ಜೆಡ್ಡಾದಲ್ಲಿ ಜರುಗಿತ್ತು. ಈ ಎರಡು ಆವೃತ್ತಿಗಳ ಬಳಿಕ ದುಬೈನಲ್ಲಿ ಸತತ ಮೂರನೇ ಬಾರಿಗೆ ವಿದೇಶದಲ್ಲಿ ಹರಾಜು ನಡೆಯುತ್ತಿದೆ ಇದು ಡಿಸೆಂಬರ್ 15 ಅಥವಾ 16 ರಂದು ನಡೆಯುವ ಸಾಧ್ಯತೆಯಿದೆ. ಪಿಎಲ್ 2026ರ ಹರಾಜಿಗೆ ಅಬುಧಾಬಿಯನ್ನು ನಿಗದಿಪಡಿಸಲಾಗಿದೆ' ಎಂದು ಬಿಸಿಸಿಐ ಅಧಿಕಾರಿ ತಿಳಿಸಿದ್ದಾರೆ.

ಸಾವಿನ ಸುತ್ತಮುತ್ತಲ ಸಮಗ್ರ ಮಾಹಿತಿ ಹಂಚಿಕೊಂಡ ಡಾ.ಯೋಗಣ್ಣ

ಮೈಸೂರು, ನ.11– ಸಾವು ಒಂದು ರೂಪಾಂತರ ಕ್ರಿಯೆ ಎಂದು ಮೈಸೂರಿನ ಸುಯೋಗ್ ಆಸ್ಪತ್ರೆ ಅಧ್ಯಕ್ಷರೂ ಆದ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯಿಸಿದರು.

ಸುಯೋಗ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸುಯೋಗ್ ಕ್ಲಿನಿಕಲ್ ಸೊಸೈಟಿ ಸಹಯೋಗದಲ್ಲಿ ಸುಯೋಗ್ ಆಸ್ಪತ್ರೆ ಸೆಮಿನಾರ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ 'ಸಾವಿನ ಸುತ್ತಮುತ್ತ' ಒಂದು ವೈಜ್ಞಾನಿಕ, ತಾತ್ವಿಕ ಮತ್ತು ಆಧ್ಯಾತ್ಮಿಕತೆಗಳ ಸಮಗ್ರ ನೋಟ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾವು ನಾಶಗೊಳ್ಳುವ ಕ್ರಿಯೆಯಲ್ಲ, ಅದೊಂದು ರೂಪಾಂತರ ಕ್ರಿಯೆ. ಹುಟ್ಟು–ಸಾವು ಪೂರ್ವ ನಿಗದಿತವಾಗಿದ್ದು, ಇದನ್ನು ಪರಿಸರ ಸ್ವಲ್ಪಮಟ್ಟಿಗೆ ಏರುಪೇರುಗೊಳಿಸಬಹುದು. ಮನುಷ್ಯನ ದೇಹವು ಮನಸ್ಸು ಹಾಗೂ ಆತ್ಮವನ್ನು ಹೊಂದಿದ್ದು, ಇವುಗಳ ಸಮನ್ವಯ ಕಾರ್ಯದಿಂದ ಜೀವಂತವಾಗಿರುತ್ತಾನೆ. ಇವುಗಳಲ್ಲಿ ಯಾವುದಾದರೊಂದು ಕಳಚಿದರೂ ಮನುಷ್ಯನ ಸಾವು ಸಂಭವಿಸುತ್ತದೆ ಎಂದರು.

ಸಾವಿನ ಅರಿವು ಮನುಷ್ಯನಲ್ಲಿ ಮೌಲ್ಯವನ್ನು ರೂಪಿಸಿ, ನೆಮ್ಮದಿಯ ಬದುಕಿಗೆ ಪ್ರೇರಣೆ ನೀಡಬಹುದು. ಸಾವಿನ ನಂತರ ದೇಹದ ಜೊತೆಗೆ ಆತ್ಮ ಮತ್ತು ಮನಸ್ಸುಗಳೂ ಪ್ರಕೃತಿಯಲ್ಲಿ ವಿಲೀನಗೊಂಡು ಮತ್ತೊಂದು ಜೀವಿಯ ಉಗಮಕ್ಕೆ ನಾಂದಿಯಾಗುತ್ತದೆ. ಆದ್ದರಿಂದ ಸಾವನ್ನು ರೂಪಾಂತರ ಕ್ರಿಯೆ ಎಂದು ಉದಾಹರಣೆ ಸಹಿತ ಪ್ರತಿಪಾದಿಸಿದರು.



ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ಮಂಗಳವಾರ ಆಯೋಜಿಸಿದ್ದ 'ಸಾವಿನ ಸುತ್ತಮುತ್ತ' ಒಂದು ವೈಜ್ಞಾನಿಕ, ತಾತ್ವಿಕ ಮತ್ತು ಆಧ್ಯಾತ್ಮಿಕತೆಗಳ ಸಮಗ್ರ ನೋಟ ಕಾರ್ಯಕ್ರಮವನ್ನು ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಕರೆಸ್ಪಾಂಡೆಂಟ್ ಸ್ವಾಮಿ ಮಹಾಮೇಧಾನಂದಜಿ ಉದ್ಘಾಟಿಸಿದರು.

ಅಂಡಾಣು ಮತ್ತು ವೀರ್ಯಾಣುಗಳ ಸಮ್ಮಿಲನದಿಂದ ದೇಹ ರಚನೆ ಆರಂಭವಾಗುತ್ತದೆ. ಅದಾಗಿ ನಾಲ್ಕನೇ ವಾರದಲ್ಲಿ ಆತ್ಮ(ಅತೀತ ಶಕ್ತಿಯ ಕಣ) ಗರ್ಭಕೋಶದ ಹೃದಯಕ್ಕೆ ನೆಡಲ್ಪಟ್ಟು, ಹೃದಯ ಬಡಿತ ಪ್ರಾರಂಭವಾಗುತ್ತದೆ. ದೇಹ ತಂದೆ–ತಾಯಿಯಿಂದ ಹಾಗೂ ಆತ್ಮ ಸೃಷ್ಟಿಕರ್ತನಿಂದ ಸ್ಥಾಪಿತವಾಗುತ್ತದೆ. ಈ ಬಗ್ಗೆ ವೈಜ್ಞಾನಿಕ ನೆಲೆಗಟ್ಟಿನಲ್ಲೂ ಸಂಶೋಧನೆ ನಡೆಯಬೇಕಿದೆ. ಜೊತೆಗೆ ಸಾವಿನ ನಂತರದ ವಿಚಾರದ ಬಗ್ಗೆಯೂ ಸಂಶೋಧನೆ ಅಗತ್ಯತೆ ಬಗ್ಗೆ ವೈದ್ಯಕೀಯ ಜಗತ್ತು ಚಿಂತಿಸಬೇಕಿದೆ ಎಂದರು.

ವಯೋ ಸಹಜ ಸಾವು, ಕೊಲೆ, ಆತ್ಮಹತ್ಯೆ, ಅವಘಡಗಳಲ್ಲಿ ಸಾವನ್ನಪ್ಪುವುದು, ಹೀಗೆ ಸಾವು ಯಾವ ರೀತಿಯಲ್ಲಾದರೂ ಉಸಿರಾಂಗ, ಹೃದಯ, ಮೆದುಳು ಸೇರಿದಂತೆ ದೇಹದ ಎಲ್ಲಾ ಜೀವಕೋಶಗಳ ವಿಫಲತೆ ಆಗುತ್ತದೆ. ಹೃದಯದಲ್ಲಿ ವಿದ್ಯುತ್ ರೂಪದಲ್ಲಿ ಆತ್ಮವಿದೆ. ಹೃದಯದ ವಿದ್ಯುತ್ ಸ್ಥಗಿತಗೊಂಡಾಗ ಅದರ ಬಡಿತ ನಿಲ್ಲುತ್ತದೆ. ಆನಂತರವೂ ಆರೇಳು ನಿಮಿಷಗಳ ಕಾಲ ಮೆದುಳು ಕ್ರಿಯಾಶೀಲವಾಗಿರುತ್ತದೆ. ಆ ಸಮಯದಲ್ಲಿ ಅಂಗಾಂಗಗಳನ್ನು ಬೇರ್ಪಡಿಸಿ, ಹೊಂದಿಕೆಯಾಗುವವರಿಗೆ ನಾಟಿ ಮಾಡಬಹುದು ಎಂದು ಇದೇ ವೇಳೆ ತಿಳಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಕರೆಸ್ಪಾಂಡೆಂಟ್ ಸ್ವಾಮಿ ಮಹಾಮೇಧಾನಂದಜಿ ಅವರು, ಆಶೀರ್ವಚನ ನೀಡಿದರು. ಹಿರಿಯ ಸಾಹಿತಿ ಪ್ರೊ.ಜಿ.ಚಂದ್ರಶೇಖರ್, ಸುಯೋಗ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸುಯೋಗ್ ಯೋಗಣ್ಣ ಹಾಗೂ ವೈದ್ಯಕೀಯ ನಿರ್ದೇಶಕ ಡಾ.ಆರ್.ರಾಜೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಪಂಚಭೂತಗಳಲ್ಲಿ ಲೀನರಾದ ಮಲ್ಲನಮೂಲೆ ಶ್ರೀಗಳು

ಕಪಿಲಾ ನದಿ ತೀರದ ಶ್ರೀ ಗುರು ಕಂಬಳೀಶ್ವರರ ಗದ್ದುಗೆ ಆವರಣದಲ್ಲಿ ಅಂತ್ಯಕ್ರಿಯೆ





ಸೋಮವಾರ ಇಹಲೋಕ ತ್ಯಜಿಸಿದ ಮಲ್ಲನಮೂಲೆ ಕ್ಷೇತ್ರದ ಶ್ರೀಗಳ ಅಂತಿಮ ದರ್ಶನ ಪಡೆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಇನ್ನಿತರ ಗಣ್ಯರು.

ನಂಜನಗೂಡು: ಸೋಮವಾರ ನಿಧನರಾದ ತಾಲೂಕಿನ ಮಲ್ಲನಮೂಲೆಯ ಶ್ರೀ ಗುರು ಕಂಬಳೀಶ್ವರ ಮಠಾಧ್ಯಕ್ಷ (ಮಲ್ಲನ ಮೂಲೆ ಕ್ಷೇತ್ರ) ಶ್ರೀ ಚನ್ನಬಸವ ಸ್ವಾಮೀಜಿಯವರ ಅಂತ್ಯಕ್ರಿಯೆ ಕಪಿಲಾ ನದಿ ತೀರದಲ್ಲಿರುವ ಶ್ರೀ ಗುರು ಕಂಬಳೀಶ್ವರ ಗದ್ದುಗೆ ಆವರಣದಲ್ಲಿ ಮಂಗಳವಾರ ಸಂಜೆ ನೆರವೇರಿತು.

ಲಿಂಗೈಕ್ಯ ಸ್ವಾಮೀಜಿಯವರ ಪಾರ್ಥಿವ ಶರೀರವನ್ನು ಮಠದ ಗದ್ದುಗೆಯ ಒಳಾವರಣದಲ್ಲಿರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು ಅಸಂಖ್ಯಾತ ಸಂಖ್ಯೆಯ ಭಕ್ತರು ಸರತಿ ಸಾಲಿನಲ್ಲಿ ಆಗಮಿಸಿ ಶ್ರೀ ಚನ್ನಬಸವ ಸ್ವಾಮೀಜಿಯವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದುಕೊಂಡರು. ಸ್ಥಳದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ನೇತೃತ್ವದ ಅಧಿಕಾರಿಗಳ ತಂಡ ಹಾಜರಿದ್ದು ಬಂದೋಬಸ್ತ್ ನೋಡಿಕೊಂಡರು. ಬೆಳಿಗ್ಗೆಯಿಂದ ಸಂಜೆವರೆಗೂ ಮಠದ ಆವರಣದಲ್ಲಿ ಭಕ್ತರಿಗೆ ನಿರಂತರ ಅನ್ನ ಸಂತರ್ಪಣೆ ಮೂಲಕ ಪ್ರಸಾದ ವಿನಿಯೋಗ ಮಾಡಲಾಯಿತು.

ಮೃತ ಚನ್ನಬಸವ ಸ್ವಾಮೀಜಿ ಅವರ ಪಾರ್ಥಿವ ಶರೀರದ ಮೆರವಣಿಗೆಯನ್ನು ಸಂಜೆ 4ರ ಸಮಯದಲ್ಲಿ ಬಸವನಪುರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ನಡೆಸಲಾಯಿತು. ಅನಂತರ ಅಂತಿಮ ಯಾತ್ರೆಯ ಮೆರವಣಿಗೆ ವಾಪಸ್ ಗದ್ದುಗೆ ಆವರಣಕ್ಕೆ ತಲುಪಿತು. ಬಳಿಕ ಸುತ್ತೂರು ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ವೀರಶೈವ ಲಿಂಗಾಯಿತ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನಗಳನ್ನು ಮಾಡಲಾಯಿತು. ನಂತರ ಭಸ್ಮದ ಉಂಡೆ (ವಿಭೂತಿ)ಗಳನ್ನು ಇರಿಸಿ ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ, ಪೂಜೆ ಸಲ್ಲಿಸಿ ಅಂತಿಮ ವಿಧಿ ವಿಧಾನ ನೆರವೇರಿಸಲಾಯಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನಿಲ್ ಬೋಸ್, ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್, ಶಾಸಕರುಗಳಾದ ದರ್ಶನ್ ಧ್ರುವನಾರಾಯಣ, ಗಣೇಶ್ ಪ್ರಸಾದ್, ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ರುಗಳಾದ ಬಿ.ಹರ್ಷವರ್ಧನ್, ಕಳಲೆ ಕೇಶವಮೂರ್ತಿ, ಎಸ್.ಮಹದೇವಯ್ಯ, ಮತ್ತಿತರ ಗಣ್ಯರು ಮೃತ ಶ್ರೀ ಚನ್ನಬಸವ ಸ್ವಾಮೀಜಿಯವರ ಅಂತಿಮ ದರ್ಶನ ಪಡೆದರು.

ಹೆಚ್.ಡಿ.ಕೋಟೆ ಬಳಿ ಹುಲಿ ಪ್ರತ್ಯಕ್ಷ

ಆತಂಕಗೊಂಡ ಗ್ರಾಮಸ್ಥರು, ಮೊಬೈಲ್‌ನಲ್ಲಿ ಸೆರೆ ಹಿಡಿದ ಕಾರ್ಮಿಕರು

ಹೆಚ್.ಡಿ.ಕೋಟೆ: ತಾಲೂಕಿನ ಗಣೇಶನಗುಡಿ ಸಮೀಪ ತಾರಕ ನಾಲೆ ಬಳಿ ಎಂ.ಜಿ.ರಾಮಕೃಷ್ಣಪ್ಪ ಅವರ ಇಟ್ಟಿಗೆ ಫ್ಯಾಕ್ಟರಿ ಮತ್ತು ಗ್ರಾಮಸ್ಥರ ಜಮೀನಿನ ಬಳಿ ಹುಲಿಯೊಂದು ಕಾಣಿಸಿಕೊಂಡಿದೆ. ಇದರಿಂದ ರೈತರು ಅತಂಕಗೊಂಡಿದ್ದಾರೆ.



ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಸುತ್ತ ಮುತ್ತ ಹುಲಿಗಳ ಹಾವಳಿ ಹೆಚ್ಚಾಗಿದ್ದು, 10 ಹುಲಿಗಳನ್ನು ಈಗಾಗಲೇ ಸೆರೆ ಹಿಡಿಯಲಾಗಿದೆ. ಆದರೂ ಹುಲಿಗಳ ಹಾವಳಿ ಕಡಿಮೆಯಾಗಿಲ್ಲ. ಸಂಜೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ದಿಢೀರ್ ಹುಲಿ ಪ್ರತ್ಯಕ್ಷಗೊಂಡಿದೆ. ಇದನ್ನು ಎಂ.ಜಿ. ರಾಮಕೃಷ್ಣಪ್ಪ ಅವರ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಕಂಡು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ.

ತಕ್ಷಣ ಅಕ್ಕಪಕ್ಕದ ಗ್ರಾಮಸ್ಥರು ಜಮೀನಿನಲ್ಲಿ ಹುಲಿ ಪ್ರತ್ಯಕ್ಷಗೊಂಡಿರುವ ವಿಷಯ ತಿಳಿದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು, ಹುಲಿ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಿ ಡ್ರೋನ್ ಕ್ಯಾಮೆರಾ ಮೂಲಕ ಹುಲಿಯನ್ನು ಪತ್ತೆಹಚ್ಚಲು ಸತತ ಪ್ರಯತ್ನ ಪಟ್ಟಿದ್ದಾರೆ, ಹುಲಿ ಹೆಜ್ಜೆ ಗುರುತಿನ ಜಾಡು ಹಿಡಿದ ಅರಣ್ಯ ಅಧಿಕಾರಿಗಳು ಹುಲಿ ಕಬಿನಿ ಹಿನ್ನೀರಿನ ಕಡೆ ತೆರಳಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬೀಚನಹಳ್ಳಿ, ಗಣೇಶನ ಗುಡಿ, ನೇರಳೆ, ನೇರಳೆ ಹೊಸೂರು, ಎಲಮತ್ತೂರು, ಸುತ್ತಮುತ್ತಲಿನ ಗ್ರಾಮಸ್ಥರು ಜಾಗೃತರಾಗಿರಿ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಆಶ್ರಮ ಶಾಲೆಗೆ ಬಂದ ಭಾರೀ ಗಾತ್ರದ ಹೆಬ್ಬಾವು

ಹೆಚ್.ಡಿ.ಕೋಟೆ: ತಾಲೂಕಿನ ಮೇಟಿಕುಪ್ಪೆ ಮುಖ್ಯ ರಸ್ತೆಯಲ್ಲಿರುವ ಬಸವನಗಿರಿ ಆಶ್ರಮ ಶಾಲೆಗೆ ಸುಮಾರು 15 ಅಡಿ ಉದ್ದದ ಭಾರೀ ಗಾತ್ರದ ಹೆಬ್ಬಾವು ಪ್ರವೇಶಿಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಭಯಭೀತಗೊಳಿಸಿದೆ. ಆಶ್ರಮ ಶಾಲೆಯಲ್ಲಿದ್ದ ಶಿಕ್ಷಕರು, ವಿದ್ಯಾರ್ಥಿಗಳು ತಕ್ಷಣ ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಸಿಬ್ಬಂದಿಗಳು ಗ್ರಾಮಸ್ಥರ ಸಹಾಯದೊಂದಿಗೆ ಭಾರಿ ಗಾತ್ರದ ಹೆಬ್ಬಾವನ್ನು ಸುರಕ್ಷಿತವಾಗಿ ರಕ್ಷಿಸಿ ಅರಣ್ಯಕ್ಕೆ ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ.

ಜಾತಿ ಸಂಸ್ಕೃತಿ ತಿರಸ್ಕರಿಸಿ ನೀತಿ ಸಂಸ್ಕೃತಿ ಬೆಳೆಸಿ

ತಿ.ನರಸೀಪುರ ಪುರಸಭೆಯಲ್ಲಿ ಕನಕ ಜಯಂತಿ ಆಚರಣೆ

ತಿ.ನರಸೀಪುರ, ನ.11–ಕನಕದಾಸರು ಕರೆ ನೀಡಿರುವಂತೆ ಕುಲ ಕುಲವೆಂಬ ಹೊಡೆದಾಟ, ಬಡಿದಾಟ ಬೇಡಾ, ಸಮಾಜದಲ್ಲಿ ಜಾತಿ ಸಂಸ್ಕೃತಿಯನ್ನು ತಿರಸ್ಕರಿಸಿ ನೀತಿ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಕರೆ ನೀಡಿದರು.



ಸಂತಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಅವರ ಭಾವಚಿತ್ರಕ್ಕೆ ಪುರಸಭೆ ಸ್ಥಾಯಿ ಸಮಿತಿಯ ಅಧ್ಯಕ್ಷ ಪ್ರಕಾಶ್ ಪುಷ್ಪಾರ್ಚನೆ ಮಾಡಿದರು.

ಪಟ್ಟಣದ ಪುರಸಭೆ ಕಚೇರಿಯಲ್ಲಿ ಆಯೋಜಿಸಿದ್ದ ಸಂತಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಸಂತ ಶ್ರೇಷ್ಠರಾದ ಕನಕದಾಸರು ಅಪಾರ ಜ್ಞಾನಿಗಳು, ತತ್ವಜ್ಞಾನಿಗಳಾಗಿದ್ದವರು. ಅವರಲ್ಲಿನ ಜ್ಞಾನದ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳು, ಅಸಮಾನತೆ, ಅಜ್ಞಾನವನ್ನು ತೊಡೆದು ಹಾಕಲು ಕೀರ್ತನೆಗಳನ್ನು ರಚಿಸಿ, ಹಾಡುವುದರ ಮೂಲಕ ಸಮಾಜದಲ್ಲಿನ ಅನ್ಯಾಯಗಳನ್ನು ಧಿಕ್ಕರಿಸಿದರು. ಈ ಮೂಲಕ ನಮಗೆಲ್ಲಾ ಸ್ಫೂರ್ತಿದಾಯಕರಾಗಿದ್ದಾರೆ. ಅಂಥವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಸಂತ ಶ್ರೇಷ್ಠ ಶ್ರೀ ಕನಕದಾಸರ ಚಿಂತನೆಗಳನ್ನು ಮೆಲುಕು ಹಾಕುತ್ತಾ, ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾ. ಒಂದು ರೀತಿಯಲ್ಲಿ ತೋರುದೀಪವಾಗಿರುವಂತಹ ಕನಕದಾಸರ ಸ್ಮರಣೆ ಮಾಡಬೇಕು ಎಂದರು.

ತಾಪ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ, ಪುರಸಭಾ ಸದಸ್ಯರಾದ ನಾಗರತ್ನ ಮಾದೇಶ್, ರೂಪ ಪರಮೇಶ್, ತೇಜಸ್ವಿನಿರಾಜು, ಸಿಸ್ಟಮ್ ಸಿದ್ದು, ಸಬಿಲ್ ಖಾನ್, ಮಾಜಿ ಉಪಾಧ್ಯಕ್ಷ ರಾಘವೇಂದ್ರ ಮುಖಂಡ ಮಾದೇಶ್ ಮುಖ್ಯ ಅಧಿಕಾರಿ ತ್ರಿವೇಣಿ, ವ್ಯವಸ್ಥಾಪಕ ಮಹೇಂದ್ರ, ಲೆಕ್ಕಾಧಿಕಾರಿ ವಿನಯ್, ಹಾಗೂ ಸಿಬ್ಬಂದಿ ಹಾಜರಿದ್ದರು.

ಹುಣಸೂರು ವಿಶ್ವಕರ್ಮ ಸಮಾಜಕ್ಕೆ ಪದಾಧಿಕಾರಿಗಳ ಆಯ್ಕೆ

ಹುಣಸೂರು, ನ.11– ತಾಲೂಕು ವಿಶ್ವಕರ್ಮ ಸಮಾಜ ಸಂಘದ ಸಾಮಾನ್ಯ ಸಭೆಯನ್ನು ಹಿರಿಯ ಅಧ್ಯಕ್ಷ ಕೆ.ಪಿ.ಕೃಷ್ಣಚಾರ್ ಅವರ ಅಧ್ಯಕ್ಷತೆಯಲ್ಲಿ ನಡೆಸಿ ಮುಂದಿನ ಮೂರು ವರ್ಷಗಳ ಅವಧಿಗೆ ನೂತನ ಆಡಳಿತ ಸಮಿತಿಯನ್ನು ರಚಿಸಲಾಯಿತು.



ಹುಣಸೂರು ವಿಶ್ವಕರ್ಮ ಸಮಾಜದ ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡ ಸಂದರ್ಭ.

ನೂತನ ಸಮಿತಿಗೆ ಗೌರವ ಅಧ್ಯಕ್ಷರಾಗಿ ಕೆ.ಪಿ.ಕೃಷ್ಣಚಾರ್, ಅಧ್ಯಕ್ಷರಾಗಿ ಕೆ.ಎನ್.ಕುಮಾರ್. ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಹಂಚ್ಯ, ಖಜಾಂಚಿಯಾಗಿ ನಾರಾಯಣ, ಸಹ ಕಾರ್ಯದರ್ಶಿಯಾಗಿ ಕೆ.ಎಸ್.ಶ್ರೀನಿವಾಸ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಕಂಠ ಗೌಡಗೆರೆ, ಕಾನೂನು ಸಲಹೆಗಾರರಾಗಿ ಬಿ.ಎಸ್.ಗಂಗಾಧರ ಆಚಾರ್, ಸಂಚಾಲಕರಾಗಿ ಕೆಂಡಗಣ್ಣ ವಿಶ್ವಕರ್ಮ. ಗೌರವ ಸಲಹ ಸಮಿತಿಯು ಕೆ.ಬಿ.ಚಂದ್ರಚಾರ್. ಸುಬ್ಬಣ್ಣ. ವೆಂಕಟೇಶ್ ಚಾರ್, ಜಿ.ವಿ. ಮುರ್ತಾಚಾರ್, ವೆಂಕಟೇಶ್ ಚಾರ್, ಮಲ್ಲಿಕಾರ್ಜುನ ಚಾರ್, ಭೋಗಾಚಾರ್, ರಾಜಚಾರ್ ಮತ್ತು ಗೋವಿಂದಾಚಾರ್ ಅವರುಗಳನ್ನು ಆಯ್ಕೆ ಮಾಡಲಾಗಿದೆ.

ಉಪಾಧ್ಯಕ್ಷರುಗಳಾಗಿ ಕಸಬಾ ಹೋಬಳಿ ಕೆ.ಎನ್.ಶ್ರೀನಿವಾಸ, ವೀರಭದ್ರಾಚಾರ್, ರೇವಣ್ಣ, ಗಾವಡಗೆರೆ ಹೋಬಳಿ ಮಹದೇವರಾಜು, ಸುರೇಶ, ಅರ್ಕೇಶ್ವರಚಾರ್, ಬಿಳಿಕೆರೆ ಹೋಬಳಿ ಶಿವರುದ್ರಚಾರ್, ಸುರೇಶ್, ಕೆ.ಎಸ್.ಅಣ್ಣಯ್ಯ ಚಾರ್, ಹನಗೋಡು ಹೋಬಳಿ ವಿಶ್ವನಾಥ, ಮಲ್ಲಿಕಾರ್ಜುನ, ಶಂಕರಾಚಾರ್ ನಿರ್ದೇಶಕರಾಗಿ ರಘು ಏನ್.ಕಲ್ಕುಣಿಕೆ, ಕುಶ ಕುಮಾರ್ ಎಮ್ಮೆ ಕೊಪ್ಪಲು, ನಿಂಗ ರಾಜ ಕಲ್ಕುಣಿಕೆ, ಆರ್.ಟಿ.ರವಿ, ಲೋಕೇಶ ಕಾಳೇನಹಳ್ಳಿ ರವಿ ಕಲ್ಕುಣಿಕೆ, ಶ್ರೀಧರ ಟೈಲರ್ ಚೆಲುವಾಚಾರ್ ಕಲ್ಕುಣಿಕೆ, ದಿನೇಶ ಹುಣಸೇಗಾಲ, ರಾಜು ನವಕೋಟಿ ಕುಬೇರ ಮಂಚ ಬಾಯನಹಳ್ಳಿ, ಚಂದ್ರ ಚಾರ್, ಕೆಬ್ಬೆಕೊಪ್ಪಲು, ಸುಹಾಸ್ ಗದ್ದಿಗೆ, ಕೃಷ್ಣ ಬಸವನಹಳ್ಳಿ, ಶೇಖರ ಚಲ್ಲಳ್ಳಿ, ನರಸಚಾರ್ ಕಲ್ಕುಣಿಕೆ, ಮಂಜು ಬೇಬಿ ಬಿಳಿಕೆರೆ, ನಾಗರಾಜು ಬಿ.ಕೆ ಕೆ.ಎನ್.ಚಂದ್ರ ವಸಂತಾಚಾರ್, ಹೊಸೂರು ಕೃಷ್ಣಚಾರ್ ಕೃಷ್ಣಾಪುರ ರವರುಗಳು ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಸಂಘಕ್ಕೆ ಆಯ್ಕೆಗೊಂಡ ಪದಾಧಿಕಾರಿಗಳನ್ನು ಪರಸ್ಪರ ಅಭಿನಂದಿಸಿದರು. ಇದೇ ವೇಳೆ ಗೌರವಾಧ್ಯಕ್ಷ ಕೆ.ಪಿ.ಕೃಷ್ಣಚಾರ್ ಅವರನ್ನು ಸಹ ಸಮಾಜದ ವತಿಯಿಂದ ಅಭಿನಂದಿಸಲಾಯಿತು.

ಕೊಪ್ಪಲು ಹಾಲಿನ ಡೇರಿ ಆಡಳಿತ ಮಂಡಳಿಗೆ 11 ಮಂದಿ ಅವಿರೋಧ ಆಯ್ಕೆ

ಕಂಪಲಾಪುರ: ಕಂಪಲಾಪುರ ಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ 11 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿದೆ. ಹಿಂದಿನ ಆಡಳಿತ ಮಂಡಳಿಯ ಅವಧಿ ಮುಗಿದ ಹಿನ್ನೆಲೆಯಲ್ಲಿ ಹೊಸದಾಗಿ ಆಡಳಿತ ಮಂಡಳಿ ರಚನೆಗೆ ನಡೆದ ಚುನಾವಣೆಯಲ್ಲಿ ಸಂಘವನ್ನು ಲಾಭದತ್ತ ಕೊಂಡೊಯ್ಯುವ ಉದ್ದೇಶದಿಂದ ಎಲ್ಲಾ ಸ್ಥಾನಗಳ ಅಭ್ಯರ್ಥಿಗಳು, ಗ್ರಾಮದ ಮುಖಂಡರು ಮಾತುಕತೆ ನಡೆಸಿ ಚುನಾವಣೆ ನಡೆಸದೆ ಅವಿರೋಧವಾಗಿ 11 ಸ್ಥಾನಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಸಾಮಾನ್ಯ ಕ್ಷೇತ್ರ: ಕೆ.ಸಿ.ರವಿ, ಮಹೇಶ, ಕೆ.ಎನ್.ಗಿರೀಶ್, ಕೆ.ಜಿ.ಕೀರ್ತಿ, ಶಿವಕುಮಾರ್, ಸದಾನಂದ. ಹಿಂ.ವ.(ಅ) ಕೆ.ಎನ್.ಸುನಿಲ್, ಹಿಂ.ವ.(ಬಿ) ಮಣಿ, ಪ.ಜಾ–ರಾಮಚಂದ್ರ, ಮಹಿಳಾ ಮೀಸಲು: ಜಯಲಕ್ಷ್ಮಿ, ಜ್ಯೋತಿ ಆಯ್ಕೆಯಾಗಿದ್ದಾರೆ.

ಸಹಕಾರ ಇಲಾಖೆಯ ಅಧಿಕಾರಿ ಗಿರೀಶ್ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಇದೇ ಸಂದರ್ಭ ಡೇರಿ ಅಧ್ಯಕ್ಷ ಕೆ.ಗೋಪಾಲ್, ಸಿಇಓ ಹೆಚ್.ಲೋಕೇಶ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಪಂಪಸೆಟ್ ಮಾದೇವ್, ಸಹಕಾರ ಸಂಘದ ನಿರ್ದೇಶಕ ಕೆ.ಎಂ.ಲಕ್ಷ್ಮಣ್, ಮುಖಂಡ ಪ್ರಕಾಶ್ ಗೌಡ, ಗುರುಸಿದ್ದಪ್ಪ, ಗ್ರಾಪಂ. ಸದಸ್ಯ ರಾಮಲಿಂಗಂ, ಅನಿಲ್ ಮತ್ತಿತರರು ಹಾಜರಿದ್ದರು.

ನ.24ಕ್ಕೆ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ: ನೂತನವಾಗಿ ರಚನೆಯಾಗಿರುವ ಆಡಳಿತ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಇದೇ ನ.24ಕ್ಕೆ ಚುನಾವಣೆ ನಡೆಯಲಿದೆ.

ಜೆಎಸ್‌ಎಸ್ ವಸತಿ ಶಾಲೆಗೆ ದ್ವಿತೀಯ ಸ್ಥಾನ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಕೊಡಗು ಜಿಲ್ಲೆಯ ಅಮ್ಮತ್ತಿಯಲ್ಲಿ ಏರ್ಪಡಿಸಿದ್ದ ವಿಭಾಗ ಮಟ್ಟದ ಫುಟ್‌ಬಾಲ್ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಚಿತ್ರದಲ್ಲಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರುಗಳು, ತರಬೇತಿ ನೀಡಿದ ಶಿಕ್ಷಕರು ಹಾಗೂ ವಿಜೇತ ವಿದ್ಯಾರ್ಥಿಗಳಿದ್ದಾರೆ.

ಬನ್ನೂರು ಪೌರಕಾರ್ಮಿಕರಿಗೆ ಸೈಕಲ್, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಭಾಗ್ಯ



ಎಂಬಿಬಿಎಸ್ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ಪುರಸಭೆಯ ಅಧ್ಯಕ್ಷ ಕೃಷ್ಣೇಗೌಡ ವಿತರಿಸಿದರು.

ಬನ್ನೂರು: ಪಟ್ಟಣದ ಪುರಸಭೆಯ ಆವರಣದಲ್ಲಿ ಪುರಸಭೆಯ ಅಧ್ಯಕ್ಷ ಕೃಷ್ಣೇಗೌಡರ ನೇತೃತ್ವದಲ್ಲಿ 2022–23ನೇ ಸಾಲಿನ ನಗರೋತ್ಥಾನ ಅನುದಾನದಲ್ಲಿ 24 ಸೈಕಲ್‌ಗಳನ್ನು ಹಾಗೂ 2025–26ನೇ ಸಾಲಿನ ಎಸ್‌ಎಫ್‌ಸಿ ಮತ್ತು ಜನರಲ್ ಅನುದಾನದಲ್ಲಿ ಎಂಬಿಬಿಎಸ್ ಹಾಗೂ ಇಂಜಿನಿಯರಿಂಗ್ ಪದವಿಯ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಪೌರಕಾರ್ಮಿಕರು ಮುಂಜಾನೆಯ ವೇಳೆಯಲ್ಲಿ ತಮ್ಮ ಕರ್ತವ್ಯಕ್ಕೆ ಹಾಜರಾಗಲು ವಿಳಂಬವಾಗುತ್ತಿತ್ತು. ಇದರಿಂದ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪುರುಷರಿಗೆ 12 ಸೈಕಲ್ ಹಾಗೂ ಮಹಿಳೆಯರಿಗೆ 12 ಸೈಕಲ್ ಸೇರಿದಂತೆ ಒಟ್ಟು 24 ಸೈಕಲ್‌ಗಳನ್ನು ವಿತರಣೆ ಮಾಡಿದ್ದು, ಪೌರಕಾರ್ಮಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಹಾಗೆಯೇ ಇಬ್ಬರು ಎಂಬಿಬಿಎಸ್ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ 15 ಇಂಜಿನಿಯರ್ ಪದವಿಯ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸದ ದೃಷ್ಟಿಯಿಂದ ಕಂಪ್ಯೂಟರ್ ಅವಶ್ಯಕತೆ ಇರುವುದನ್ನು ಪರಿಗಣಿಸಿ ತಮ್ಮ ಅವಧಿಯಲ್ಲಿಯೇ ವಿತರಣೆ ಮಾಡಬೇಕೆನ್ನುವ ಉದ್ದೇಶದಿಂದ ಒಟ್ಟು 17 ಲ್ಯಾಪ್‌ಟಾಪ್‌ಗಳನ್ನು ವಿತರಣೆ ಮಾಡುತ್ತಿದ್ದು, ಇವುಗಳನ್ನು ಸದ್ಬಳಕೆ ಮಾಡಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಯಶಸ್ವಿಗೊಳಿಸಿಕೊಳ್ಳುವಂತೆಯೂ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಪುರಸಭೆಯ ಸದಸ್ಯ ಮಹೇಶ್ ಮಾತನಾಡಿ, ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕೆನ್ನುವ ನಿಟ್ಟಿನಲ್ಲಿ ಪುರಸಭೆಯ ಸದಸ್ಯರ ಸಭೆಯನ್ನು ಕರೆದು ಅನುಮತಿ ಪಡೆದುಕೊಂಡು ಪ್ರಸ್ತುತ ವರ್ಷದ ಎಸ್‌ಎಫ್‌ಸಿ ಮತ್ತು ಜನರಲ್ ಅನುದಾನದಲ್ಲಿ ಕಾರ್ಯ ನಿರ್ವಹಿಸಿದ್ದು, ಅಧ್ಯಕ್ಷರ ದೂರದೃಷ್ಟಿಗೆ ಹಿಡಿದ ಕನ್ನಡಿಯಂತಿದೆ. ಮುಂದಿನ ದಿನಗಳಲ್ಲಿ ಇದರ ಸೌಲಭ್ಯವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಮತ್ತೊಬ್ಬರ ನೆರವಿಗೆ ತಮ್ಮಿಂದಾಗುವ ಸೇವಾ ಕಾರ್ಯವನ್ನು ಮಾಡಲಿ ಎಂದು ತಿಳಿಸಿದರು.

ಪುರಸಭೆಯ ಉಪಾಧ್ಯಕ್ಷೆ ಎಂ.ಆರ್. ಸೌಮ್ಯರಾಣಿ, ಎಸ್.ಭಾಗ್ಯ, ಎಂ.ಕೆ. ಮಹೇಶ್, ನಂಜುಂಡಸ್ವಾಮಿ, ಬಿ.ಆರ್.ಶ್ರೀನಿವಾಸ್, ಅನಂತಮೂರ್ತಿ, ಶೋಭ ಸತೀಶ್, ನಾಗರತ್ನ ಪ್ರಭಾಕರ್, ದಿವ್ಯ ಪೈಲ್ವಾನ್ ಚಂದ್ರು, ಸಿ.ಸಿ.ಸುರೇಶ, ಲಾಯರ್ ಶಿವಮೂರ್ತಿ, ಪ್ರಭಾಕರ್, ಮುರಳೀಧರ್ ಸೇರಿದಂತೆ ಪುರಸಭೆಯ ಸದಸ್ಯರು ಇದ್ದರು.

ಪುರಸಭೆಯ ಕಾರ್ಯನಿರತ ಅಧಿಕಾರಿಗಳು ಯಾರೂ ಇಲ್ಲದೇ ಇರುವುದು ಕಾರ್ಯಕ್ರಮದಲ್ಲಿ ಎದ್ದು ಕಾಣುತ್ತಿತ್ತು.

ಕ್ರಿಯಾ ಯೋಜನೆ ಸಿದ್ಧ

ಹುಣಸೂರು: ತಾಲೂಕಿನ ಬನ್ನಿಕುಪ್ಪೆ ಗ್ರಾಪಂ ಆವರಣದಲ್ಲಿ ಸೋಮವಾರ 10 ಗ್ರಾಮಗಳ ವಾರ್ಡ್ ಸಭೆಯಲ್ಲಿ ಮ–ನರೇಗಾ ಯೋಜನೆಯಲ್ಲಿ ರೈತರಿಗೆ 9 ಸ್ಮಶಾನ, 10 ರಸ್ತೆ ಕಾಮಗಾರಿಗಳು, ನಮ್ಮ ಹೊಲ ನಮ್ಮ ದಾರಿ, 50 ದನ, ಕುರಿ, ಮತ್ತು ಮೇಕೆ ಕೊಟ್ಟಿಗೆಗಳು, 25 ಇಂಗು ಗುಂಡಿಗಳು, 25 ಶೌಚಾಲಯಗಳು, 12 ಚರಂಡಿಗಳು, 8 ನೀರು ಕಾಲುವೆ, ಸ್ವಚ್ಛ ಭಾರತ ಮಿಷನ್, ಜೆ.ಜೆ.ಎಂ ಹಾಗೂ ಇನ್ನಿತರ ಕಾಮಗಾರಿಗಳಿಗೆ ಸಭೆಯಲ್ಲಿ ಕ್ರಿಯಾ ಯೋಜನೆಯನ್ನು ತಯಾರು ಮಾಡಲಾಯಿತು.

ರೈತರು ಸ್ಮಶಾನ, ರಸ್ತೆ ಕಾಮಗಾರಿಗಳು, ನಮ್ಮ ಹೊಲ ನಮ್ಮ ದಾರಿ, ದನ, ಕುರಿ, ಮತ್ತು ಮೇಕೆ ಕೊಟ್ಟಿಗೆಗಳು, ಇಂಗು ಗುಂಡಿಗಳು, ಶೌಚಾಲಯಗಳು, ಚರಂಡಿಗಳು, ನೀರು ಕಾಲುವೆ, ಮತ್ತಿತರ ಕಾಮಗಾರಿಗಳನ್ನು ಮಾಡಿಕೊಳ್ಳಬಹುದು.

ಜೈವಿಕ ಪರಿಕರ ಉತ್ಪಾದನಾ ಘಟಕಕ್ಕೆ ಅರ್ಜಿ ಸಲ್ಲಿಸಿ

ರೈತರಿಗೆ ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ಮನವಿ

ಹೆಚ್.ಡಿ.ಕೋಟೆ: ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆಯಡಿ ಜೈವಿಕ ಪರಿಕರ ಉತ್ಪಾದನಾ ಘಟಕಗಳನ್ನು ಆಯ್ಕೆ ಮಾಡಲು ಅರ್ಜಿ ಸಲ್ಲಿಸುವಂತೆ ರೈತರಿಗೆ ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ಮನವಿ ಮಾಡಿದ್ದಾರೆ.



ಪ್ರಸಾದ್


ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆಯಡಿ ತಾಲೂಕಿನಲ್ಲಿ ಜೈವಿಕ ಪರಿಕರ ಉತ್ಪಾದನಾ ಘಟಕಗಳ ಸ್ಥಾಪನೆಗೆ ಅವಕಾಶವಿದ್ದು ಸದರಿ ಘಟಕಗಳ ನಿರ್ಮಾಣಕ್ಕೆ 1 ಲಕ್ಷದವರೆಗೆ ಸಹಾಯಧನಕ್ಕೆ ಅವಕಾಶವಿದ್ದು, ಈ ಸೌಲಭ್ಯವನ್ನು ರೈತರು ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ರೈತರಿಗೆ ಬೇಕಾಗುವ ಜೈವಿಕ ಪದಾರ್ಥಗಳು/ನೈಸರ್ಗಿಕ ಕೃಷಿಗೆ ಬೇಕಾಗುವ ಪರಿಕರಗಳನ್ನು ಉತ್ಪಾದಿಸಿ ಸರಬರಾಜು ಮಾಡುವ ಘಟಕಗಳಾಗಿದ್ದು, ಜೀವಾಮೃತ, ಘನ ಜೀವಾ ಮೃತ, ಬೀಜಾಮೃತ, ದಶಪರ್ಣಿ ಕಷಾಯ, ನೀಮಾಸ್ತ್ರ ಬ್ರಹ್ಮಾಸ್ತ್ರ, ಅಗ್ನಿ ಅಸ್ತ್ರಗಳನ್ನು ಉತ್ಪಾದಿಸಿ ರೈತರಿಗೆ ಮಾರಾಟ ಮಾಡಿ ಲಾಭಗಳಿಸಬಹುದು.

ಆಯ್ಕೆ ಮಾನದಂಡಗಳು: ಜೈವಿಕ ಪರಿಕರ ಉತ್ಪಾದನಾ ಘಟಕ ಸ್ಥಾಪಿಸುವವರು ಸ್ವತಃ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಂಡು ಮತ್ತು ಉಪಯೋಗಿಸುತ್ತಿರಬೇಕು. ಜೈವಿಕ ಪರಿಕರ ಉತ್ಪಾದನಾ ಘಟಕ ಸ್ಥಾಪನೆಗೆ ಸಾಕಷ್ಟು ಸ್ಥಳಾವಕಾಶ ಹೊಂದಿರಬೇಕು, ಜೈವಿಕ ಸಂಪನ್ಮೂಲಗಳು ಸುಲಭವಾಗಿ ದೊರೆಯುವಂತಿರಬೇಕು, ಕನಿಷ್ಟ 2–3 ಹಸು/ದನ/ಎಮ್ಮೆ ಸಾಕುತ್ತಿರಬೇಕು.

ವರ್ಷ ಪೂರ್ತಿ ಉತ್ಪಾದನಾ ಸಾಮರ್ಥ್ಯ ಹೊಂದಿರಬೇಕು, ಈ ಪರಿಕರಗಳನ್ನು ಉಪಯೋಗಿಸುವಂತಹ ಮಾಹಿತಿಯನ್ನು ಸ್ಥಳೀಯ ರೈತರಿಗೆ ಮಾಹಿತಿ ನೀಡುವ ಸಾಮರ್ಥ್ಯ ಹೊಂದಿರಬೇಕು. ಸದರಿ ಯೋಜನೆಯಡಿ ಅರ್ಹ ಕೃಷಿಕರು ಹಾಗೂ ಸ್ಥಳೀಯ ಉದ್ಯಮಿಗಳು ನ.17ರೊಳಗೆ ನೊಂದಾಯಿತ ಅಂಚೆ ಮುಖಾಂತರ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಲು ಕೋರಿದ್ದಾರೆ.

ನಿಂಗೇಗೌಡನ ಹುಂಡಿ ಡೇರಿಯಲ್ಲಿ ಕನಕ ಜಯಂತಿ



ಟಿ.ನರಸಿಪುರ ತಾಲೂಕಿನ ತುಂಬಲ, ನಿಂಗೇಗೌಡನ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕನಕ ಜಯಂತಿಯನ್ನು ಆಚರಿಸಲಾಯಿತು. ಅಧ್ಯಕ್ಷ ಸಿದ್ದರಾಜು, ಉಪಾಧ್ಯಕ್ಷ ಎನ್ ಜವರೇಗೌಡ, ಕಾರ್ಯದರ್ಶಿ ಸುನಿತಾ ಸುರೇಶ್, ನಿರ್ದೇಶಕರಾದ ಡಿ.ಎಸ್.ನಾರಾಯಣ್, ಬಸವರಾಜು, ಕರಿಶೆಟ್ಟಿ, ಕರೀಗೌಡ, ಎನ್ ಬಸವರಾಜು, ಎಂ ನಾಗರಾಜು, ಮಹದೇವಸ್ವಾಮಿ, ಭಾಗ್ಯಮ್ಮ, ಚಿಕ್ಕತಾಯಿ, ಗಿರಿಜಮ್ಮ, ಹಾಲು ಪರೀಕ್ಷಕ ಕೇಶವಮೂರ್ತಿ, ಸಹಾಯಕ ರವಿಕುಮಾರ್, ಶ್ರೀನಿವಾಸ್ ಇದ್ದರು.

ಜ್ಞಾನದ ಮೂಲಕ ಜಗತ್ತಿಗೆ ಬೆಳಕು ನೀಡಿದ ಅಂಬೇಡ್ಕರ್

ಕೆ.ಆರ್.ನಗರ, ನ.11– ಬುದ್ಧರ ಅನುಯಾಯಿಯಾಗಿ ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿ, ಅವರ ಆದರ್ಶಗಳನ್ನು ಪಾಲಿಸಿದ ಅಂಬೇಡ್ಕರ್ ತಮ್ಮ ಜ್ಞಾನದ ಮೂಲಕ ಜಗತ್ತಿಗೆ ಬೆಳಕು ನೀಡಿದ್ದಾರೆ ಎಂದು ಜಿಪಂ ಮಾಜಿ ಸದಸ್ಯ ಅಚ್ಚುತಾನಂದ ಹೇಳಿದರು.



ಅಭಿನಂದನಾ ಸಮಾರಂಭವನ್ನು ಉದ್ಘಾಟಿಸುತ್ತಿರುವ ಗಣ್ಯರು.

ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಯಶಸ್ವಿಗೆ ಕಾರಣರಾದವರಿಗೆ ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಬುದ್ಧರ ಚಿಂತನೆಗಳನ್ನು ಮೈಗೂಡಿಸಿಕೊಂಡು ಜಗತ್ತಿಗೆ ವಿಶ್ವಮಾನವರೆನಿಸಿದ ಅಂಬೇಡ್ಕರ್ ಅವರ ಆದರ್ಶಗಳನ್ನು ನಮ್ಮ ದಲಿತ ಬಾಂಧವರು ಹಿಂಬಾಲಿಸುವಲ್ಲಿ ನಡೆದ ಬೌದ್ಧ ಸಮ್ಮೇಳನ ದಲಿತ ಸಮುದಾಯದ ಜನತೆ, ಮುಖಂಡರು, ಶಿಕ್ಷಿತರು, ಧರ್ಮಗುರುಗಳ ಸಹಕಾರದಿಂದ ಯಶಸ್ವಿಯಾಗಿದೆ. ಬೌದ್ಧ ಧರ್ಮದ ಶ್ರೇಷ್ಠತೆ, ಸಾರ ಹಾಗೂ ಅದರ ಮಹತ್ವದೊಂದಿಗೆ ಅಂಬೇಡ್ಕರ್ ಹೋರಾಟ ತಿಳಿಯಲು ಇದು ಉತ್ತಮ ವೇದಿಕೆಯಾಗಿತ್ತು ಎಂದರು.

ಸಮ್ಮೇಳನದ ಯಶಸ್ಸಿಗೆ ಜ್ಞಾನಪ್ರಕಾಶ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಮಲ್ಕುಂಡಿ ಮಹದೇವ ಸ್ವಾಮಿ, ಕೃಷ್ಣರಾಜನಗರ ಮತ್ತು ಸಾಲಿಗ್ರಾಮ ತಾಲೂಕಿನ ದಲಿತ ಸಂಘಟನೆ ಮುಖಂಡರು ಸೇರಿದಂತೆ ಎಲ್ಲರೂ ಹಗಲು ರಾತ್ರಿ ಶ್ರಮಿಸಿದ್ದು ಎಲ್ಲರಿಗೂ ಅಭಿನಂದಿಸುವುದಾಗಿ ಹೇಳಿದರು.

ದಲಿತ ಮುಖಂಡ ಹಸನೋಗೆ ನಾಗರಾಜ್, ತಾಪಂ ಮಾಜಿ ಸದಸ್ಯ ಹಂಗರಬಾಯನಹಳ್ಳಿ ತಮ್ಮಣ್ಣ ಹಾಗೂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಶಿಕ್ಷಕ ದೊಡ್ಡಯ್ಯ ಮತ್ತಿತರರು ಮಾತನಾಡಿದರು. ಸಾನ್ನಿಧ್ಯ ವಹಿಸಿದ್ದ ಬೋಧಿಬಂತೇಜಿ ಸುಗತಪಾಲ್ ಹಾಗೂ ಮಾತೆ ಗೌತಮಿ ಆಶೀರ್ವಚನ ನೀಡಿದರು. ಸಮ್ಮೇಳನದ ಯಶಸ್ಸಿಗೆ ಕಾರಣರಾದವರನ್ನು ಬೌದ್ಧ ಮಹಾ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ದಲಿತ ಸಂಘಟನೆಗಳ ಮುಖಂಡರಾದ ಹನಸೋಗೆ ಮಂಜುನಾಥ್, ಹೊಸಕೋಟೆ ಚಲುವರಾಜ್, ಕೆ.ಎಲ್. ಕೃಷ್ಣಯ್ಯ, ದಾಶರಥಿ, ಕೃಷ್ಣ ಸಂಪತ್, ಹೊಸ ಅಗ್ರಹಾರ ವೆಂಕಟೇಶ್, ಕಳ್ಳಿಮುದ್ದನಹಳ್ಳಿ ಚಂದ್ರು, ಸಾತಿಗ್ರಾಮ ಆನಂದ್, ದಮ್ಮನಹಳ್ಳಿಕೃಷ್ಣ ಮೂಲೆಪೆಟ್ಟು ರಾಜಶೇಖರ್, ಸುರೇಶ್, ಪುಟ್ಟರಾಜು ಇದ್ದರು.

ಅನ್ಸರ್ ಅಹಮದ್ ನಿಧನ



ಹುಲ್ಲಹಳ್ಳಿ: ಗ್ರಾಮದ ನಿವಾಸಿ ಹಾಗೂ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಜಿಲ್ಲಾಧ್ಯಕ್ಷರಾದ ಅನ್ಸರ್ ಅಹಮದ್ (50) ಮಂಗಳವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾಗಿದ್ದು ಇವರ ಅಂತ್ಯಕ್ರಿಯೆ ಹುಲ್ಲಹಳ್ಳಿಯಲ್ಲಿ ಸಂಜೆ ನೆರವೇರಿಸಲಾಯಿತು. ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಚಾಮರಾಜು



ತಿ.ನರಸೀಪುರ: ಪಟ್ಟಣದ ಭೈರಾಪುರ ಗ್ರಾಮದ ಗಾರೆ ಕಂಟ್ರಾಕ್ಟರ್ ಚಾಮರಾಜು (49) ಮಂಗಳವಾರ ಮುಂಜಾನೆ ನಿಧನರಾದರು.

ಮೃತರು ಪತ್ನಿ,ಇಬ್ಬರು ಪುತ್ರಿಯರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸಂಜೆ ಸ್ವಗ್ರಾಮ ಬೈರಾಪುರ ಗ್ರಾಮದಲ್ಲಿ ನೆರವೇರಿತು. ಕನ್ನಡ ಸೇನೆ ಜಿಲ್ಲಾ ಕಾರ್ಮಿಕರ ವಿಭಾಗದ ಉಪಾಧ್ಯಕ್ಷ ಕೆ ರಾಜು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ಗ್ರಾಮಗಳಲ್ಲಿ ಎಚ್ಚರಿಕೆಯಿಂದ ಓಡಾಡಿ, ಒಂಟಿಯಾಗಿ ಓಡಾಡಬೇಡಿ

ಕಾಡಂಚಿನ ಗ್ರಾಮಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆಯೊಂದಿಗೆ ಜಾಗೃತಿ





ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ವಿವಿಧ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಪತ್ತೆಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿರುವುದು.

ಮೈಸೂರು, ನ.11(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕಿನ ವ್ಯಾಪ್ತಿಯಲ್ಲಿ ಹುಲಿ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕಾಡಂಚಿನ ಗ್ರಾಮಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಹೊಲ, ತೋಟದಲ್ಲಿ ಕೆಲಸ ಮಾಡುವ ವೇಳೆ ಎಚ್ಚರಿಕೆಯಿಂದ ಇರುವುದರೊಂದಿಗೆ ಒಂಟಿಯಾಗಿ ಓಡಾಡಬೇಡಿ ಎಂದು ಅರಣ್ಯ ಇಲಾಖೆ ಜಾಗೃತಿ ಮೂಡಿಸುತ್ತಿದೆ.

ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹೋಬಳಿ ವ್ಯಾಪ್ತಿಯ, ತಾರಕ, ಸತ್ತಿಗೆಹುಂಡಿ, ಪೆಂಜಹಳ್ಳಿ, ಹುಣಸೇಕುಪ್ಪೆ, ಸೋಗಹಳ್ಳಿ, ಕೆಂಪೇಗೌಡನ ಹುಂಡಿ, ಮಂಚೇಗೌಡನಹಳ್ಳಿ, ಹೊನ್ನಮ್ಮನಕಟ್ಟೆ, ಹೊಸಹೊಳಲು, ರಾಗಲಕುಪ್ಪೆ, ಮಗ್ಗೆ, ಮಳಲಿ, ಎನ್.ಬೆಳ್ತೂರು ಗ್ರಾಮಗಳ ವ್ಯಾಪ್ತಿಯಲ್ಲಿ ಹುಲಿಯು ಕಾಣಿಸಿಕೊಳ್ಳುತ್ತಿರುವ ಬಗ್ಗೆ ಗ್ರಾಮಸ್ಥರು ನೀಡಿದ ಮಾಹಿತಿ ಮೇರೆಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವಿವಿಧ ವಲಯಗಳ ಸಿಬ್ಬಂದಿಯುಳ್ಳ 3 ತಂಡ ರಚಿಸಿ ಕೂಂಬಿಂಗ್ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ಈ ವೇಳೆ ತಂಡ ತೋಟದ ಬಳಿ ಕಾಣಿಸಿಕೊಂಡಿದ್ದ ಹುಲಿಯೊಂದನ್ನು ನಾಗರಹೊಳೆ ಅಭಯಾರಣ್ಯಕ್ಕೆ ಓಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ತಂಡವು ಪ್ರತಿದಿನ ಗಸ್ತು ಮಾಡುವುದರೊಂದಿಗೆ ಅರಣ್ಯದಂಚಿನ ಗ್ರಾಮಗಳ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ರೈತರು, ಸಾರ್ವಜನಿಕರು ಹಾಗೂ ಮಕ್ಕಳು ಎಚ್ಚರಿಕೆಯಿಂದ ಓಡಾಡಬೇಕು. ಒಬ್ಬಂಟಿಯಾಗಿ ಓಡಾಡಬಾರದು ಎಂದು ಧ್ವನಿವರ್ಧಕದ ಮೂಲಕ ಎಚ್ಚರಿಕೆ ಸಂದೇಶ ನೀಡಲಾಗುತ್ತಿದೆ.

> **ಕೂಂಬಿಂಗ್ ನಡೆಸಿ, ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ**
>
> ಹುಲಿ ಪ್ರತ್ಯಕ್ಷದ ಮಾಹಿತಿ ಬಂದ ಕೂಡಲೆ ಸ್ಥಳಕ್ಕೆ ಸಿಬ್ಬಂದಿಗಳನ್ನು ಕಳುಹಿಸಲಾಗಿದೆ. ಕೂಂಬಿಂಗ್‌ಗಾಗಿ ಮೂರು ತಂಡ ರಚಿಸಲಾಗಿದೆ. ದೂರು ಬಂದ ಗ್ರಾಮಗಳಲ್ಲಿ ಕೂಂಬಿಂಗ್ ನಡೆಸಲಾಗಿದೆ. ಅಲ್ಲದೆ, ಗ್ರಾಮಸ್ಥರಿಗೆ ಜಾಗೃತಿ ಮೂಡಿಸಲಾಗಿದೆ. ಹಗಲು ಮತ್ತು ರಾತ್ರಿ ವೇಳೆ ಗಸ್ತು ನಡೆಸಲು ಸಿಬ್ಬಂದಿ ನಿಯೋಜಿಸಲಾಗಿದೆ.
>
> – **ಪಿ.ಎ.ಸೀಮಾ,** ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

ಅರಣ್ಯದ ಹೊರ ಭಾಗದಲ್ಲಿ ಹುಲಿ ಕಾಣಿಸಿಕೊಂಡ ಸಂದರ್ಭದಲ್ಲಿ ಸಾರ್ವಜನಿಕರು ಪಾಲಿಸಬೇಕಾದ ಕರ್ತವ್ಯಗಳ ಕುರಿತು ಎಚ್ಚರಿಕೆ ಕರಪತ್ರಗಳನ್ನು ಅರಣ್ಯದಂಚಿನ ಗ್ರಾಮಗಳು, ಶಾಲೆಗಳು, ವಾಹನ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿ ಜಾಗೃತಿ ಮೂಡಿಸಲಾಗುತ್ತಿದೆ.

ಸಿಬ್ಬಂದಿಗಳಿಗೆ ಅರಣ್ಯದ ಒಳಭಾಗದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಹುಲಿಗಳ ಚಲನವಲನವನ್ನು ಗಮನಿಸುವುದು ಹಾಗೂ ಅರಣ್ಯ ಹೊರಭಾಗದಲ್ಲಿ ಕಾಣಿಸಿಕೊಳ್ಳುವ ಹುಲಿಗಳ ಚಲನವಲನದ ಬಗ್ಗೆ ತೀವ್ರ ನಿಗಾ ವಹಿಸುವಂತೆ ಸೂಚಿಸಲಾಗಿದೆ. ಹುಲಿ ದಾಳಿಯಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಕರಪತ್ರವನ್ನು ಸಿದ್ದಪಡಿಸಿದ್ದು, ಸಿಬ್ಬಂದಿಗಳಿಗೆ ಸದರಿ ಕರಪತ್ರಗಳನ್ನು ಅರಣ್ಯದಂಚಿನ ಗ್ರಾಮಗಳು, ಶಾಲೆಗಳು, ವಾಹನ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕರಪತ್ರಗಳನ್ನು ಅಂಟಿಸಲು ಮತ್ತು ವಿತರಿಸಲು ಸೂಚಿಸಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಸ್ ಜಾತರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬೈಸನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ದಿ ಗರ್ಲ್‌ಫ್ರೆಂಡ್ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ಕೋಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಕನ್ನಡ ಭಾಷಾ ಪರಂಪರೆ ಅರಿಯಲು ಹಳಗನ್ನಡ ಸಾಹಿತ್ಯ ಪ್ರಚಾರವಾಗಬೇಕು

ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ನಾಗರಾಜು ಅಭಿಮತ



ಮೈಸೂರು ವಿವಿ ಬಿಎಂಶ್ರೀ ಸಭಾಂಗಣದಲ್ಲಿ 'ಪ್ರಚಾರೋಪನ್ಯಾಸ ಮಾಲೆ'ಯ ಉದ್ಘಾಟನಾ ಸಮಾರಂಭ ನಡೆಯಿತು

ಮೈಸೂರು, ನ.11(ಎಂಕೆ)– ಕನ್ನಡ ಭಾಷಾ ಸಾಹಿತ್ಯ, ಪರಂಪರೆ ಮತ್ತು ಇತಿಹಾಸವನ್ನು ವ್ಯಾಪಕವಾಗಿ ತಿಳಿಸುವ ನಿಟ್ಟಿನಲ್ಲಿ ಆಧುನಿಕ ಕನ್ನಡಕ್ಕಿಂತ ಹಳಗನ್ನಡ ಸಾಹಿತ್ಯ ಪ್ರಚಾರವಾಗಬೇಕಿದೆ ಎಂದು ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ನಾಗರಾಜು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗದ ವತಿಯಿಂದ ಆಯೋಜಿಸಿದ್ದ 'ಪ್ರಚಾರೋಪನ್ಯಾಸ ಮಾಲೆ'ಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕನ್ನಡಿಗರು ಹೊರ ದೇಶಗಳಿಗೆ ಭೇಟಿ ಕೊಟ್ಟಾಗಲೇ ಕನ್ನಡ ಭಾಷೆಯ ಮಹತ್ವ ಅರಿವಾಗುವುದು ಎಂದರು.

ಕನ್ನಡದ ಎಷ್ಟೋ ವಿದ್ಯಾರ್ಥಿಗಳಿಗೆ ಕನ್ನಡವನ್ನೇ ಸರಿಯಾಗಿ ಬರೆಯಲು ಬರುವುದಿಲ್ಲ. ಆದ್ದರಿಂದ ಕನ್ನಡ ಕಲಿಕೆ ಪ್ರಾಥಮಿಕಹಂತದಿಂದಾಗಬೇಕು. ಹಾಗೆಯೇ ಆಧುನಿಕ ಕನ್ನಡಕ್ಕಿಂತ ಹಳೆಗನ್ನಡ ಸಾಹಿತ್ಯ ಪ್ರಚಾರವಾಗಬೇಕು. ಕನ್ನಡ ಕಲಿಕೆ ಕಡ್ಡಾಯವಾಗಬೇಕು ಎಂದರು.

ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಮಾತನಾಡಿ, ಪ್ರಚಾರೋಪನ್ಯಾಸ ಮಾಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿದೆ. ಖಗೋಳಶಾಸ್ತ್ರ ಪುಸ್ತಕದಿಂದ ಆರಂಭವಾಗಿ ಇಂದಿಗೆ 92 ವರ್ಷವಾಗಿದೆ ಎಂದು ತಿಳಿಸಿದರು.

ಬಳಿಕ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ಎಸ್.ಡಿ.ಶಶಿಕಲಾ 'ರನ್ನನ ಗದಾಯುದ್ಧ: ಚಹರೆಗಳು ಮತ್ತು ಪ್ರಶ್ನೆಗಳು' ವಿಷಯ ಮಂಡಿಸಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಉಪಸ್ಥಿತರಿದ್ದರು.

ಮೈಸೂರಿನ ಕೆಎಸ್‌ಆರ್‌ಟಿಸಿಯ 'ಧ್ವನಿ ಸ್ಪಂದನ' ಯೋಜನೆಗೆ ಕೇಂದ್ರ ಸರ್ಕಾರದ ಪ್ರಶಸ್ತಿ



ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಅಳವಡಿಸಿಕೊಂಡಿರುವ ಧ್ವನಿ ಮತ್ತು ಸ್ಪಂದನ ಯೋಜನೆಯ ಯಶಸ್ವಿಗಾಗಿ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಅವರು ಕೆಎಸ್‌ಆರ್ ಟಿಸಿಯ ಪ್ರಧಾನ ವ್ಯವಸ್ಥಾಪಕ ಅಕ್ರಂ ಪಾಷ ಅವರಿಗೆ ಹರಿಯಾಣದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ನ.11(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ಕೆಎಸ್ ಆರ್‌ಟಿಸಿ ಬಸ್ಸುಗಳಲ್ಲಿ ಧ್ವನಿ ಸ್ಪಂದನ (ಆನ್ ಬೋರ್ಡ್ ಬಸ್ ಐಡೆಂಟಿಫಿಕೇಷನ್ ಅಂಡ್ ನ್ಯಾವಿಗೇಷನ್ ಸಿಸ್ಟಂ) ಯೋಜನೆಯ ಯಶಸ್ವಿ ಜಾರಿಗಾಗಿ ಕೇಂದ್ರ ಸರ್ಕಾರದ ಅವಾರ್ಡ್ ಆಫ್ ಎಕ್ಸಲೆನ್ಸ್ ಇನ್ ಅರ್ಬನ್ ಟ್ರಾನ್ಸ್‌ಪೋರ್ಟ್ ಪ್ರಶಸ್ತಿ ಲಭಿಸಿದೆ.

ಕೇಂದ್ರ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯ ಮೈಸೂರಿಗೆ ಈ ಪ್ರಶಸ್ತಿ ನೀಡಿದೆ.

ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಅವರು ಕೆಎಸ್‌ಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರಿಗೆ ಹರಿಯಾಣದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ಧ್ವನಿ ಸ್ಪಂದನ ಯೋಜನೆಯನ್ನು ದೆಹಲಿಯ ರೈಸ್ಡ್ ಲೈನ್ಸ್ ಫೌಂಡೇಷನ್ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನವಾಗಿದ್ದು, ಜರ್ಮನಿಯ ಜಿಐಝಡ್ ಸಂಸ್ಥೆ ಸಹಕಾರದಿಂದ ಸಾಕಾರಗೊಳಿಸಿದೆ.

ದೃಷ್ಟಿ ವಿಕಲ ಚೇತನ ಬಸ್ ಬಳಕೆದಾರರಿಗೆ ಬಸ್‌ಗಳನ್ನು ಸುಲಭವಾಗಿ ಗುರುತಿಸಲು ಹಾಗೂ ಧ್ವನಿ ಆಧಾರಿತ ಸೂಚನೆಗಳ ಮೂಲಕ ಬಸ್ ಪ್ರವೇಶದ ಸ್ಥಳಗಳನ್ನು ಸುರಕ್ಷಿತವಾಗಿ ಕಂಡುಹಿಡಿಯಲು ಸಾಧ್ಯವಾಗುತ್ತದೆ. ಈ ಸಂಬಂಧ ಮೈಸೂರಿನ 400 ಕ್ಕೂ ಹೆಚ್ಚು ದೃಷ್ಟಿ ವಿಕಲ ಚೇತನ ಬಳಕೆದಾರರಿಗೆ ಇದರ ಬಳಕೆ ಬಗ್ಗೆ ತರಬೇತಿ ನೀಡಲಾಗಿತ್ತು. ಈಗ ದೃಷ್ಟಿ ವಿಕಲ ಚೇತನರು ಯಶಸ್ವಿಯಾಗಿ ಇದರ ಉಪಯೋಗ ಪಡೆಯುತ್ತಿದ್ದಾರೆ.

ಧ್ವನಿ ಸ್ಪಂದನದಿಂದ ದೃಷ್ಟಿ ವಿಕಲ ಚೇತನರಿಗೆ ಬಹುಪಯೋಗಿಯಾಗಿದ್ದು, ಅವರಲ್ಲಿ ಆತ್ಮ ವಿಶ್ವಾಸ, ಭದ್ರತೆ ಹಾಗೂ ಸಂಚಾರ ಸ್ವಾತಂತ್ರ್ಯದಲ್ಲಿ ದೊಡ್ಡ ಮಟ್ಟದ ಬದಲಾವಣೆಗೆ ಕಾರಣವಾಗಿದೆ. ಭಾರತದಲ್ಲಿ ಯಶಸ್ವಿಗೊಂಡ ಮೊದಲ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ಹಿನ್ನೆಲೆ ಕೇಂದ್ರ ಸರ್ಕಾರ ಮೈಸೂರಿನ ವಿಶಿಷ್ಟ ಯೋಜನೆಗೆ ಪ್ರಶಸ್ತಿ ನೀಡಿದೆ. ಈ ಮೂಲಕ ಮೈಸೂರಿನಲ್ಲಿ ಹಲವು ಪ್ರಥಮ ಯೋಜನೆಗಳು ಯಶಸ್ವಿಯಾಗಿ ಸಾಕಾರಗೊಂಡ ಪಟ್ಟಿಗೆ ಇದು ಕೂಡ ಸೇರ್ಪಡೆಯಾಗಿದೆ

ಮೈಸೂರಿನ ಹಿರಿಯ ಸೈಕ್ಲಿಸ್ಟ್‌ಗಳ 950 ಕಿಮೀ ಕನ್ಯಾಕುಮಾರಿ ಯಶಸ್ವಿ ಸೈಕಲ್‌ಯಾನ



ಮೈಸೂರಿನಿಂದ ಕನ್ಯಾಕುಮಾರಿವರೆಗೆ ನ.1 ರಂದು ಪ್ರಯಾಣ ಬೆಳೆಸಿದ್ದ ಸೈಕ್ಲಿಸ್ಟ್‌ಗಳನ್ನು ಕಾಣಬಹುದು.

ಮೈಸೂರು,11(ಎಂಕೆ)– ಮೈಸೂರು ಅಥ್ಲೀಟ್ಸ್ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ 15 ಮಂದಿ ಹಿರಿಯ ಸೈಕ್ಲಿಸ್ಟ್‌ಗಳ ಮೈಸೂರಿನಿಂದ ಕನ್ಯಾಕುಮಾರಿವರೆಗಿನ 950 ಕಿಲೋಮೀಟರ್ ಸೈಕಲ್‌ಯಾನ ಯಶಸ್ವಿಯಾಗಿದೆ.

ಮೈಸೂರಿನ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಎದರು ನ.1 ರಂದು ಬೆಳಗ್ಗೆ 8 ಗಂಟೆಗೆ ಆರಂಭವಾದ ಮೈಸೂರಿನಿಂದ ಧನುಷ್ಕೋಟಿ ಮೂಲಕ ಕನ್ಯಾಕುಮಾರಿವರೆಗಿನ ಏಳು ದಿನಗಳ ಸೈಕಲ್ ಸವಾರಿ ನ.7 ರಂದು ಪೂರ್ಣಗೊಂಡಿದೆ. 'ಫಿಟ್ ಇಂಡಿಯಾ' ಪರಿಕಲ್ಪನೆಯಡಿ ನಡೆದ ಸೈಕಲ್ ಯಾನದಲ್ಲಿ 75 ವರ್ಷ ಮೇಲ್ಪಟ್ಟ ಇಬ್ಬರು, 70 ವರ್ಷ ಮೇಲ್ಪಟ್ಟ ಒಬ್ಬರು ಹಾಗೂ 60 ವರ್ಷ ಮೇಲ್ಪಟ್ಟ ಐವರು ಸೇರಿದಂತೆ 15 ಮಂದಿ ಸೈಕ್ಲಿಸ್ಟ್‌ಗಳು ಯಶಸ್ವಿಯಾಗಿ ಯಾನ ಪೂರ್ಣಗೊಳಿಸಿದ್ದಾರೆ.

ಮೈಸೂರು, ಸತ್ಯಮಂಗಲ ಕಾಡಿನ ಮೂಲಕ ಹಾದು, ದಿಂಬಂ ಘಾಟ್ ಮತ್ತು ಕಾರೈಕ್ಕುಡಿ, ರಾಮೇಶ್ವರಂ, ಧನುಷ್ಕೋಟಿ ಮತ್ತು ಟುಟಿಕೋರಿನ್‌ನ ಬಯಲು ಪ್ರದೇಶಗಳ ಮೂಲಕ ಕನ್ಯಾಕುಮಾರಿ ತಲುಪಿದ್ದು, ಪ್ರತಿ ದಿನ 135 ಕಿಲೋಮೀಟರ್ ಕ್ರಮಿಸಲಾಗಿದೆ. ಸೈಕಲ್ ಯಾನದ ಮಾರ್ಗದುದ್ದಕ್ಕೂ ಆರೋಗ್ಯ ಮತ್ತು ಫಿಟ್‌ನೆಸ್ ಕುರಿತು ಮಾಹಿತಿ ನೀಡಲಾಗಿದೆ.

ಬೆಂಗಳೂರಿನ ನಿವೃತ್ತ ಮೆಕ್ಯಾನಿಕಲ್ ಇಂಜಿನಿಯರ್ ಮೋಹನ್ ಶೆಣೈ(75 ವರ್ಷ), ನಿವೃತ್ತ ಬ್ಯಾಂಕ್ ಅಧಿಕಾರಿ ಸಹಸ್ರನಾಮ ಸುಬ್ರಹ್ಮಣ್ಯಂ(75 ವರ್ಷ), ನಿವೃತ್ತ ಎಸಿಪಿ ಡಿ.ಧನಂಜಯ(70 ವರ್ಷ), ಎಂಟಿಆರ್‌ಡಿಸಿ ನಿವೃತ್ತ ಅಧಿಕಾರಿ ಎಂ.ಎಸ್.ಬಾಬು ಕುಮಲಾಕರ್(65 ವರ್ಷ), ಸಿಐಎಲ್ ನಿವೃತ್ತ ಜಿಎಂ ಕೆ.ಎಸ್.ವೇದಮೂರ್ತಿ(65 ವರ್ಷ), ನಿವೃತ್ತ ಡಿಸಿಸಿಟಿ ರಮೇಶ್ ನರಸಯ್ಯ(62 ವರ್ಷ) ಭಾರತೀಯ ಸೇನೆ ನಿವೃತ್ತ ಬ್ರಿಗೇಡಿಯರ್ ರವಿ ಮುನಿಸ್ವಾಮಿ(62 ವರ್ಷ), ವಾಸ್ತುಶಿಲ್ಪಿ ಹೆಚ್.ಎಸ್.ದೀಪಕ್(61 ವರ್ಷ), ಕೈಗಾರಿಕೋದ್ಯಮಿ ಆರ್.ಮುತ್ತುಕುಮಾರನ್ (55 ವರ್ಷ), ಸಾರ್ವಜನಿಕ ಗ್ರಂಥಾಲಯ ಇಲಾಖೆ ಡಿಡಿ ಬಿ.ಮಂಜುನಾಥ್(53 ವರ್ಷ), ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಪಿ.ವೇಣುಗೋಪಾಲ್(52 ವರ್ಷ), ಇಂಜಿನಿಯರ್ ಹರ್ಷ(48 ವರ್ಷ), ಕ್ಯಾನ್ಸರ್ ಸಲಹೆಗಾರ ಡಾ.ಆರ್.ಡಿ.ದಯಾನಂದ(47 ವರ್ಷ), ಶಸ್ತ್ರಚಿಕಿತ್ಸಕ ಡಾ.ಎಸ್.ಶಿವಾನಂದ್(45 ವರ್ಷ) ಹಾಗೂ ಸೈಕಲ್ ಟೂರ್ ನಿರ್ವಾಹಕ ಎನ್.ಸಿ.ಪೂಣಚ್ಚ (42 ವರ್ಷ) ಜೊತೆಗೆ ಸ್ವಯಂ ಸೇವಕ ಮತ್ತು ಉದ್ಯಮಿ ಸಂತೋಷ್ ಸೈಕಲ್ ಯಾನದಲ್ಲಿ ಭಾಗವಹಿಸಿದ್ದರು.

ಮೈಸೂರು–ಧನುಷ್ಕೋಟಿ–ಕನ್ಯಾಕುಮಾರಿ ನಡುವಿನ 950 ಕಿಮೀ ಸೈಕಲ್ ಯಾನದ ಮೊದಲ ದಿನ ಮೈಸೂರು–ಸತ್ಯಮಂಗಲ(150 ಕಿಮೀ), 2ನೇ ದಿನ ಸತ್ಯಮಂಗಲ–ಒಟ್ಟಾಂಚತ್ರಂ(155 ಕಿಮೀ), 3ನೇ ದಿನ ಒಟ್ಟಾಂಚತ್ರಂ–ಕಾರೈಕುಡಿ(135 ಕಿಮೀ), 4ನೇ ದಿನ ಕಾರೈಕುಡಿ – ರಾಮೇಶ್ವರಂ (140 ಕಿಮೀ), 5ನೇ ದಿನ ರಾಮೇಶ್ವರಂ–ಧನುಷ್ಕೋಟಿ–ಕೀಲಕರೈ(125 ಕಿಮೀ), 6ನೇ ದಿನ ಕೀಲಕರೈ–ತಿರುಚೆಂಡೂರ್(145 ಕಿಮೀ) ಹಾಗೂ 7ನೇ ದಿನ ತಿರುಚೆಂದೂರಿನಿಂದ ಕನ್ಯಾಕುಮಾರಿ(100 ಕಿ.ಮೀ)ವರೆಗೆ ಯಶಸ್ವಿಯಾಗಿ ತಲುಪಿದ್ದಾರೆ.

ಇಂದು ಲೋಕಾಯುಕ್ತ ದೂರು ಸ್ವೀಕಾರ

ಮೈಸೂರು: ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳಿಂದ ನ.12ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಪ್ರವಾಸಿ ಮಂದಿರ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ/ ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು.

ಪಿಹೆಚ್.ಡಿ ಪದವಿ



ಮೈಸೂರು, ನ.11– ಸಾರ್ವಜನಿಕ ಆಡಳಿತ ವಿಷಯದಲ್ಲಿ ಡಾ.ಬಿ.ಎನ್.ಯಶೋಧಾ ಅವರ ಮಾರ್ಗದರ್ಶನದಲ್ಲಿ ಜಿ.ಶಿವಶಂಕರ್ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಲಾಗಿದೆ.

ಅರಣ್ಯದ ಸಂಪೂರ್ಣ ಹಕ್ಕು ಬುಡಕಟ್ಟು ಜನರಿಗೆ ಸೇರಬೇಕು

ಬುಡಕಟ್ಟು ಸಮುದಾಯದ ವಿಚಾರ ಸಂಕಿರಣದಲ್ಲಿ ಪ್ರತಿಪಾದನೆ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ 'ಕರ್ನಾಟಕ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ಪದ್ಧತಿಗಳು' ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿಶ್ವನಾಥ್ ಉದ್ಘಾಟಿಸಿದರು.

ಮೈಸೂರು,ನ.11(ಎಂಟಿವೈ)– ಬುಡಕಟ್ಟು ಸಮುದಾಯದ ಪಾರಂಪರಿಕತೆ ಮತ್ತು ಆಚರಣೆ ಆ ಸಮುದಾಯದ ಅಸ್ಮಿತೆಯಾಗಿದ್ದು, ಅದನ್ನು ಸಂರಕ್ಷಿಸಬೇಕಾದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿಶ್ವನಾಥ್ ಅರಣ್ಯದ ಸಂಪೂರ್ಣ ಹಕ್ಕು ಬುಡಕಟ್ಟು ಜನರಿಗೆ ಸೇರಬೇಕು ಎಂದು ಪ್ರತಿಪಾದಿಸಿದರು.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ 'ಕರ್ನಾಟಕ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ಪದ್ಧತಿಗಳು' ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುಡಕಟ್ಟು ಜನಾಂಗದ ನಾಗರಿಕತೆಯು ಒಂದು ವಿಶೇಷ ನಾಗರಿಕತೆಯಾಗಿದ್ದು, ಎಲ್ಲ ನಾಗರೀಕತೆಗಳ ಮೂಲ ಅಲೆಮಾರಿ ಆಗಿದೆ ಎಂದರು.

ಬುಡಕಟ್ಟು ಸಂಸ್ಕೃತಿಯನ್ನು ಅಪೋಷಣೆಗೊಳಿಸುವ ಹುನ್ನಾರ ನಡೆಯುತ್ತಿದೆ ಎಂಬ ಅನುಮಾನ ಕಾಡುತ್ತಿದ್ದು, ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಿದೆ. ಪ್ರಪಂಚದ ಯಾವುದೆ ಬುಡಕಟ್ಟು ಧಾರ್ಮಿಕ ಸಂಸ್ಕೃತಿ ದಾಖಲೆಯಾಗಿಲ್ಲ ಅರಣ್ಯದ ಸಂಪೂರ್ಣ ಹಕ್ಕು ಬುಡಕಟ್ಟು ಜನರಿಗೆ ಸೇರಬೇಕು. ಆದರೆ ಬುಡಕಟ್ಟು ಜನರ ಪರಿಸ್ಥಿತಿ ಅರಣ್ಯಗಳ ನಾಶದೊಂದಿಗೆ, ಸಂಸ್ಕೃತಿಯ ಆಚರಣೆಗಳು ನಾಶವಾಗುತ್ತಿದ್ದು ಬುಡಕಟ್ಟು ಸಮುದಾಯದ ಚಿಂತಕರು, ಪದವೀದರರು, ನಿಮ್ಮ ಆಚರಣೆಗಳ ಸಂರಕ್ಷಣೆ ಮಾಡಿಕೊಳ್ಳುವುದು ನಿಮ್ಮ ಅಸ್ತಿತ್ವದ ಜೊತೆಗೆ ನಿಮ್ಮ ಹಕ್ಕುಗಳ ಸಂರಕ್ಷಣೆ ಮಾಡಿಕೊಳ್ಳುವತ್ತ ಗಮನ ಹರಿಸಬೇಕು ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಟಿ.ಯೋಗೀಶ್ ವೀಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿ, ಭಗವಾನ್ ಬಿರ್ಸಾಮುಂಡಾರವರ 150ನೇ ಜನ್ಮದಿನವನ್ನು ನ.15ರಂದು ಆಚರಿಸುತ್ತಿದ್ದೇವೆ ಬುಡಕಟ್ಟು ಜನರು ಅಭಿವೃದ್ಧಿಯ ಜೊತೆಗೆ ಸಂಸ್ಕೃತಿ ಹಾಗೂ ತಮ್ಮತನವನ್ನು ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದ್ದು, ಇಂತಹ ವಿಚಾರ ಸಂಕಿರಣಗಳಲ್ಲಿ ಅವರ ಸಂಸ್ಕೃತಿ ಹಾಗೂ ಪಾರಂಪರಿಕ ಜ್ಞಾನವನ್ನು ಗೌರವಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಚರ್ಚೆಗಳು ನಡೆದು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರೆ ನಾವು ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲವಾಗುತ್ತದೆ ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಮಾತನಾಡಿ, ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಹಲವಾರು ಸಂಶೋದಕರು ಭಾಗವಹಿಸುತ್ತಿದ್ದು, ಅವರ ಅಭಿಪ್ರಾಯ ಚರ್ಚೆಗಳನ್ನು ಸರ್ಕಾರದ ಗಮನಕ್ಕೆ ತಂದು ಆಗಬೇಕಾದ ಅನುಕೂಲಗಳನ್ನು ರೂಪಿಸಲಾಗುವುದು ಎಂದರು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಉಪನಿರ್ದೇಶಕರಾದ ಹೆಚ್.ಎಸ್.ಗಿರಿಜಾಂಬ ಸ್ವಾಗತಿಸಿದರು. ಡಾ.ಸಿ.ಮಾದೇಗೌಡ, ಡಾ.ರತ್ನಮ್ಮ, ಪ್ರೊ.ಎಸ್.ಎಂ.ಮುತ್ತಯ್ಯ, ಡಾ. ಬಿ.ಆರ್. ಮಂಜುನಾಥ್, ಡಾ. ಮೋಹನ್ ಕುಮಾರ್ ಲೆಕ್ಕಾಧಿಕಾರಿ ಭವ್ಯ ಉಪಸ್ಥಿತರಿದ್ದರು.

ಮೈಸೂರು ವಿವಿ ಭದ್ರತಾ ಸಿಬ್ಬಂದಿ ನೇಮಕಾತಿಯಲ್ಲಿ ಅವ್ಯವಹಾರ ಆರೋಪ

ಕ್ರಾಫರ್ಡ್ ಭವನದ ಮುಂದೆ ಯುನೈಟೆಡ್ ಸೆಕ್ಯೂರಿಟಿ ವರ್ಕರ್ಸ್ ಯೂನಿಯನ್ ಪ್ರತಿಭಟನೆ



ಭದ್ರತಾ ಸಿಬ್ಬಂದಿಗಳ ನೇಮಕದಲ್ಲಿ ಆಗಿರುವ ಭ್ರಷ್ಟಾಚಾರದ ವಿರುದ್ಧ ತನಿಖೆ ನಡೆಸುವಂತೆ ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಮುಂದೆ ಮಂಗಳವಾರ ಕರ್ನಾಟಕ ಯುನೈಟೆಡ್ ಸೆಕ್ಯೂರಿಟ್ ವರ್ಕರ್ಸ್ ಯೂನಿಯನ್ ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರು,ನ11(ಎಂಟಿವೈ)– ಮೈಸೂರು ವಿವಿ ಭದ್ರತಾ ಸಿಬ್ಬಂದಿಗಳ ನೇಮಕಾತಿಯ ಗುತ್ತಿಗೆಯಲ್ಲಿ ಅವ್ಯವಹಾರ ನಡೆದಿದ್ದು, 27 ಮಂದಿ ಬೇನಾಮಿ ಹೆಸರಿನಲ್ಲಿ ಅಕ್ರಮವಾಗಿ ವೇತನ ಪಡೆಯುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ಯುನೈಟೆಡ್ ಸೆಕ್ಯೂರಿಟ್ ವರ್ಕರ್ಸ್ ಯೂನಿಯನ್ ಪ್ರತಿಭಟನೆ ನಡೆಸಿದರು.

ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂದೆ ಮಂಗಳವಾರ ಬೆಳಗ್ಗೆ ಮುಖಂಡರು ಪ್ರತಿಭಟನೆ ನಡೆಸಿ, ಮೈಸೂರು ವಿವಿಯಲ್ಲಿ ಈ ಹಿಂದೆ ಗುತ್ತಿಗೆ ಪಡೆದಿದ್ದ ರಂಗನಾಥ ಎಂಟರ್ ಪ್ರೈಸಸ್‌ಗೆ 152 ಜನ ಭದ್ರತಾ ಕಾರ್ಮಿಕರು, ಓರ್ವ ಮೇಲ್ವಿಚಾರಕನನ್ನು ನೇಮಿಸಲು ಆದೇಶ ನೀಡಲಾಗಿತ್ತು. ಆದರೆ ಏಜೆನ್ಸಿ ಕೇವಲ 125 ಜನ ಭದ್ರತಾ ಕಾರ್ಮಿಕರು, ಓರ್ವ ಮೇಲ್ವಿಚಾರಕನನ್ನು ಮಾತ್ರ ನೇಮಕ ಮಾಡಿ 152 ಜನರ ಹೆಸರಿನಲ್ಲಿ ಬಿಲ್ ಪಡೆಯುತ್ತಿದೆ. 27 ಜನರ ಬೇನಾಮಿ ಹೆಸರು ಸೇರಿಸಿ ವಂಚಿಸಲಾಗುತ್ತಿದೆ. ಅಲ್ಲದೆ, ಮೈಸೂರು ವಿವಿಯಲ್ಲಿ ಕೆಲಸ ಮಾಡುವ ಯಾವ ಭದ್ರತಾ ಕಾರ್ಮಿಕರಿಗೂ ವಾರದ ರಜೆ, ತಿಂಗಳಿಗೆ 2 ದಿನಗಳಿಕೆ ರಜೆ, ವಾಷಿಂಗ್ ಭತ್ಯೆ ನೀಡದೆ 30 ದಿನವೂ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ವಿವಿಯ ಅಧಿಕಾರಿಗಳ ಪಾತ್ರವಿಲ್ಲದೆ ಈ ರೀತಿ ಸಾರ್ವಜನಿಕರ ಹಣ ಲೂಟಿ ಹೊಡೆಯಲು ಸಾಧ್ಯವೇ? ಗುತ್ತಿಗೆದಾರನ ಅವ್ಯವಹಾರಗಳ ಕುರಿತು ಮಾಹಿತಿ ನೀಡದೆ, ಶಾಸನ ಬದ್ಧ ಸೌಲಭ್ಯಗಳನ್ನು ಕೇಳುವ ಭದ್ರತಾ ಕಾರ್ಮಿಕರನ್ನು ಕೆಲಸದಿಂದ ತೆಗೆಯುವುದಾಗಿ ಹೆದರಿಸಿ ಒತ್ತಾಯದಿಂದ ಕೆಲಸ ಮಾಡಿಸುತ್ತಿದ್ದ ಮೇಲ್ವಿಚಾರಕನ ಪಾತ್ರ ಈ ವ್ಯವಹಾರದಲ್ಲಿ ಎದ್ದು ಕಾಣುತ್ತದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಹಕ್ಕೊತ್ತಾಯಗಳು: ಹೊಸ ಗುತ್ತಿಗೆದಾರನಿಗೆ ಅವಕಾಶ ನೀಡಬೇಕು. ಮೇಲ್ವಿಚಾರಕ ಅರುಣ್ ಕುಮಾರ್ ಅವರನ್ನು ಕೆಲಸದಿಂದ ವಜಾ ಮಾಡಬೇಕು. ಈ ಹಿಂದಿನ ಗುತ್ತಿಗೆದಾರರ ಅವ್ಯವಹಾರಗಳನ್ನು ತನಿಖೆ ಮಾಡಲು ಮೈಸೂರು ವಿವಿಯ ನೌಕರರನ್ನು ಬಿಟ್ಟು ಹೊರಗಿನ ವ್ಯಕ್ತಿಗಳಿಂದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮವಹಿಸಬೇಕು. ಕಾರ್ಮಿಕರ ಕುಂದು ಕೊರತೆ ಸಭೆಯನ್ನು ಸಂಘದ ಪದಾಧಿಕಾರಿಗಳೊಂದಿಗೆ ನಡೆಸಲು ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡ ಚಂದ್ರಶೇಖರ್ ಮೇಟಿ ಸೇರಿದಂತೆ ಹಲವು ಭಾಗವಹಿಸಿದ್ದರು.

MUDA APPROVED SITE FOR SALE

LAST 6

30 X 40 EAST FACING

Available

Location : Adjacent JP Nagar,
At Mysore-Ooty Road & Ring Road Junction

PRICE @ Rs. 77 Lakh Onwards

CALL : 96200 99122

100% QUALITY WOOD

FACTORY FINISH
DOORS & WINDOWS
@ FACTORY DEPOT RATES

10 YEARS WARRANTY

9731591267
9901291267

1ನೇ ವರ್ಷದ ಪುಣ್ಯಸ್ಮರಣೆ



ಮಂಡ್ಯದ ಗಂಡು

ಚಿನ್ಮಯ್ ಗೌಡ (SDM)

ಪಟ್ಟಸೋಮನಹಳ್ಳಿ (ನಿಧನ : 12-11-2024)

ಕರ್ನಾಟಕದ ಪ್ರತಿಷ್ಠಿತ ವಿದ್ಯಾಸಂಸ್ಥೆ ಶ್ರೀ ಧರ್ಮಸ್ಥಳ ಮಂಜುನಾಥ (SDM)ನಲ್ಲಿ ವ್ಯಾಸಂಗ ಮಾಡುತ್ತಿದ್ದರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪರವಾಗಿ ರಾಜ್ಯ ಕಬಡ್ಡಿ ಆಟಗಾರರಾಗಿದ್ದರು. 2024ರಲ್ಲಿ ಹರಿಯಾಣದಲ್ಲಿ ನಡೆದ ಪದವಿ ಪೂರ್ವ ಕಾಲೇಜು ವಿಭಾಗದ ರಾಷ್ಟ್ರೀಯ ಕಬಡ್ಡಿ ಪಂದ್ಯಾಟದಲ್ಲಿ ಆಡಬೇಕಿದ್ದ ಒಬ್ಬ ಶ್ರೇಷ್ಠ ಕಬಡ್ಡಿ ಆಟಗಾರ, ರಾಜ್ಯ ಮಟ್ಟದ ಕಬಡ್ಡಿ ಆಟಗಾರ ಚಿನ್ಮಯ್ ಗೌಡರವರ ಮೊದಲನೇ ವರ್ಷದ ಪುಣ್ಯಸ್ಮರಣೆ. – ಕುಟುಂಬವರ್ಗ.

HOUSE REQUIRED FOR RENT

Looking for a 3 BHK independent House with an Outhouse.

Areas: V.V. Mohalla, Yadavagiri, Gokulam, Jayalakshmipuram and Vijayanagar 1st stage.

Immediate requirement

Call us: 7676801709

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಯೊಂದಕ್ಕೆ

4 ವೀಲರ್ ಚಾಲಕರು ಬೇಕಾಗಿದ್ದಾರೆ

ವಯೋಮಿತಿ : 20 ರಿಂದ 30

ಕನಿಷ್ಠ ಎರಡು ವರ್ಷ ಅನುಭವವಿರುವವರಿಗೆ ಆದ್ಯತೆ ಆಕರ್ಷಕ ವೇತನ ಸೌಲಭ್ಯವಿದೆ.

ಆಸಕ್ತರು ಈ ಕೂಡಲೇ ಕೆಳಕಂಡ ದೂರವಾಣಿಗೆ ಸಂಪರ್ಕಿಸಿ. ☎ 76187 87156

FOR RENT

COMMERCIAL SPACE
FOR RENT- 1000 sqft
Suitable for Office, Tuitions, Clinics at Gayathripuram, Mysore. Contact:

89715 43323 / 74116 94281

WANTED IMMEDIATELY

1) Semi-Qualified CA/ Articleship completed CA
2) Accountant
3) Field Officer/ Field Executive (Salary-15,000/- to 50,000/-)

Work Location:
#20, 1st Floor, Buddhamarga, Siddhartha Layout, Opp. New DC Office, Mysore
Office: 0821-3588601
Phone: 9353787677

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ–

Rs. 11,200 (24 CT)

9108146123

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

MUDA LIMITS

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ

ಬುಕಿಂಗ್ ಪ್ರಾರಂಭವಾಗಿದೆ

ಕೇವಲ ₹749/ ಪ್ರತಿ ಚದರ ಅಡಿ

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50 | 40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್ 95133 01854 / 88840 71010
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ

ಮೈಸೂರು ಜಿಲ್ಲೆ – 571107, ದೂ: 08223–273036
ಇ–ಮೇಲ್: itstaff_ulb_periyapatna@yahoo.com

ಸಂಖ್ಯೆ: ಪಿಪುಸ/ತಾಂತ್ರಿಕಶಾಖೆ/ಜೆಇ/ಟೆಂಡರ್–17/2025–26 ದಿನಾಂಕ: 11.11.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಈ ಮೂಲಕ ಪ್ರಕಟಿಸುವುದೇನೆಂದರೆ, ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನದ ಬಂಡವಾಳ ಸೃಜನೆ ಶೇ. 24.10ರ ಟಿಎಸ್‌ಪಿ ಮತ್ತು ಪುರಸಭಾ ಅನುದಾನದ ಶೇ.24.10ರ ಟಿಎಸ್‌ಪಿ ಮತ್ತು 2025–26ನೇ ಸಾಲಿನ 15ನೇ ಹಣಕಾಸು ಆಯೋಗದ ಮುಕ್ತ ಅನುದಾನ ಮತ್ತು ಪುರಸಭಾ ಅನುದಾನದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ–1) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸದರಿ ವೆಬ್ ಸೈಟ್ ಮುಖಾಂತರ ಸಲ್ಲಿಸಬಹುದು.

ಟೆಂಡರ್ ಸಲ್ಲಿಸುವ ವಿವರ : 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 01.12.2025ರ ಸಂಜೆ 4.00 ಗಂಟೆಗೆ 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 03.12.2025ರ ಸಂಜೆ 4.00 ಗಂಟೆಗೆ.

ಕ್ರ ಸಂ.	ಇಂಡೆಂಟ್ ನಂ.	ಅಂದಾಜು ಮೊತ್ತ ರೂ.ಗಳಲ್ಲಿ
1	DMA/2025-26/RD/WORK_INDENT47677/CALL-3	4.90
2	DMA/2025-26/RD/WORK_INDENT47678/CALL-3	4.85
3	DMA/2025-26/OW/WORK_INDENT42864/CALL-4	0.86

ಷರಾ: 4ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು.

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– (ಹೆಚ್.ಪಿ.ಮಧು)
ಮುಖ್ಯಾಧಿಕಾರಿ
ಪುರಸಭೆ, ಪಿರಿಯಾಪಟ್ಟಣ

DIPR/MYS/1207/SA/2025-26

ಕೆಲಸಕ್ಕೆ ಬೇಕಾಗಿದ್ದಾರೆ

Aee Bee Auto LPG Gas ಬಂಕ್

ನೂತನವಾಗಿ ಪ್ರಾರಂಭವಾಗಿದೆ
ಸ್ಥಳ: ನಂಜುಮಳಿಗೆ ಸರ್ಕಲ್, ಮೈಸೂರು.
ಆಕರ್ಷಕ ವೇತನದೊಂದಿಗೆ ಅನುಭವವುಳ್ಳ ಗ್ಯಾಸ್ ಫಿಲ್ಲಿಂಗ್ ಪುರುಷರು ಕೂಡಲೇ ಬೇಕಾಗಿದ್ದಾರೆ (ವಸತಿ ಸೌಲಭ್ಯವಿದೆ)

ಸಂಪರ್ಕಿಸಿ: **9035217205**

WANTED

CONFECTIONERY CHEF

for a reputed Company

1. COOKIE MASTER
2. BAKLAVA MASTER

with minimum 2 years experience

Contact : 95358 12667 / 96060 13797

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲ್ಲೂಕು ವರುಣಾ ಹೋಬಳಿ ಸರ್ವೆನಂ 217 ರಲ್ಲಿ 19 ಗುಂಟೆ ಖುಷ್ಕಿ ಜಮೀನು ಮೂಲ ಮಾಲೀಕರಾದ ಎಚ್ ಬಸವಯ್ಯ ಬಿನ್ ರಾಚಯ್ಯ ರವರು ಎನ್‌ಎನ್ ಮುರಗೇಂದ್ರ ಬಿನ್ ಲೇಟ್ ಬಿ.ಎ. ನಟರಾಜುರವರು ಕ್ರಯಕ್ಕೆ ಪಡೆಯುತ್ತಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ ಏನೇ ತಂಟೆ ತಕರಾರು, ವ್ಯಾಜ್ಯಗಳು, ದೂರುಗಳು ಇದ್ದಲ್ಲಿ ಈ ಪ್ರಕಟಣೆಯ ಹತ್ತು ದಿನದೊಳಗೆ ಮನೆ ನಂ 160, 4ನೇ ಕ್ರಾಸ್, ಕೆಸರೆ ಎರಡನೇ ಹಂತ, ಹತ್ತಿರ ಇನ್‌ಸ್ಟ್ಯೂಟ್ ಆಫ್ ಎಜುಕೇಷನ್, ಮೈಸೂರು 570007 ಈ ವಿಳಾಸಕ್ಕೆ ಖುದ್ದಾಗಿ ಅಥವಾ ಪತ್ರ ಮುಖೇನ ಹಾಗೂ 9972428888 ಈ ನಂಬರಿಗೆ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿರುತದೆ. ವಾಯಿದೆಯ ತದನಂತರ ಬಂದಂತಹ ತಕರಾರು ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ತಮ್ಮ ಆವಗಾಹನೆಗೆ ತರಬಯಸುತ್ತಿದ್ದೇವೆ.

ಸಹಿ/– ಎನ್.ಎನ್. ಮುರಗೇಂದ್ರ

Sd/- B.M. Shashi Kiran, B.Sc, M.A, Llb: PGDCA
Advocate & Legal Consultant, KAR/2433/2011,
F-1/1, Khille Mohalla, New Road, 1st Cross, Gurukar Devanna Road, Mysuru-570004, Ph : 9342123370

ASTOR

ಪದಕಿ ಮತ್ತು ಡಿಆರ್‌ಸಿ ಸಿನಿಮಾಸ್ ಸಂಸ್ಥೆಯಿಂದ

ಆಸ್ಟರ್ ಸೆರೆನ್

ಚಿಕ್ಕಹಳ್ಳಿ, ಟಿ ನರಸೀಪುರ - ರಿಂಗ್ ರಸ್ತೆಯಿಂದ ಕೇವಲ 5 ನಿಮಿಷಗಳು!

30X40 | 30X50
SITES AVAILABLE

5 ವರ್ಷಗಳ ಉಚಿತ ನಿರ್ವಹಣೆ

ಹಬ್ಬದ ಕೊಡುಗೆ

97317 49500

CHANGE OF NAME

I, HABEEB ULLA KHAN S/o. AMEER KHAN Residing at # LIG 47, 1st Floor, Near Quba Masjid, Udayagiri, Mysore - 570019, Karnataka, India solemnly affirm on oath that I have changed my name from HABEEB ULLA KHAN S/o MOHAMMED AMEER to HABEEB ULLA KHAN S/o. AMEER KHAN vide affidavit sworn in before Notary C.R. Seetharam, Mysore on 11.11.2025.

Sd/- HABEEB ULLA KHAN

ಸೈಟು ಮಾರಾಟಕ್ಕಿದೆ

40x60, 59x70

ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ವಿಳಾಸ : ಆರ್.ಎಸ್. ನಾಯ್ಡುನಗರ, ಬಸ್ ನಿಲ್ದಾಣದ ಎದುರು, ಮೈಸೂರು.

9980620678

ಹಸಿರು ನಮ್ಮ ಉಸಿರು

Aquaguard & Kent Water Purifier

Sales & Service

9901200444

#319, Near Mega Medical Store, Kuvempunagar

Qalb
THE FARM RETREAT

Location: Qalb Retreat, Behind Infosys, Mysore

A reputed homestay/resort in Mysore is looking for a **Manager** to handle Marketing & Maintenance operations.

Key Responsibilities:

- Online and offline marketing of the homestay/resort
- Managing property maintenance and housekeeping teams
- Guest relations and smooth day-to-day operations
- Coordination with vendors, travel partners, and service providers

Requirements:

- Experience in hospitality or resort management
- Strong skills in digital/online marketing (social media, OTAs, etc.)
- Excellent communication & customer service skills
- Preferably with 3-5 years of relevant experience

Salary: Commensurate with experience

☎ : 9739588055
✉ : qalbretreat@gmail.com
🌐 : www.qalbretreat.in

G9 projects
Designing your Dreams

V ee2 Developers

ನವೆಂಬರ್ ಹಬ್ಬ

ಆಕರ್ಷಕ ರಿಯಾಯಿತಿ

ಪೂರ್ವ ಶೆಲ್ಟರ್ಸ್

30 - 11 - 2025 ಆಫರ್ ಕೊನೆಗೊಳ್ಳುತ್ತದೆ

20×30 | 30×40 20×40 | 30×50

ಮಾರ್ವೆಲ್ ಪಿಯು ಕಾಲೇಜು, ಲಲಿತಾದ್ರಿಪುರ ಹತ್ತಿರ ಮುಡಾ ಸೈಟುಗಳು ಲಭ್ಯ

8088-707-707

PRAKRUTHI PROPERTIES

FOR SALE

Residential & Commercial Properties At Mysore

40x60 Shardha Lyt, JP Ngr
30x40,40x60 KHB Kote Rd
20x30+ Kuvempu Nagar, Aravind Nagar, Srirampura

20x30 2 BHK @ 42L
20x30 3 BHK Duplex @ 58L
20x30 4 BHK Duplex @ 60L
Near Rainbow School, Bogadi

Sites @ Just 22 Lakh
BSNL Lyt, HD Kote Road, Near RT Nagar

2 BHK & 3 BHK
Apartments @ Prime Location in Mysore
Ramakrishna Nagar

Bookings Open



Bank Loan Available

95386 90359, 90359 90359

ಕಾರ್ನರ್ ಮನೆ ಮಾರಾಟಕ್ಕಿದೆ

12 x30, 36 ಲಕ್ಷ,
ಸಿಂಗಲ್ ಬೆಡ್‌ರೂಂ, ಬಸವೇಶ್ವರ ರಸ್ತೆ. ಸಂಪರ್ಕಿಸಿ:

9886695905
7829296767

WANTED

TELE CALLERS 12 Members

Good Basic Salary + Incentives

SAVENSA
BUSINESS SOLUTIONS PRIVATE LIMITED

No. 527/486, 3rd Floor, Pooja Complex, Dr. Rajkumar Kumar, Near Teresian College Signal, Yaraganahalli, New Extension, Mysore - 570011

Contact : 98802 30855

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

PUBLIC NOTICE

General public are hereby notified that, our client **Sri. P. V. Vishnu**, S/o. Sri. P. R. Vijaya Gopalan, residing at # 12/2, 2nd main, Opposite railway lane, Yadavagiri, Mysuru-20 is intending to purchase the schedule property from its owner Smt. M.S. Bharathi W/o Sri.S. Suresh, residing at # 789, 4th main, A-Block, 2nd stage, Rajaji Nagar, Bangalore and entering into an agreement of sale.

If any person/s claiming any kind of right or interest in and upon the schedule property, they may submit their objections if any in writing under register post acknowledgement due to our client or to the under signed within 10 days from the date of publication of this notice. If no such objection are received it will be construed that there are no objections to the transaction and our client will proceed further to complete the aforesaid sale transition in respect of the schedule property.

SCHEDULE

Vacant site bearing No.207/2/A, 207/2/AF/A, F-1/3/A, situated at 4th cross, Uttaradi Mutt road, Agrahara, Kille Mohalla, Mysuru (Ward No. 51), measuring east-west-4.876810 mtrs and north to south-7.010414 mtrs meters totally measuring 34.188304 sq.mtrs (Plinth area) bounded on east-Property bearing NO. 207/3, West road, North remaining portion of property bearing No. 207/2 property of Annapurnamma and Rajalakshmi, South property bearing No. 207/1.

Sd/- S. VIVEK,
S. T. USHARANI, Advocates,
OFFICE: No. 452, 1st floor, Room No. 5, "Shree Nanjundeshwara Complex" M. G. Road, Fort Mohalla, Mysuru-4

ನಿಮ್ಮ ಹಳೆಯ ಹಾಸಿಗೆ ಹತ್ತಿಯನ್ನು

ವಿದ್ಯುತ್ ಚಾಲಿತ ಯಂತ್ರದಿಂದ ಶುದ್ಧೀಕರಿಸಿ ನೂತನ ಹಾಸಿಗೆಯನ್ನು ತಯಾರಿಸಿಕೊಡುತ್ತೇವೆ.
ಸೂ: ನಿಮ್ಮ ಮನೆಯಿಂದ ಪಡೆಯುವುದು ಮತ್ತು ತಲುಪಿಸುವುದು ಉಚಿತ.

ಬಾಹುಸಾರ್ ಟ್ರೇಡಿಂಗ್ ಕಂ.

ನಂ.50, ಡಿ. ದೇವರಾಜ ಅರಸು ರಸ್ತೆ, ಮೈಸೂರು

9448062224, 0821-2427224

VIBHA TOURS LLP

WE'RE HIRING!

Join Mysuru's growing travel family!

TELECALLER
Strong communication skills, polite & confident in client handling.

MARKETING EXECUTIVE
Passion for sales & travel, target - driven personality.

Salary: As per industry Standards + Incentive

Location: Vijayanagar, Mysuru

CALL: 89719 78308
vibhatoursmysore@gmail.com

WALK IN INTERVIEW

FIELD SERVICE ENGINEER - Male - ITI/Diploma

FIELD SALES EXECUTIVE - Male / Female - Any Degree

TELE CALLER - Female Any Degree

Office Address:

MARUTHI ENTERPRISES

#76/R, Food Zone, Hootagalli Industrial area, Belavadi post, Mysore - 570018
Email ID : maruthiautomation@gmail.com

Ph: 0821/4243471/9343360044

FAME
FAROOKH ACADEMY OF MEDICAL EDUCATION
Nurturing Knowledge, Delivering Care.

FAROOKH ACADEMY OF MEDICAL EDUCATION HOSPITAL & RESEARCH INSTITUTE

Mysore - Madikeri Road, Near Ilavala, Hunsur Taluk, Mysore District - 571103

RECRUITMENT NOTICE

FAME, a well established and NMC reognised Medical college with intake of 100 MBBS seats is planning for expansion and increase of UG seats. Hence we are inviting applications for the posts of Professors, Associate Professors, Assistant Professors, Senior Resident in the following departments.

Anatomy	General Surgery	General Medicine	Anaesthesia
Physiology	Forensic Medicine	Paediatrics	OBG
Biochemistry	Ophthalmology	Psychiatry	Orthopaedics
Pharmacology	Microbiology	Dermatology	Radiology
ENT	Pathology	Community Medicine	

Applications are also invited for:

The posts of CMO, Technicians for CSSD, Emergency, OT, Blood Centre, Central Laboratory, Radiology, experienced Nursing Staff (BSc. & Msc.), Qualified Pharmacists, support staff and attenders.

HOSPITAL & ADMINISTRATIVE STAFF

Administrator (preferably with Military background), Administrative Officer, Operation Manager, Accounts Officer, HR Manager, Executive Assistant PRO, Marketing Manager, Librarian, IT & Maintenance Staff, Receptionists, Clerks, Warden (Boys/Girls).

Medical Superintendent, Deputy MS, Resident Medical Officers, Nursing Superintendent, Matron, Staff Nurses, Pharmacists, Technicians (Lab, Radiology, OT, Blood Bank),

Candidates with relevant qualifications and experience as per NMC norms may apply immediately to

email: hr@famehospital.com / ms@famehospital.com with the credentials.

Contact No. +91 97432 44355

Salary will be per the industry standards.